ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ನವೆಂಬರ್ 14, 2007 ರೂ.10/-



ಚೆನ್ನಿಗಪ್ಪನ ಮಗ ಮಚ್ಚು ಹಿಡಿದ



ರಾಯಚೂರು: ಅಂಕಲಗಿ ಮಠದಲ್ಲೊಬ್ಬ ಮಟ್ಕಾ ಸ್ವಾಮಿ



ಹುಂಡಿಗಾಗಿ ಅಷ್ಟ ಮಠಗಳ ಕಿತ್ತಾಟ

ಲೋಕಾಯುಕ್ತ ರೇಡ್: ಎಸ್ಕೇಪ್ ಆದ ಪೊಲೀಸರು

ವಿಜಯ್ ನಿಷೇಧ


ದೊಡ್ಡವರ ಸಣ್ಣತನ

ಬಾಬಿ ಜಿಂದಾಲ್-ಬಿಳಿಯರ ಭಜರಂಗಿ!

ಈತನ ಹೆಸರು ಬಾಬಿ ಜಿಂದಾಲ್. ಮೂಲ ಹೆಸರು ಪಿಯೂಶ್ ಜಿಂದಾಲ್. ಮೂಲ ಪಂಜಾಬಿಯಾದ ಈತ ಈಗ ಅಮೆರಿಕದ ಲೂಸಿಯಾನ ಪ್ರಾಂತ್ಯದ ಗವರ್ನರ್ ಆಗಿದ್ದಾನೆ. ಗವರ್ನರ್ ಅಂದರೆ ನಮ್ಮಲ್ಲಿ ಮುಖ್ಯಮಂತ್ರಿ ಇದ್ದಂತೆ! ಭಾರತೀಯ ಮೂಲದ ವ್ಯಕ್ತಿಯೊಬ್ಬ ಅಮೆರಿಕದ ಸಂಸ್ಥಾನವೊಂದರ ಮುಖ್ಯಮಂತ್ರಿಯಾಗುವುದೆಂದರೆ ಅದು ಪ್ರತಿಯೊಬ್ಬ ಭಾರತೀಯನ ಹೆಮ್ಮೆ ಎಂಬಂತೆ ಭಾರತೀಯ ಪತ್ರಿಕೆಗಳು ಕೊಂಡಾಡುತ್ತಿವೆ. ಇದು ಭಾರತವು ಒಂದು ಸೂಪರ್ ಪವರ್ ಆಗುತ್ತಿರುವುದಕ್ಕೂ ಸಂಕೇತ ಎಂಬಂತೆ ಬಣ್ಣಿಸುತ್ತಿದ್ದಾವೆ. ಹೌದೇ? ಬಾಬಿ ಜಿಂದಾಲ್ ಭಾರತದ ಹೆಮ್ಮೆಯೇ? ಮಾಧ್ಯಮಗಳಲ್ಲಿ ಬಾಬಿ ಜಿಂದಾಲ್ ಅಮೆರಿಕದಲ್ಲಿ ಭಾರತದ ಪತಾಕೆ ಎತ್ತರಿಸಿದವನು ಎಂಬ ಪ್ರಚಾರ ನಡೆಯುತ್ತಿರುವುದು, ಸಂಘಪರಿವಾರವು ಶೂದ್ರ ಜಾತಿ ಹಿನ್ನೆಲೆಯ ಪುರುಷ ಮತ್ತು ಮಹಿಳೆಯರಿಗೆ ಅಧಿಕಾರ ನೀಡಿ ಬ್ರಾಹ್ಮಣ್ಯದ ಅಜೆಂಡವನ್ನು ಪೂರೈಸಿಕೊಳ್ಳುತ್ತಿರುವುದನ್ನು ನೆನಪಿಗೆ ತರುತ್ತದೆ.



ವಾಸ್ತವವಾಗಿ ಬಾಬಿ ಜಿಂದಾಲ್‌ನ ಧೋರಣೆ ಮತ್ತು ಅಮೆರಿಕದ ರಾಜಕಾರಣದಲ್ಲಿ ಅವನ ಪಾತ್ರ ಈ ದೇಶದಲ್ಲಿ ಸಂಘಪರಿವಾರದ ನರಹಂತಕ ರಾಜಕಾರಣವನ್ನು ವ್ಯವಸ್ಥಿತವಾಗಿ ಅನುಷ್ಠಾನಕ್ಕೆ ತರುತ್ತಿರುವ ವಾನರಸೇನೆಯಾದ ಭಜರಂಗದಳಕ್ಕಿಂತ ಭಿನ್ನವಲ್ಲ. ಹೀಗಾಗಿಯೇ ಅಮೆರಿಕದ ಬಿಳಿಯ ಉದ್ಯಮಪತಿಗಳ ಮತ್ತವರ ಪ್ರತಿಗಾಮಿ ರಾಜಕಾರಣದ ಪ್ರತಿನಿಧಿಯಾಗಿರುವ ಬಾಬಿ ಜಿಂದಾಲ್ ಭಾರತೀಯನೇ ಆದರೂ ಭಾರತದ ಪರವಲ್ಲ. ಭಾರತಕ್ಕೆ ಕಳಂಕವೇ ಹೊರತು ಹೆಮ್ಮೆಯಲ್ಲ.



ಏಕೆಂದರೆ ಈ ದಿನಗಳಲ್ಲಿ ಕುಖ್ಯಾತಿಗೂ ಪ್ರಖ್ಯಾತಿಗೂ ನಡುವೆ ವ್ಯತ್ಯಾಸವೇ ಅಳಿಸಿಹೋಗುತ್ತಿದೆ. ಅದರಲ್ಲೂ ದಿನನಿತ್ಯದ ರಾಜಕಾರಣದಲ್ಲಿ ಮೌಲ್ಯಗಳನ್ನು ರೂಪಿಸುವುದರಲ್ಲಿ ಮಾಧ್ಯಮಗಳು ನಿರ್ಣಾಯಕ ಪಾತ್ರವನ್ನು ವಹಿಸುತ್ತಿವೆ. ಆದ್ದರಿಂದಾಗಿ ಜನವಿರೋಧಿ ಕಾರಣಗಳಿಗೂ ಕೆಲವರು ಖ್ಯಾತರಾಗುತ್ತಾರೆ. ಜನಪರವಾದ ಕಾರಣಗಳಿಗೂ ಕೆಲವರು ಖ್ಯಾತರಾಗುತ್ತಾರೆ. ಮಾಧ್ಯಮಗಳು ಎರಡನ್ನೂ ಸಾಧನೆ ಎಂಬಂತೆಯೇ ಬಿಂಬಿಸುತ್ತವೆ. ಹಿರೋಷಿಮಾದಲ್ಲಿ ಬಾಂಬ್ ಹಾಕಿದ ಪೈಲಟ್ ತನಗೆ ಅದರ ಬಗ್ಗೆ ಯಾವುದೇ ಖೇದವಿಲ್ಲವೆಂದು ಹೇಳುವುದು ಒಂದು ವೀರೋಚಿತವಾದ ಹೇಳಿಕೆಯೆಂಬಂತೆ ಬಿತ್ತರಗೊಳ್ಳುತ್ತದೆ. ಅದೇ ರೀತಿ ತಮ್ಮ ನಾಡಿನ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಪ್ಯಾಲೇಸ್ತೀನಿ ನಾಯಕರ ಹೇಳಿಕೆಯೂ ಒಂದು ರೋಚಕ ಸುದ್ದಿಯೆಂಬಂತೆ ಬಿತ್ತರಗೊಳ್ಳುತ್ತದೆ.

ಇದು ಸಾಮಾನ್ಯವಾಗಿ ಸುದ್ದಿಯೂ ಸರಕಾದ ನಂತರ ಭ್ರಷ್ಟಗೊಂಡ ಮಾಧ್ಯಮಗಳು ಸೃಷ್ಟಿಸುತ್ತಿರುವ ಪ್ರಪಂಚ. ಮಾತ್ರವಲ್ಲ ಮಾಧ್ಯಮವೇ ದೊಡ್ಡ ಉದ್ಯಮವಾದ ನಂತರ ಸಮಾನತೆ, ಸ್ವಾತಂತ್ರ್ಯ ಸ್ವಾಭಿಮಾನ ಮತ್ತು ಪ್ರಗತಿಪರ ಆಶಯಗಳುಳ್ಳ ಮೌಲ್ಯಗಳು ಮತ್ತು ಅದಕ್ಕಾಗಿ ಹೋರಾಡುತ್ತಿರುವ ವ್ಯಕ್ತಿ ಮತ್ತು ಸಂಘಟನೆಗಳನ್ನು ಮತ್ತು ಅವುಗಳು ಪ್ರತಿಪಾದಿಸುತ್ತಿರುವ ಮೌಲ್ಯಗಳನ್ನು ಬಹಳ ಪ್ರಜ್ಞಾಪೂರ್ವಕವಾಗಿ ರೋಚಕ ಸುದ್ದಿಗಳೆಂಬಂತೆ ಮಾತ್ರ ನೋಡುವ ತರಬೇತಿ ನೀಡಲಾಗುತ್ತಿದೆ. ಬದಲಾಗಿ ಅತ್ಯಂತ ಪ್ರತಿಗಾಮಿಯಾದ, ಉದ್ಯಮಿಗಳ ಪರವಾದ, ಕಾರ್ಮಿಕ ವಿರೋಧಿ, ಪುರುಷ ಪ್ರಧಾನ, ವರ್ಣ ಪಕ್ಷಪಾತಿ ನಿಲುವುಗಳಿಗೆ ಮಾನವೀಯ ಅಥವಾ ವಿತಂಡವಾದದ ಮುಖವಾಡ ತೊಡಿಸಿ ಬಹಳ ಯೋಜನಾಬದ್ಧವಾಗಿ ಪ್ರಚಾರ ಕೊಡಲಾಗುತ್ತಿದೆ. ಮತ್ತು ಅದನ್ನೇ ನಿಜವಾದ ಸಾಧನೆ ಎನ್ನುವ ಸುದ್ದಿ ಚಿತ್ರಗಳನ್ನೂ ಮತ್ತು ವ್ಯಕ್ತಿ ಚಿತ್ರಗಳನ್ನೂ ಉಣಬಡಿಸಲಾಗುತ್ತಿದೆ.


ಇಷ್ಟೆಲ್ಲಾ ಏಕೆ ಹೇಳಬೇಕಾಯಿತೆಂದರೆ ಲೂಸಿಯಾನದ ಗವರ್ನರ್ ಎಂದು ಆಯ್ಕೆಗೊಂಡಿರುವ ಬಾಬಿ ಜಿಂದಾಲ್ ಭಾರತದ ಹೆಮ್ಮೆಯೆಂದು ಹೊಗಳಲ್ಪಡುತ್ತಿರುವುದು ಮೇಲೆ ಹೇಳಲಾದ ಕಾರಣಗಳಿಗೇ ವಿನಃ ಅದರಲ್ಲಿ ಭಾರತೀಯರು ಹೆಮ್ಮೆ ಪಡುವುದಕ್ಕೆ ಏನೂ ಇಲ್ಲ. ಬಾಬಿ ಜಿಂದಾಲ್ ಸಕ್ರಿಯ ರಾಜಕಾರಣಕ್ಕೆ ಬಂದಾಗಿನಿಂದಲೂ ಅಲ್ಲಿನ ಬಿಳಿಯ ಉದ್ಯಮಿಗಳ ಪರವಾದ ಮತ್ತು ಅವರ ಸಾಮಾಜಿಕ ಮೌಲ್ಯವಾದ ವರ್ಣಭೇದ, ಜನಾಂಗೀಯ ದಬ್ಬಾಳಿಕೆ, ಯುದ್ಧಕೋರತನ, ಸ್ತ್ರೀ ಹಕ್ಕುಗಳ ವಿರೋಧ ಇವೆಲ್ಲವನ್ನೂ ಮಾಡಿಕೊಂಡು ಬಂದವರೇ. ಆದ್ದರಿಂದಲೇ ಅಲ್ಲಿನ ಆಳುವ ವರ್ಗಗಳ ಕಣ್ಮಣಿಯಾದವರು. ಭಾರತದಲ್ಲಿ ದಲಿತ ಶೂದ್ರ ಜಾತಿಗಳ ಹಿನ್ನೆಲೆಯಿಂದ ಬಂದಿದ್ದರೂ, ಮಹಿಳೆಯರಾಗಿದ್ದರೂ ಸಂಘಪರಿವಾರದ ಜನವಿರೋಧಿ ಮೌಲ್ಯಗಳನ್ನು ಪ್ರಚಾರ ಮಾಡುವುದರಲ್ಲಿ ಮುಂದಿರುತ್ತಾರಲ್ಲ....ಹಾಗೆ. ಉದಾಹರಣೆಗೆ ಶೂದ್ರಜಾತಿಯ ಹಿನ್ನೆಲೆಯಿಂದ ಬಂದ ಉಮಾ ಭಾರತಿ, ನರೇಂದ್ರ ಮೋದಿಗಳು ಮುಖ್ಯಮಂತ್ರಿಗಳಾದರೂ ಅವರು ಸೇವೆ ಮಾಡಿದ್ದು ಶೂದ್ರರನ್ನು ಕೀಳೆಂದು ಪರಿಗಣಿಸುವ ಸಂಘಪರಿವಾರಕ್ಕೆ ವಿನಃ ಶೂದ್ರ ಜನತೆಯ ವಿಮೋಚನೆಗಲ್ಲ. ಆದರೆ ಅದನ್ನೇ ಪರಿವಾರದವರು ಶೂದ್ರ ಮತ್ತು ಮಹಿಳೆಯರ ಸಬಲೀಕರಣ ಎಂದು ಜನತೆಯನ್ನು ಮೋಸಗೊಳಿಸುತ್ತಾರೆ. ಬಾಬಿ ಜಿಂದಾಲ್ ವಿಷಯದಲ್ಲೂ ಇದೇ ಆಗುತ್ತಿದೆ.


ಚಾರ್ವಾಕ

- ಶಿವಸುಂದರ್-

ಬಾಬಿ ಜಿಂದಾಲ್ ಹುಟ್ಟನಿಂದಲೂ ಸಂಪೂರ್ಣ ಅಮೆರಿಕದವನೇ ಆಗಿಬಿಡಲು ಪ್ರಯತ್ನ ಪಡುತ್ತಿದ್ದವನೇ ವಿನಃ ತನ್ನ ಭಾರತೀಯ ಮೂಲದ ಬಗ್ಗೆ ಎಂದೂ ಆತನಿಗೆ ಹೆಮ್ಮೆ ಇರಲಿಲ್ಲ. ಆತನ ಮೂಲ ಹೆಸರು ಪಿಯೂಶ್ ಜಿಂದಾಲ್. ಇದು ತನ್ನ ಮೂಲ ಭಾರತೀಯತೆಯನ್ನು ಪ್ರಕಟಪಡಿಸುತ್ತಿತ್ತಾದ್ದರಿಂದ ಬಾಲ್ಯದಲ್ಲೇ ಆತ ತನ್ನ ಹೆಸರಿನಲ್ಲಿನ ಪಿಯೂಶ್ ಅನ್ನು ತೆಗೆದುಹಾಕಿದ. ಅದರ ಬದಲಿಗೆ ಬಾಬಿ ಎಂದು ಹೆಸರಿಟ್ಟುಕೊಳ್ಳಲು ಆಗ ಅಮೆರಿಕದಲ್ಲಿ ಅತ್ಯಂತ ಜನಪ್ರಿಯವಾಗಿದ್ದ ಬಿಳಿಯ ಮೌಲ್ಯಗಳನ್ನು ಬಿತ್ತುತ್ತಿದ್ದ "ದಿ ಬ್ರಾಡಿ ಬಂಚ್" ಎಂಬ ಧಾರವಾಹಿಯ ನಾಯಕ ಪಾತ್ರವೇ ಸ್ಫೂರ್ತಿಯಾಗಿತ್ತು. ಅದೇರೀತಿ ತಾನು ಪ್ರಾಪ್ತ ವಯಸ್ಸಿಗೆ ಬಂದ ತಕ್ಷಣ ತನ್ನನ್ನು ಬಿಳಿಯರು ನಂಬಬೇಕೆಂಬ ಆಶೆಯಿಂದ ರೋಮನ್ ಕ್ಯಾಥೋಲಿಕ್ ಧರ್ಮಕ್ಕೆ ಮತಾಂತರಗೊಂಡ. ಇದರಲ್ಲಿ ಕ್ರಿಶ್ಚಿಯನ್ ಧರ್ಮದ ಬಗ್ಗೆ ವಿಶ್ವಾಸಕ್ಕಿಂತಲೂ ಬಿಳಿಯರನ್ನು ನಂಬಿಸುವ ಮತ್ತು ಅವರಂತೆ ಆಗುವ ಪ್ರಯತ್ನವೇ ಮುಖ್ಯವಾಗಿತ್ತು. (ನಮ್ಮಲ್ಲಿ ದಲಿತ ಶೂದ್ರ ಹಿನ್ನೆಲೆಯುಳ್ಳ ಶ್ರೀಮಂತರು ತಾವು ಸಾಂಸ್ಕೃತಿಕವಾಗಿಯೂ ಉನ್ನತ ವರ್ಗದವರೆಂದು ಸಾಬೀತುಪಡಿಸಲು ವರಮಹಾಲಕ್ಷ್ಮಿ ಪೂಜೆ, ಸತ್ಯನಾರಾಯಣ ವ್ರತ ಇತ್ಯಾದಿಗಳನ್ನು ಮಾಡುವುದು, ನಾನ್ ವೆಜ್ ತಿನ್ನುವುದನ್ನು ಬಿಟ್ಟುಬಿಡುವುದನ್ನು ಮಾಡುತ್ತಾರಲ್ಲ ಹಾಗೆ. ಏಕೆಂದರೆ ಇಲ್ಲಿ ಎಷ್ಟೇ ಉನ್ನತಿ ಪಡೆದರೂ ಬ್ರಾಹ್ಮಣ ಜಾತಿಗೆ ಜಾತ್ಯಾಂತರ ಸಾಧ್ಯವಿಲ್ಲವಲ್ಲ. ಅದೇ ರೀತಿ ಅಮೆರಿಕದಲ್ಲೂ ಅಬ್ಬಬ್ಬಾ ಎಂದರೆ ಕ್ರಿಶ್ಚಿಯನ್ ಆಗಬಹುದೇ ವಿನಃ ಬಿಳಿಯನಾಗಲೂ ಸಾಧ್ಯವಿಲ್ಲ!).

ಪಿಯೂಶ್ ಬಾಬಿ ಜಿಂದಾಲ್ ಆಗಿ ಸಕ್ರಿಯ ರಾಜಕಾರಣಕ್ಕೆ ಬಂದ ಮೇಲೆ ಆತ ಆಯ್ದುಕೊಂಡ ಪಕ್ಷವಾದರೂ ಯಾವುದು? ಅಮೆರಿಕದ ರಾಜಕಾರಣದಲ್ಲಿ ಎರಡು ಪ್ರಧಾನ ಪಕ್ಷಗಳಿವೆ. ಒಂದು ಬುಷ್ ನೇತೃತ್ವದ ರಿಪಬ್ಲಿಕನ್ ಪಕ್ಷ, ಎರಡನೆಯದು ಈ ಹಿಂದೆ ಅಮೆರಿಕದ ಅಧ್ಯಕ್ಷನಾಗಿದ್ದ ಕ್ಲಿಂಟನ್‌ನ ಡೆಮಾಕ್ರಾಟಿಕ್ ಪಕ್ಷ. ರಿಪಬ್ಲಿಕನ್ ಪಕ್ಷ ಪ್ರಧಾನವಾಗಿ ಅಮೆರಿಕದ ಬಿಳಿಯ ಜನಾಂಗವಾದಿಗಳ, ಶ್ರೀಮಂತರ, ಮೇಲ್ ಮಧ್ಯಮವರ್ಗದವರ ಮತ್ತು ಉದ್ಯಮಪತಿಗಳ ಆಸಕ್ತಿಯನ್ನು ಬಹಿರಂಗವಾಗಿಯೇ ಎತ್ತಿ ಹಿಡಿಯುವ ಮತ್ತು ಅಮೆರಿಕದ ಆಸಕ್ತಿಯ ಹೆಸರಲಿ ಭಾರತವನ್ನೂ ಒಳಗೊಂಡಂತೆ ಇಡಿ ವಿಶ್ವವೇ ತನ್ನ ಅಡಿಯಾಳಾಗಿರಬೇಕೆಂದು ಬಯಸುವ, ನಮ್ಮ ದೇಶದ ಬಿಜೆಪಿಯ ತರಹದ ಅತ್ಯಂತ ಪ್ರತಿಗಾಮಿ ಪಕ್ಷ.






ಡೆಮಾಕ್ರಟಿಕ್ ಪಕ್ಷ ಇನ್ನು ತೋರಿಕೆಗಾದರೂ ಅಮೆರಿಕದ ಕರಿಯರ, ಬಿಳಿಯರಲ್ಲದ ಇತರ ಜನಾಂಗಗಳ ಬಗೆಗೆ ಮತ್ತು ಅಲ್ಲಿನ ಬಡವರ ಬಗೆಗೆ ಮಾತಾಡುವ ಪಕ್ಷ. ಆದರೆ ಅವರ ಹೆಸರಲ್ಲಿ ಅಧಿಕಾರಕ್ಕೆ ಬಂದು ರಿಪಬ್ಲಿಕನ್ನರ ತರ ಅಮೆರಿಕನ್ ಉದ್ಯಮಪತಿಗಳ ಮತ್ತು ಅವರ ಸಾಮಾಜಿಕ ಮೌಲ್ಯಗಳಿಗೆ ಸೇವೆ ಮಾಡುವ ಪಕ್ಷವೇ. ಅಂದರೆ ಇಲ್ಲಿನ ಕಾಂಗ್ರೆಸ್ ಪಕ್ಷದ ತರ. ಆದರೂ ಅಮೆರಿಕದ ರಾಜಕಾರಣದಲ್ಲಿ ಶೋಷಿತರು, ಬಿಳಿಯರಲ್ಲದ ಜನಾಂಗಗಳು ತಮ್ಮ ಆಕಾಂಕ್ಷೆಯನ್ನು ಬಿತ್ತರಿಸಲು ಆಯ್ದುಕೊಳ್ಳುವುದು ಡೆಮಾಕ್ರಟಿಕ್ ಪಕ್ಷವನ್ನೇ ವಿನಃ ರಿಪಬ್ಲಿಕನ್ ಪಕ್ಷವನ್ನಲ್ಲ. ಆದರೆ ಬಿಳಿಯರು ಯಾವಾಗಲೂ ಉಪೇಕ್ಷೆಯಿಂದ ಕಾಣುವ ಭಾರತೀಯನಾದ ಬಾಬಿ ಜಿಂದಾಲ್ ಆರಿಸಿಕೊಂಡಿದ್ದು ಅತ್ಯಂತ ಜನಾಂಗೀಯವಾದಿ ರೇಸಿಸ್ಟ್ ರಿಪಬ್ಲಿಕನ್ ಪಕ್ಷವನ್ನು.

ತನ್ನ ಸಕ್ರಿಯ ರಾಜಕಾರಣದಲ್ಲಿ ಈ ಬಾಬಿ ಉದ್ದಕ್ಕೂ ಯಾರ ಪರವಾಗಿ ನಿಂತರು?

-ಎರಡು ವರ್ಷದ ಕೆಳಗೆ ಅವರು ಈಗ ಗವರ್ನರ್ ಆಗಿರುವ ಲೂಸಿಯಾನ ರಾಜ್ಯದ ಮೇಲೆ ದಾಳಿ ಇಟ್ಟ ಕತ್ರೀನ ಚಂಡಮಾರುತ ಇಡಿ ಪ್ರಾಂತ್ಯದ ಜನರ ಬದುಕನ್ನೇ ಅಲ್ಲೋಲಕಲ್ಲೋಲಗೊಳಿಸಿತು. ಆದರೆ ಅದರಲ್ಲಿ ಪ್ರಧಾನವಾಗಿ ಬಾಧೆಗೊಳಗಾಗಿದ್ದು, ಬೀದಿಪಾಲಾದದ್ದು ಬಡ ಕರಿಯರೇ! ಆದರೆ ಆ ಪ್ರಾಂತ್ಯದ ಪ್ರಮುಖ ರಾಜಕಾರಣಿಯಾಗಿದ್ದ ಮತ್ತು ಜನ ಪ್ರತಿನಿಧಿಯೂ ಆಗಿದ್ದ ಬಾಬಿ ಜಿಂದಾಲ್ ಪರಿಹಾರದ ಯೋಜನೆಗಳಲ್ಲಿ ಕರಿಯರಿಗೆ ಮತ್ತು ಬಡವರಿಗೆ ಆಗುತ್ತಿದ್ದ ಅನ್ಯಾಯದ ಬಗ್ಗೆ ಒಂದು ಬಾರಿಯೂ ಧ್ವನಿ ಎತ್ತಲಿಲ್ಲ. (ಇಲ್ಲಿ ಸುನಾಮಿ ಸಂತ್ರಸ್ತರಿಗೆ ಪರಿಹಾರ ಹಂಚುವಲ್ಲಿ ದಲಿತರಿಗೆ ಆದ ಅನ್ಯಾಯದ ಬಗ್ಗೆ ಮತ್ತು ಗುಜರಾತಿನಲ್ಲಿ ಭೂಕಂಪವಾದಾಗ ಮುಸ್ಲಿ ಸಂತ್ರಸ್ತರಿಗೆ ಆದ ತಾರತಮ್ಯದ ಬಗ್ಗೆ ಬಿಜೆಪಿಯ ದಲಿತ ಮತ್ತು ಮುಸ್ಲಿಂ ರಾಜಕಾರಣಿಗಳು ಬಾಯಿ ಮುಚ್ಚಿಕೊಂಡು ಸುಮ್ಮನಿದ್ದರಲ್ಲ ಹಾಗೆ!).

-ಅದೇರೀತಿ ಸಾಮಾಜಿಕ ಮೌಲ್ಯಗಳ ಪ್ರಶ್ನೆ ಬಂದಾಗ ಹೆಂಗಸರ ಸ್ವಾಭಾವಿಕ ಹಕ್ಕಾಗಿರುವ ಬೇಡದ ಗರ್ಭವನ್ನು ನಿವಾರಿಸಿಕೊಳ್ಳುವ ಗರ್ಭಪಾತದ ಹಕ್ಕಿನ ವಿರುದ್ಧ ಶ್ರೀಮಾನ್ ಜಿಂದಾಲ್‌ರವರು ಸತತ ಆಂದೋಲನ ನಡೆಸಿದ್ದಾರೆ. ಹೀಗೆ ಮಹಿಳಾ ವಿರೋಧಿ ಮೌಲ್ಯಗಳಿಗೆ ಸನ್ಮಾನ್ಯ ಜಿಂದಾಲರು ಪ್ರಖ್ಯಾತರು.



-ಈಗ ಎಲ್ಲೆಲ್ಲೂ ವಾತಾವರಣದಲ್ಲಿ ತಾಪಮಾನ ಏರಿಕೆಯದ್ದೇ ಚರ್ಚೆ. ಈ ಜಗತ್ತು ಉಳಿಯಬೇಕೆಂದರೆ ಅಮೆರಿಕದಂತ ರಾಷ್ಟ್ರಗಳು ತಮ್ಮ ಉದ್ಯಮಗಳಿಗೆ ಕಡಿವಾಣ ಹಾಕಬೇಕಿದೆ. ಅದರಲ್ಲೂ ಕಾರ್ಬನ್ ಉಗುಳುವ ವಸ್ತುಗಳ ಬಳಕೆ ಮತ್ತು ಉತ್ಪಾದನೆಯನ್ನು ಕಡಿಮೆ ಮಾಡಲೇಬೇಕಿದೆ. ಆದರೆ ಜಿಂದಾಲರು, ಜಗತ್ತು ಹೇಗಾದರೂ ಇರಲಿ ಅಮೆರಿಕದ ಉದ್ಯಮಿಗಳ ಲಾಭಕ್ಕೆ ಕಡಿವಾಣ ಬೀಳಬಾರದೆಂಬ ನಿಲುವಿನಿಂದಾಗಿ ಪರಿಸರ ವಿರೋಧಿಯೂ ಆಗಿದ್ದಾರೆ. ಹೀಗಾಗಿಯೇ ಅಮೆರಿಕದ ಅತಿ ಹೆಚ್ಚು ಪರಿಸರ ವಿರೋಧಿ ರಾಜಕಾರಣಿಗಳಲ್ಲಿ ಜಿಂದಾಲರು ಕಳೆದು ಮೂರು ನಾಲ್ಕು ವರ್ಷಗಳಿಂದ ಮೊದಲ ಸಾಲಿನಲ್ಲಿ ಇದ್ದಾರೆ.

-ಇದಲ್ಲದೆ ಅಮೆರಿಕದ ಶ್ರೀಮಂತರಿಗೆ ಇನ್ನೂ ಹೆಚ್ಚು ತೆರಿಗೆ ರಿಯಾಯಿತಿ ನೀಡಬೇಕೆಂಬ ಷೆಲ್ಟಿ ಟ್ಯಾಕ್ಸ್ ಪ್ಲಾನಿಗೆ ಇವರೇ ಕಾರಣಕರ್ತರು. ಇದು ಅಮೆರಿಕದ ಖಜಾನೆಯಲ್ಲಿ ಬಡವರಿಗಾಗಿ ಖರ್ಚು ಮಾಡುವ ಹಣದ ಪಾಲನ್ನು ಇನ್ನಷ್ಟು ಕಡಿಮೆ ಮಾಡುತ್ತಲೇ ಹೋಗುತ್ತದೆ.

-ಎಲ್ಲಕ್ಕಿಂತ ಹೆಚ್ಚಾಗಿ ಭಾರತವನ್ನೂ ಒಳಗೊಂಡಂತೆ ಇಡೀ ಪ್ರಪಂಚವೇ ಇರಾಕ್ ಮೇಲೆ ಅಮೆರಿ[...] ಆಕ್ರಮಣವನ್ನು ಖಂಡಿಸುತ್ತಿರುವಾಗ ಜಿಂದಾಲ್ ಅತ್ಯ[...] ನಿಷ್ಠವಾಗಿ ಬುಷ್ ಪರವಾಗಿ ನಿಂತವರು. ಇರಾಕ್ [...] ಮಣದಲ್ಲಿ ಯಶಸ್ವಿಯಾಗಿದ್ದಕ್ಕೆ ಹಬ್ಬವನ್ನು ಆಚರಿಸಿದವ[...]

- ಈಗ ಲೂಸಿಯಾನದ ಗವರ್ನರ್ ಆಗಿ ಆ[...] ಯಾದ ಮೇಲೆ ಭಾರತದ ಆಸಕ್ತಿಗೆ ವಿರುದ್ಧವಾಗಿರು[...] ಮತ್ತು ಅಮೆರಿಕದ ಅಣು ಉದ್ಯಮಿಗಳ ಆಸಕ್ತಿಯ[...] ಮಾತ್ರ ಪೂರೈಸುವ ಅಣು ಒಪ್ಪಂದಕ್ಕೆ ಸಹಿ ಹಾ[...] ಬೇಕೆಂದು ಮನಮೋಹನ ಸಿಂಗರ ಮೇಲೆ ಒತ್ತ[...] ತರುತ್ತಿದ್ದಾರೆ.

ಇದು ಶ್ರೀಮಾನ್ ಬಾಬಿ ಜಿಂದಾಲರ ಜನ ವಿರೋ[...] ಮತ್ತು ಭಾರತದಂತಹ ಬಡ ದೇಶಗಳ ವಿರೋ[...] ರಾಜಕಾರಣದ ಕೆಲವು ಸ್ಯಾಂಪಲ್ಲುಗಳಷ್ಟೆ. ಹೀಗೆ [...] ನಿಷ್ಠಾವಂತ ಸೇವಕನಾಗಿಯೇ ವರ್ತಿಸುವ ಬಾ[...] ಜಿಂದಾಲರನ್ನು ಅಮೆರಿಕದ ಉದ್ಯಮಪತಿಗಳೆಲ್ಲಾ ಅತ್ಯ[...] ಉತ್ಸಾಹದಿಂದ ಬೆಂಬಲಿಸಿದ್ದಾರೆ. ಅವರ ಒಡೆತನದ[...] ಇರುವ ಮಾಧ್ಯಮಗಳೂ ಹಿಂದೆಂದೂ ಇಲ್ಲದಷ್ಟು ಪ್ರಚಾ[...] ಕೊಟ್ಟಿವೆ. ಅಲ್ಲದೆ ಬಿಳಿಯನಲ್ಲದ ಆತನ ಭಾರತೀಯ[...] ರಿಪಬ್ಲಿಕನ್ ಪಕ್ಷಕ್ಕೆ ಭಾರತೀಯರ ಮತ್ತು ಬಿಳಿಯರಲ್ಲ[...] ಇತರ ಜನಾಂಗಗಳ ಮತವನ್ನು ತಂದು ಕೊಟ್ಟಿದೆ. ಮ[...] ಆ ಮೂಲಕ ಡೆಮಾಕ್ರಸಿಯ ಹೆಸರಲ್ಲಿ ಬಿಳಿಯ ಉದ್ಯ[...] ಪತಿಗಳ ತಾರತಮ್ಯ ಪೂರಿತ ಆಳ್ವಿಕೆಗೆ ಇನ್ನಷ್ಟು ಸಾಮಾಜ[...] ಮಾನ್ಯತೆಯನ್ನೂ ಗಳಿಸಿಕೊಟ್ಟಿದೆ.

ಆದ್ದರಿಂದಲೇ ನಮ್ಮ ಬೆರಳಿಂದಲೇ ನಮ್ಮ ಕಣ್ಣ[...] ಚುಚ್ಚಿಸುವ ಹುನ್ನಾರಗಳ ಭಾಗವಾದ ಬಾಬಿ ಜಿಂದಾಲ[...] ಆಯ್ಕೆ ಭಾರತಕ್ಕೆ ಹೆಮ್ಮೆಯ ಸಂಗತಿಯಲ್ಲ. ಆ[...] ಪ್ರತಿನಿಧಿಸುವುದು ಇಡೀ ವಿಶ್ವವನ್ನೇ ಕಬಳಿಸಬಯಸು[...] ಇತರ ಮಾನವ ಜೀವಿಗಳನ್ನು ತಿಂದು ಬದುಕ ಬಂ[...] ಸುವ ವ್ಯವಸ್ಥೆಯನ್ನೇ ಹೊರತು ಸ್ವಾಭಿಮಾನ, ಸ್ವಾ[...] ಲಂಬನೆ, ಸೌಹಾರ್ದ, ಅನುಕಂಪ, ಸಮಾನತೆ[...] ಆಶಯಗಳನ್ನುಳ್ಳ ಭಾರತವನ್ನಲ್ಲ. ಹೀಗಾಗಿ ಬಾಬಿ ಜಿಂದಾಲ[...] ಲೂಸಿಯಾನದ ಗವರ್ನರ್ ಆದದ್ದು ಭಾರತಕ್ಕೆ ಒಂದ[...] ಕಳಂಕವೇ ಹೊರತು ಹೆಮ್ಮೆಯ ಸಂಗತಿಯಲ್ಲ.

No Comments



"ಪ್ರಧಾನಿಯವರು ತಮ್ಮ ಹುದ್ದೆಯಲ್ಲಿ ಮುಂದುವರೆಯಬೇಕೆಂದೇ ನಾವು ಬಯಸುತ್ತೇವೆ."
-ಪ್ರಕಾಶ್ ಕಾರಟ್

"ಮಹಾರಾಷ್ಟ್ರ ರಾಜ್ಯಪಾಲ ಎಸ್.ಎಂ.ಕೃಷ್ಣರನ್ನು ಟೀಕಿಸಿರುವ ಮಾಜಿ ಪ್ರಧಾ[...] ದೇವೇಗೌಡರು ಮೊದಲು ತಮ್ಮ ಎಲೆಯಲ್ಲಿ ಬಿದ್ದಿರು[...] ಹೆಗ್ಗಣ ಗಮನಿಸದೆ ಬೇರೆಯವರ ಎಲೆಯ ಮೇಲಿ[...] ನೊಣವನ್ನು ಓಡಿಸಲು ಹೊರಟಿದ್ದಾರೆ."
-ಕಾಂಗ್ರೆಸ್ ನಾಯಕ[...]

"ಹೈ ಕಮಾಂಡ್ ಒಪ್ಪಿದರೆ ಡಿಸಿಎಂ ಆಗಲು ಸಿದ್ಧ[...]
-ಮೆರಾಜುದ್ದೀನ್ ಪಟೇಲ್

"ನಾನು ನನ್ನ ಹೆಂಡತಿಯನ್ನೂ ಹೆಡ್‌ಲೆಸ್ ಚಿಕ[...] ಎಂದೇ ಕರೆಯುತ್ತೇನೆ."



-ಭಾರತದ ಸಂಸದರನ್[...] ಹೆಡ್‌ಲೆಸ್ ಚಿಕನ್ ಎಂದ[...] ದೂಷಿಸಿದ್ದ ಅಮೆರಿಕದಲ್ಲಿ[...] ಭಾರತದ ರಾಯಭಾ[...] ರೋನೆನ್ ಸೇನ್

ನಂಬಿದ್ರೆನಂಬಿ ಬಿಟ್ರೆಬಿಡಿ

"ರಾಜ್ಯದಲ್ಲಿ ಉಂಟಾಗಿರುವ ಅನಿಶ್ಚಿತತೆಗೆ ಶುಕ್ರವಾರ ತೆರೆ ಬೀಳಲಿದೆ."
-ಯಡ್ಯೂರಪ್ಪ



"371ನೇ ಕಲಮಿನ ತಿದ್ದುಪಡಿಗೆ ಒತ್ತಾಯಿಸುವ ಕೊನೆ ಹೋರಾಟವಿದು. ಇನ್ನು ಪ್ರತ್ಯೇಕ ರಾಜ್ಯಕ್ಕೇ ಹೋರಾಟ ನಡೆಸುತ್ತೇವೆ."
-ವೈಜನಾಥ ಪಾಟೀಲ್

"ಬಿಜೆಪಿಗೆ ಬೇಷರತ್ ಬೆಂಬಲ ನೀಡುವುದಾ[...] ಹೇಳಿಲ್ಲ"
-ಕುಮಾರಸ್ವಾ[...]



"ಹುದ್ದೆ ಬೇಕಿಲ್ಲ... ಪಕ್ಷ ಬಿಡೊಲ್ಲ!"
-ಎಂ. ಪಿ. ಪ್ರಕಾ[...]


"ಭಯೋತ್ಪಾದಕರ ವಿರು[...] ಹೋರಾಡುವಾಗ ಸೇನೆಯ[...] ಮಾನವ ಹಕ್ಕುಗಳನ್ನು ಕಾಪಾಡುತ್ತದೆ."
-ಸೇನಾಧಿಕಾರಿ ಎ.ಎಸ್.ಸೆಕಾ[...]

ಪ್ರೀತಿ ಸಾಯಲು ಬಿಡದವರ ಕುರಿತು



ಕಂಡಹಾಗೆ

ಕೆಲವು ಸ್ನೇಹಗಳು ಹೇಗಿರುತ್ತವೆಂದರೆ ಕೆಲದಿನಗಳ ಬ್ರೇಕ್ ನಂತರ ಭೇಟಿಯಾದರೆ ಆ ದಿನಗಳಲ್ಲಿ ತಮ್ಮ ತಮ್ಮ ಬದುಕಿನಲ್ಲಿ ಏನೇನು ನಡೆಯಿತು ಎಂದು ವಿವರಿಸಿದ ನಂತರವೇ ಆಪ್ತತೆಯ ಸೇತುವೆ ನಿರ್ಮಾಣವಾಗುತ್ತದೆ. ಆದರೆ ಮತ್ತೊಂದು ರೀತಿಯ ಸ್ನೇಹವಿರುತ್ತದೆ. ಹಲವು ತಿಂಗಳುಗಳ ಅಥವಾ ವರ್ಷಗಳ ನಂತರವೇ ಭೇಟಿಯಾದರೂ ಯಾವುದನ್ನೂ ವಿವರಿಸುವ ಅಗತ್ಯತೆ ಇಲ್ಲದೆ ಸಹಜವಾಗಿಯೇ ಆಪ್ತತೆ ಏರ್ಪಡುತ್ತದೆ. ಅಂದರೆ ಮೊದಲನೆ ತರಹದ ಸ್ನೇಹ ಮೇಲ್‌ಸ್ತರದ್ದಾಗಿದ್ದು, ಎರಡನೇ ರೀತಿಯ ಸ್ನೇಹ ನಿಜವಾದ ಮನಸ್ಸಿನಾಳದಿಂದ ಚಿಮ್ಮುವ ಸ್ನೇಹವಾಗಿದ್ದು ಅದನ್ನು ಕಾಲ ಅಳಿಸುವುದಿಲ್ಲ.



ಪ್ರೇಮಾ ಕಾರಂತ್

ಇದನ್ನು ಯಾಕೆ ಹೇಳಿದೆನೆಂದರೆ, ಪ್ರೇಮಾಕಾರಂತ್ ಮತ್ತು ನನ್ನ ನಡುವಿನ ಆಪ್ತತೆ ಎರಡನೆ ರೀತಿಯದ್ದಾಗಿತ್ತು. ನಮ್ಮಿಬ್ಬರ ನಡುವೆ ಎಂದೋ ಒಮ್ಮೆ ಭೇಟಿ, ಅದೆಷ್ಟೋ ತಿಂಗಳ ಅಂತರದಲ್ಲಿ ಫೋನ್‌ನಲ್ಲಿ ಸಂಭಾಷಣೆ, ಆದರೂ ಎಂದೆಂದಿಗೂ ಇದ್ದ ಪರಸ್ಪರ ಮಮತೆ.

ಪ್ರೇಮಾ ಕಾರಂತ್‌ರನ್ನು ಮೊದಲು ಭೇಟಿಯಾಗಿದ್ದು ನಾನು ಹೈಸ್ಕೂಲಿನಲ್ಲಿದ್ದಾಗ. ಬಿ.ವಿ.ಕಾರಂತರು ನಿರ್ದೇಶಿಸಿದ್ದ 'ಇಸ್ಪೀಟು ರಾಜ್ಯ' ನಾಟಕದಲ್ಲಿ ಆಟೀನ್ ರಾಣಿಯಾಗಿ ನಟಿಸಿದ್ದಾಗ. ಆ ನಾಟಕಕ್ಕೆ ವಸ್ತ್ರಾಲಂಕಾರ ಮಾಡಿದ್ದು ಪ್ರೇಮಾರವರು. ರವೀಂದ್ರ ಕಲಾಕ್ಷೇತ್ರದಲ್ಲಿ ನಾವು ನಾಟಕವನ್ನಾಡಿದ ದಿನ ಇನ್ನೂ ನೆನಪಿದೆ. ವಿವಿಧ ವಯಸ್ಸಿನ ಸುಮಾರು ನಲವತ್ತು ಮಕ್ಕಳು, ಒಬ್ಬರದ್ದು ಒಂದು ರೀತಿಯ ದೂರಾದರೆ, ಇನ್ನೊಬ್ಬರದ್ದು ಇನ್ನೊಂದು ರೀತಿಯ ಸಮಸ್ಯೆ. ಪ್ರೇಮಾರವರು ಸ್ವತಃ ಮಕ್ಕಳ ಕಾಸ್ಟ್ಯೂಮ್‌ಗಳನ್ನು ಇಸ್ತ್ರಿ ಮಾಡುತ್ತಾ ಎಲ್ಲ ಮಕ್ಕಳ ಕುಂದುಕೊರತೆಗಳನ್ನು ನಿವಾರಿಸಲು ಪ್ರಯತ್ನಿಸುತ್ತಿದ್ದರು. ಅದಕ್ಕೂ ಮುನ್ನ ಆಕೆ ಸ್ವಲ್ಪ ಮುಂಗೋಪಿ, ತುಂಬಾ ಸ್ಟ್ರಿಕ್ಟ್ ಎಂದು ಕೇಳಿದ್ದ ನನಗೆ ಆ ಶಾಂತಚಿತ್ತದ ಪ್ರೇಮಾರವರನ್ನು ಕಂಡು ಅಚ್ಚರಿಯಾಗಿತ್ತು.

ಕಾರಂತರೊಂದಿಗಿನ ಪ್ರೇಮಾರವರ ದಾಂಪತ್ಯ ಜೀವನ ಬಹಳಷ್ಟು ಕಷ್ಟ ಮತ್ತು ನೋವುಗಳಿಂದ ಕೂಡಿದ್ದವು ಎಂಬುದನ್ನು ಎಲ್ಲರೂ ಬಲ್ಲರು. ಆದರೆ ಇದ್ಯಾವುದೂ ಪ್ರೇಮಾರವರ ವ್ಯಕ್ತಿತ್ವವನ್ನು ಕುಗ್ಗಿಸಲಿಲ್ಲ. ಬದಲಾಗಿ ಅವರು ತಮ್ಮ ನಾಟಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು, ಕಾರಂತರ ಗಣ್ಯತೆಗೆ ಯಾವುದೇ ಚ್ಯುತಿ ಬಾರದಂತೆ ನೋಡಿಕೊಂಡರು.

ಕಾರಂತರ ಕೊನೆ ದಿನಗಳು ಕೂಡಾ ಪ್ರೇಮಾರವರಿಗೆ ಒಂದು ಸವಾಲಾಗಿದ್ದವು. ಕಾರಂತರನ್ನು ಇನ್ನಷ್ಟು ಕಾಲ ಕೃತಕ ಘಟಕದಲ್ಲಿಡಲು ವೈದ್ಯರು ಸಲಹೆಯಿಟ್ಟಿದ್ದರೂ ಕಾರಂತರಿಗೆ ಇನ್ನಷ್ಟು ತೊಂದರೆ ನೀಡಬಾರದೆಂದು ಪ್ರೇಮಾ ನಿರ್ಧರಿಸಿದರು. ಅವತ್ತು ನಡೆದ ಎರಡು ಘಟನೆಗಳು ನೆನಪಿವೆ. ಕಾರಂತರಿಗೆ ಜೋಡಿಸಿದ್ದ ಕೃತಕ ಯಂತ್ರಗಳನ್ನು ನಿಲ್ಲಿಸಲು ಆದೇಶಿಸಿ ಮನೆಗೆ ಹಿಂದಿರುಗಿದ್ದ ಪ್ರೇಮಾರವರು ಒಂದು ಚೆಕ್ ಹಿಡಿದು ಕೂತಿದ್ದರು. ಕಾರಂತರ ಚಿಕಿತ್ಸೆಗೆಂದು ಯಾರೋ ಅಭಿಮಾನಿ ಕಳುಹಿಸಿದ್ದ ಹತ್ತು ಸಾವಿರ ರೂಪಾಯಿಗಳ ಚೆಕ್ ಅದು. ಅದನ್ನು ನನಗೆ ತೋರಿಸಿದ ಪ್ರೇಮಾರವರು "ಇನ್ನು ಇದರ ಅಗತ್ಯವಿಲ್ಲ, ಈ ಚೆಕ್ ಅನ್ನು ಅವರಿಗೆ ಹಿಂದಿರುಗಿಸುತ್ತೇನೆ" ಅಂದರು. "ಯಾಕೆ?" ಅಂತ ನಾನು ಕೇಳಿದರೆ "ಅವರು ಹಣ ನೀಡಿರುವುದು ಕಾರಂತರ ಚಿಕಿತ್ಸೆಗೆಂದು. ಅದನ್ನು ಬೇರೆ ಯಾವುದೇ ಕೆಲಸಕ್ಕೆ ಉಪಯೋಗಿಸಿಕೊಳ್ಳುವುದು ಸರಿಯಲ್ಲ" ಎಂದು ಉತ್ತರಿಸಿದರು.



ವೀಣಾಧರಿ

ಅಂದು ನಡೆದ ಇನ್ನೊಂದು ಘಟನೆ ಯಾವುದೆಂದರೆ ಕೃತಕ ಯಂತ್ರಗಳನ್ನು ತೆಗೆದ ನಂತರ ಎಲ್ಲವೂ ಮುಗಿದಂತೆ ಎಂದು ಭಾವಿಸಿದ್ದ ಪ್ರೇಮಾರವರು ಮನೆಯ ಹಾಲ್‌ನಲ್ಲಿದ್ದ ಸಾಮಾನುಗಳನ್ನೆಲ್ಲ ಬೇರೆಡೆ ಇಟ್ಟು, ಕಾರಂತರನ್ನು ಕೊನೆ ಬಾರಿ ನೋಡಲು ಬರುವವರಿಗೆ ಜಾಗ ಕಲ್ಪಿಸಲು ಹೇಳಿದ್ದರು. ಅದರಂತೆ ನನ್ನ ತಂಗಿ ಕವಿತಾ(ಬೇಬಿ) ಮತ್ತು ನಂದಕುಮಾರ್ (ತಬರ) ಇಡೀ ಹಾಲ್‌ಅನ್ನು ಖಾಲಿ ಮಾಡಿ ಕಾರಂತರಿಗೆಂದು ಮಧ್ಯದಲ್ಲಿ ಒಂದು ಮಂಚವನ್ನು ಮಾತ್ರ ಇಟ್ಟಿದ್ದರು.

ಅದನ್ನು ಕಂಡು ನನಗೇನನ್ನಿಸಿತೋ ಏನೋ "ಹೀಗ್ಯಾಕೆ ಮಾಡಿದ್ದೀರಿ?" ಅಂದೆ. ಅದಕ್ಕೆ ಬೇಬಿ "ಪ್ರೇಮಾರವರೇ ಹೇಳಿದ್ರು" ಅಂದಳು. "ಇಲ್ಲ, ಎಲ್ಲವನ್ನು ಮತ್ತೆ ಅದರದರ ಜಾಗಗಳಲ್ಲಿ ಇಡಿ. ಯಾವುದಕ್ಕೂ ಆಸ್ಪತ್ರೆಯಿಂದ ಸುದ್ದಿ ಬರಲಿ" ಅಂದೆ. ಅವರು ಮತ್ತೆ ಎಲ್ಲವನ್ನೂ ಜೋಡಿಸಿದರು. ಈ ಕೆಲಸ ಮುಗಿದ ಮರುಕ್ಷಣವೇ ಮೋಟಮ್ಮ ಮತ್ತು ಬಿ.ಎಲ್. ಶಂಕರ್ ಹಾಜರಾದರು. ಇದಾದ ಎರಡು ದಿನಗಳ ನಂತರವೇ ಕಾರಂತರು ಇಹಲೋಕವನ್ನು ತ್ಯಜಿಸಿದರು.

ನನ್ನನ್ನು ಇವತ್ತಿಗೂ ಕಾಡುತ್ತಿರುವ ವಿಷಾದ ಯಾವುದೆಂದರೆ ನನ್ನ ಹಲವಾರು ಕೆಲಸದ ಒತ್ತಡಗಳಿಂದಾಗಿ ಇತ್ತೀಚೆಗೆ ಪ್ರೇಮಾರವರನ್ನು ಭೇಟಿ ಆಗಲು ಸಾಧ್ಯವಾಗಿರಲಿಲ್ಲ, ಆದರೆ ಸಮಯ ಮಾಡಿಕೊಂಡು ಅವರನ್ನು ನೋಡಬೇಕು, ಮಾತನಾಡಿಸಬೇಕು ಎಂಬ ಆಸೆ ನನ್ನಲ್ಲಿ ಆಗಾಗ್ಗೆ ಮೂಡುತ್ತಲೇ ಇತ್ತು. ಈಗ ನೋಡಿದರೆ ಅವರೇ ಇಲ್ಲ.

ನನ್ನಿಂದ ಪ್ರೇಮಾರವರಿಗೆ ಏನೂ ಆಗಬೇಕಿರಲಿಲ್ಲ, ಆದರೆ ನಾನೊಂದಿಷ್ಟು ಸಮಯ ಅವರನ್ನು ಕಂಡಿದ್ದರೆ ನಮ್ಮ ನಡುವಿನ ಆಪ್ತತೆಯಿಂದಾಗಿಯಾದರೂ ಅವರಿಗೆ ಒಂದಿಷ್ಟು ಸಂತೋಷ ನೀಡಿ ನಾನೂ ಒಂದಿಷ್ಟು ಸಂತೋಷಪಡಬಹುದಿತ್ತು. ಅದನ್ನು ಸಾಧ್ಯಮಾಡಿಕೊಳ್ಳದ್ದಕ್ಕೆ ನನ್ನನ್ನೇ ಶಪಿಸಿಕೊಳ್ಳುತ್ತಿದ್ದೇನೆ.

ಅವತ್ತು ಅವರು ಆಸ್ಪತ್ರೆಯಲ್ಲಿದ್ದಾಗ, ಕೃತಕ ಉಸಿರಾಟದ ಯಂತ್ರದ ಸಹಾಯದಿಂದಲೇ 'ಜೀವಂತ'ವಾಗಿದ್ದಾಗ ಅವರ ಪಕ್ಕ ನಿಂತು "ಪ್ರೇಮಾ, ನಾನು ಗೌರಿ...ನನ್ನನ್ನು ಕ್ಷಮಿಸಿ...." ಅಂದೆ. ಅವರಿಗೆ ಅದು ಕೇಳಿಸಲೇ ಇಲ್ಲ.

* * * * *

ವೀಣಾಧರಿಯವರನ್ನು ನಾನೆಂದೂ ಭೇಟಿ ಆಗಿರಲಿಲ್ಲ, ಆದರೆ ಅವರ ಬಗ್ಗೆ ನಿಮ್ಮಂತೆಯೇ ಅಲ್ಲಲ್ಲಿ ಕೇಳಿದ್ದೆ, ಓದಿದ್ದೆ, ಅವರ ಚಟುವಟಿಕೆಗಳನ್ನು ಮೆಚ್ಚಿದ್ದೆ. ಒಂದು ಮಾತಿದೆ: ನಾವೆಷ್ಟು ದಿನ ಬದುಕಿದ್ದೆವು ಎನ್ನುವುದಕ್ಕಿಂತ ಬದುಕಿದ್ದಷ್ಟು ದಿನ ಏನನ್ನು ಮಾಡಿದೆವು ಎಂಬುದು ಮುಖ್ಯ. ಆ ನಿಟ್ಟಿನಲ್ಲಿ ವೀಣಾಧರಿ ಅಕಾಲಿಕವಾಗಿ ಮರಣ ಹೊಂದಿದ್ದರೂ ಆಕೆ ಸಾಧಿಸಿದ್ದು ಹೆಚ್ಚು.

ಇವತ್ತು AIDS ಕಾಯಿಲೆ ನಮ್ಮ ದೇಶದಲ್ಲಿ ಎಷ್ಟು ವೇಗವಾಗಿ ಹರಡುತ್ತಿದೆ ಎಂದು ನೋಡಿದರೆ ಹೆದರಿಕೆಯಾಗುತ್ತದೆ. ನಮ್ಮ ರಾಜ್ಯದ ಹಳ್ಳಿಗಳಲ್ಲಿನ ಪ್ರಸ್ತುತ ಸ್ಥಿತಿ ನೋಡಿ: ಒಂದೆಡೆ ಜಾಗತೀಕರಣದಿಂದಾಗಿ ವ್ಯವಸಾಯವೇ ಆರ್ಥಿಕವಾಗಿ ನಷ್ಟ ತರುತ್ತಿರುವುದರಿಂದ ಬಹಳಷ್ಟು ಯುವಕರು ಗ್ರಾಮೀಣ ಪ್ರದೇಶಗಳನ್ನು ತೊರೆದು ಪಟ್ಟಣಗಳನ್ನು ಸೇರುತ್ತಿದ್ದರೆ, ಇನ್ನೊಂದೆಡೆ AIDS ರೋಗವು ಹಳ್ಳಿಯಲ್ಲಿರುವ ಯುವ ಜನತೆಯನ್ನೇ ನುಂಗಿ ಹಾಕುತ್ತಿದೆ. ಕಳೆದೆರಡು ವರ್ಷಗಳಲ್ಲಿ ನನ್ನ ಇಬ್ಬರು ಪರಿಚಿತರು ಸೇರಿದಂತೆ ನನ್ನ ಮಿತ್ರರ ಹಳ್ಳಿಗಳಲ್ಲಿ AIDSನಿಂದ ಸತ್ತಿರುವವರ ಸಂಖ್ಯೆಯೇ ಇಪ್ಪತ್ತನ್ನು ದಾಟುತ್ತದೆ.

ಹೀಗೆ AIDSನಿಂದ ಸಾವಿಗೀಡಾಗುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿದ್ದರೂ ಅದರ ಬಗೆಗಿನ ತಿಳಿವಳಿಕೆ ಮಾತ್ರ ಜನರಲ್ಲಿ ಹೆಚ್ಚಾಗಿಲ್ಲ. ಈ ಅಜ್ಞಾನದಿಂದ ಭೀಕರ ಪರಿಸ್ಥಿತಿ ನಿರ್ಮಾಣವಾಗಿದೆ. ಏಕೆಂದರೆ ಈ ರೋಗ ಹೇಗೆ ಹರಡುತ್ತದೆ ಎಂದು ಗೊತ್ತಿಲ್ಲದೆ ಅದನ್ನು ಅಂಟಿಸಿಕೊಳ್ಳುವವರ ಸಂಖ್ಯೆಯೊಂದಿಗೆ, ಹಾಗೆ ಅಂಟಿಸಿಕೊಂಡವರ ಬಗೆಗಿನ ತಾತ್ಸಾರ ಮನೋಭಾವವೂ ಹೆಚ್ಚಾಗಿದೆ.


ಈ ಅಜ್ಞಾನವನ್ನು ತೊಲಗಿಸುವ ಮತ್ತು AIDS ಸೋಂಕಿತರೂ ಸಾಧ್ಯವಾದಷ್ಟು ಕಾಲ ಆರೋಗ್ಯವಂತರಾಗಿಯೇ ಬದುಕಬಹುದೆಂಬ ಆಶಯವನ್ನು ಹರಡುವ, ಈ ಎರಡೂ ದಿಶೆಗಳಲ್ಲಿ ವೀಣಾಧರಿ ಸಾಕಷ್ಟು ಸೇವೆ ಸಲ್ಲಿಸಿದರು.

ಓರ್ವ ಸಾಮಾನ್ಯ ಕುಟುಂಬದಿಂದ ಬಂದಿದ್ದ ವೀಣಾಧರಿ ತಮ್ಮ ವೈಯಕ್ತಿಕ ಸಾಮರ್ಥ್ಯವನ್ನೂ ಮೀರಿ, AIDS ಸೋಂಕಿತ ಮಹಿಳೆಯೆಂಬ ಚೌಕಟ್ಟನ್ನೂ ಮುರಿದು, ಸಾಧಿಸಿದ್ದು ಕಡಿಮೆಯಲ್ಲ. ಇಂತಹ ಅಸಾಧಾರಣ ವೀಣಾಧರಿಗೆ ನಮ್ಮ ನಮನ.

* * * * *

ಆಗಲೇ ಹೇಳಿದಂತೆ ನಾವು ಬದುಕಿದ್ದಾಗ ಏನನ್ನು ಮಾಡಿದೆವು ಎಂಬುದೇ ಮುಖ್ಯವಾದ್ದರಿಂದ, ಇಲ್ಲಿ ಇಬ್ಬರ ಬಗ್ಗೆ ಹೇಳಬೇಕೆನಿಸುತ್ತದೆ. ಯಾಕೆಂದರೆ ಅವರಿಬ್ಬರೂ ತಮ್ಮ ಜೀವನವನ್ನೇ ಕೋಮು ಸೌಹಾರ್ದಕ್ಕೆ ಮೀಸಲಿಟ್ಟಿದ್ದಾರಲ್ಲದೆ, ಹಾಗೆ ಮಾಡಿದ್ದರಿಂದ ವೈಯಕ್ತಿಕವಾಗಿ ಅಪಾರ ನಷ್ಟವನ್ನೂ ಅನುಭವಿಸಿದ್ದಾರೆ.


ಅವರಲ್ಲಿ ಒಬ್ಬರು J.S.ಬಂದೂಕ್‌ವಾಲಾ. ಅಮೆರಿಕದಲ್ಲಿ ಭೌತಶಾಸ್ತ್ರದಲ್ಲಿ ಡಾಕ್ಟರೇಟ್ ಪಡೆದ ನಂತರ ಅಲ್ಲಿನ ಹಲವಾರು ವಿಶ್ವವಿದ್ಯಾಲಯಗಳು ಬಂದೂಕ್‌ವಾಲಾರನ್ನು ಅಧ್ಯಾಪಕರಾಗಿ ನೇಮಿಸಿಕೊಳ್ಳಲು ಸಿದ್ಧವಾಗಿದ್ದವು. ಆದರೆ ಇತರರಂತೆ ತಾನೂ ತನ್ನ ಸ್ವಾರ್ಥಕ್ಕೆ ವಲಸೆಹೋದರೆ ಭಾರತದಲ್ಲಿನ ವಿಜ್ಞಾನ ವಲಯ ಸೊರಗುತ್ತದೆ ಎಂದು ಅರಿತ ಬಂದೂಕ್‌ವಾಲಾ ತನ್ನ ರಾಜ್ಯವಾದ ಗುಜರಾತಿಗೆ ಹಿಂದಿರುಗಿದರು. ಆದರೆ ಅವರಿಗೆ ಅಲ್ಲೊಂದು ಶಾಕ್ ಕಾದಿತ್ತು. ಬರೋಡಾದಲ್ಲಿರುವ ಎಂ.ಎಸ್. ವಿಶ್ವವಿದ್ಯಾಲಯವು ಸಂಘಪರಿವಾರದ ಹಿಡಿತದಲ್ಲಿರುವುದರಿಂದ ಮುಸ್ಲಿಮರಾದ ಬಂದೂಕ್‌ವಾಲಾರವರಿಗೆ ಉದ್ಯೋಗವನ್ನು ನಿರಾಕರಿಸಲಾಯಿತು.



ಬಂದೂಕ್‌ವಾಲಾ

ಆದರೆ ಸಂತನಂತಿರುವ ಬಂದೂಕ್‌ವಾಲಾರವರು ಇದರಿಂದ ಧೃತಿಗೆಡಲಿಲ್ಲ. ಬದಲಾಗಿ ಬೇರೆ ಕಾಲೇಜನ್ನು ಸೇರಿಕೊಂಡು ತಮ್ಮ ವಿದ್ಯಾರ್ಥಿಗಳ ಮೆಚ್ಚುಗೆ ಮತ್ತು ಗೌರವವನ್ನು ಗಳಿಸಿದರು. ನೊಂದವರ ಪರವಾಗಿ ಮಿಡಿಯುವ ಬಂದೂಕ್‌ವಾಲಾರವರು 1981ರಲ್ಲಿ ನಡೆದ ಮೀಸಲಾತಿ ವಿರೋಧಿ ಚಳವಳಿಯನ್ನು ಖಂಡಿಸಿ ದಲಿತರ ಪರ ವಹಿಸಿದರು.

ಇದಕ್ಕಾಗಿ ಮೇಲುಜಾತಿಯವರು ಬಂದೂಕ್‌ವಾಲಾರ ಮನೆಯ ಮೇಲೆ ದಾಳಿ ಇಟ್ಟರು. ಇದಾದ ಮಾರನೇ ವರ್ಷ ಪೊಲೀಸರು ಮುಸ್ಲಿಂ ಸಮುದಾಯದ ಮೇಲೆ ದೌರ್ಜನ್ಯ ನಡೆಸುತ್ತಿದ್ದಾರೆ ಎಂದು ದೂರಿದರು. ಆಗ ಅವರ ಮನೆಯ ಮೇಲೆ ಹಿಂದೂತ್ವವಾದಿಗಳು ಮತ್ತೆ ದಾಳಿ ನಡೆಸಿದರು.



ರಾಮ್ ಪುನಿಯಾನಿ

ಇವೆರಡು ಚಿಕ್ಕಪುಟ್ಟ ದಾಳಿಗಳಾಗಿದ್ದವು. ಆದರೆ 2002ರಲ್ಲಿ ನರೇಂದ್ರ ಮೋದಿಯ ಆಶೀರ್ವಾದದೊಂದಿಗೆ ನಡೆದ ಅಲ್ಪಸಂಖ್ಯಾತರ ನರಮೇಧದಲ್ಲಿ ಇವರ ಮನೆ ಮೂರನೇ ಬಾರಿಗೆ ದಾಳಿಗೆ ಗುರಿಯಾಯಿತಲ್ಲದೆ, ಅಂದು ಅದು ಸಂಪೂರ್ಣವಾಗಿ ಧ್ವಂಸಗೊಂಡಿತು. ಆ ದಾಳಿ ನಡೆದ ಪ್ರಕರಣದಲ್ಲಿ ಬಂದೂಕ್‌ವಾಲಾ ಮತ್ತವರ ಮಗಳು ಅದೃಷ್ಟವಶಾತ್ ಬದುಕುಳಿದರು.

ಹೀಗೆ ಮೇಲುಜಾತಿಯವರ, ಪೊಲೀಸರ, ಹಿಂದೂತ್ವವಾದಿಗಳ ಕೋಪಕ್ಕೆ ಗುರಿಯಾಗಿರುವ ಬಂದೂಕ್‌ವಾಲಾರವರು 'ಸೆಟಾನಿಕ್ ವರ್ಸಸ್' ಪುಸ್ತಕಕ್ಕೆ ಸಂಬಂಧಪಟ್ಟಂತೆ ಅದರ ಕೃತಿಕಾರ ಸಲ್ಮಾನ್ ರಶ್ದಿಗೆ ಅಭಿಪ್ರಾಯ ಸ್ವಾತಂತ್ರ್ಯವಿದೆ ಎಂದು ಹೇಳಿದ್ದಕ್ಕೆ ಮುಸಲ್ಮಾನರ ಕೋಪಕ್ಕೂ ತುತ್ತಾದರು. ಸಲ್ಮಾನ್ ರಶ್ದಿಯ ವಿರುದ್ಧ ಬಂಡಾಯವೆದ್ದಿದ್ದ ಮುಸಲ್ಮಾನ್ ಮೂಲಭೂತವಾದಿಗಳು ಬಂದೂಕ್‌ವಾಲಾರವರನ್ನು ದಾವೂದಿ ಬೋಹ್ರಾ ಸಮುದಾಯದಿಂದಲೇ ಬಹಿಷ್ಕರಿಸಿದರು.

ಆದರೆ ಬಂದೂಕ್‌ವಾಲಾರವರು ಇದ್ಯಾವುದರಿಂದಲೂ ಧೃತಿಗೆಡಲಿಲ್ಲ, ಬದಲಾಗಿ ಎಂದಿನಂತೆ ದೀನದಲಿತರ, ಅಮಾಯಕ ಮುಸಲ್ಮಾನರ ಪರವಾಗಿ ದನಿ ಎತ್ತುತ್ತಲೇ ಸಾಗಿದರು. ಅಷ್ಟೇ ಅಲ್ಲ, ಮುಸ್ಲಿಂ ಯುವಕರಿಗೆ ಆಧುನಿಕ ಶಿಕ್ಷಣವನ್ನು ನೀಡಿ ಅವರು ಮುಖ್ಯವಾಹಿನಿಗೆ ಬರುವಂತೆ ಮಾಡಬೇಕೆಂದೂ, ಗುಡಿಯಾ ಮತ್ತು ಇಮ್ರಾನಾ ಪ್ರಕರಣಗಳಲ್ಲಿ ಮುಲ್ಲಾಗಳು ಮಹಿಳೆಯರಿಗೆ ಅನ್ಯಾಯ ಎಸಗಿದ್ದಾರೆಂದೂ, ಮುಸ್ಲಿಮರಿಗೆ ಮೀಸಲಾತಿಯ ಹಂಗು ಬೇಡವೆಂದೂ ವಿಭಿನ್ನ ನಿಲುವುಗಳನ್ನು ತಾಳಿದರು. ಇದೆಲ್ಲದರೊಂದಿಗೆ ಹಿಂದೂ-ಮುಸ್ಲಿಂ ಸೌಹಾರ್ದಕ್ಕಾಗಿ ಶ್ರಮಿಸುತ್ತಲೇ ಇದ್ದರು.

ಗುಜರಾತಿನ ಹತ್ಯಾಕಾಂಡದಲ್ಲಿ ಇವರ ಮನೆ ಧ್ವಂಸಗೊಳ್ಳುವ ಮುನ್ನ ಹಿಂದೂ ಯುವಕನೊಂದಿಗೆ ಇವರ ಮಗಳ ನಿಶ್ಚಿತಾರ್ಥ ನಡೆದಿತ್ತು, ಅವರಿಬ್ಬರೂ ಒಬ್ಬರನ್ನೊಬ್ಬರು ಪ್ರೀತಿಸಿ ತಮ್ಮ ತಂದೆ ತಾಯಂದಿರನ್ನೂ ಒಪ್ಪಿಸಿದ್ದರು. ಆದರೆ ಹತ್ಯಾಕಾಂಡವಾದ ನಂತರ ಈ ಸಂಬಂಧ ಮುರಿದುಬೀಳುವ ಹಂತ ತಲುಪಿತ್ತು. ಇದರಿಂದ ಬಹಳ ನೋವು ಅನುಭವಿಸಿದ ಬಂದೂಕ್‌ವಾಲಾರವರು "ನಮ್ಮ ಮಕ್ಕಳ ಸಂತೋಷ ಮುಖ್ಯವೇ ಹೊರತು ನಾವು ಭಿನ್ನ ಧರ್ಮದವರೆಂಬುದಲ್ಲ, ಆದ್ದರಿಂದ ಇದಕ್ಕೆ ಒಪ್ಪಿ" ಎಂದು ಹೇಳಿ ಹುಡುಗನ ಕಡೆಯವರನ್ನು ಒಪ್ಪಿಸಿದ್ದರು. ಈಗ ಅವರಿಬ್ಬರೂ ಮದುವೆಯಾಗಿದ್ದಾರೆ. ಆದರೆ ಇಂತಹ ಅಂತರ್ ಧರ್ಮದ ದಂಪತಿಗಳು ಗುಜರಾತಿನಲ್ಲಿ ಸುರಕ್ಷಿತವಾಗಿರಲು ಸಾಧ್ಯವಿಲ್ಲವೆಂದು ಅವರು ಈಗ ಅಮೆರಿಕದಲ್ಲಿ ವಾಸಿಸುತ್ತಿದ್ದಾರೆ.

ಇತ್ತೀಚೆಗೆ ಬಂದೂಕ್‌ವಾಲಾರವರಿಗೆ ಇಂದಿರಾಗಾಂಧಿ ರಾಷ್ಟ್ರೀಯ ಐಕ್ಯತಾ ಪ್ರಶಸ್ತಿ ಲಭಿಸಿದೆ. ಅವರೊಂದಿಗೆ ಈ ಬಾರಿ ಈ ಪ್ರಶಸ್ತಿಯನ್ನು ಹಂಚಿಕೊಂಡಿರುವವರು ರಾಮ್ ಪುನಿಯಾನಿ ಎಂಬುವವರು. ಇವರೂ ಕೂಡಾ ಕೋಮು ಸೌಹಾರ್ದಕ್ಕಾಗಿ ಹಲವಾರು ವರ್ಷಗಳ ಕಾಲ ಶ್ರಮಿಸಿರುವವರು.

ಲಾಲ್‌ಕೃಷ್ಣ ಅಡ್ವಾನಿಯವರು ನಡೆಸಿದ ರಥಯಾತ್ರೆಯ ಸಂದರ್ಭದಲ್ಲಿ ಮುಂಬೈನಲ್ಲಿ ನಡೆದ ಕೋಮು ಸಂಘರ್ಷವನ್ನು ಕಂಡು ರಾಮ್ ಪುನಿಯಾನಿ ದಿಗ್ಭ್ರಾಂತರಾದರು. ಖ್ಯಾತ IITಯಲ್ಲಿನ ತಮ್ಮ ಪ್ರೊಫೆಸರ್ ಹುದ್ದೆಗೆ ರಾಜೀನಾಮೆ ನೀಡಿ ಕೋಮು ಸೌಹಾರ್ದವನ್ನು ಬಯಸುವ ಏಕ್ತಾ ಎಂಬ ಸಂಘಟನೆಯನ್ನು ಕಟ್ಟಿದರು. ಇವರ ಈ ಸಂಘಟನೆಯು ಮುಂಬೈನ ಕೊಳೆಗೇರಿಗಳಲ್ಲಿ ಜನರ ಪಂಚಾಯತ್‌ಗಳನ್ನು ಸ್ಥಾಪಿಸಿ ಕೋಮು ದಳ್ಳುರಿಗಳು ನಡೆಯದಂತೆ ನೋಡಿಕೊಂಡರು.

ಹಲವಾರು ವರ್ಷಗಳಿಂದ ಮೂಲಭೂತವಾದಿಗಳು ಮತ್ತು ಹಿಂದೂತ್ವವಾದಿಗಳ ವಿರುದ್ಧ ಸತತವಾಗಿ ಲೇಖನಗಳನ್ನು ಬರೆಯುತ್ತಾ, ಸೌಹಾರ್ದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾ ಬಂದಿದ್ದಾರೆ. ಇವತ್ತು ಮುಂಬೈನಲ್ಲಿ ಕೋಮುಸೌಹಾರ್ದ ಸಾಧ್ಯವಾಗಿದ್ದರೆ ಅದರಲ್ಲಿ ಪುನಿಯಾನಿಯವರ ಶ್ರಮವೂ ಇದೆ.

ಇವರಿಬ್ಬರಿಗೂ ಇಂದಿರಾಗಾಂಧಿ ರಾಷ್ಟ್ರೀಯ ಐಕ್ಯತಾ ಪ್ರಶಸ್ತಿ ಲಭಿಸಿರುವುದಕ್ಕೆ ನನ್ನ ಅಭಿನಂದನೆಗಳು.

-ಗೌರಿ ಲಂಕೇಶ್



ಚೆನ್ನಿಗಪ್ಪನ ಮಗ ಮಚ್ಚು ಹಿಡಿದ

ಬಡವರ ಸೊತ್ತಿಗಾಗಿ ಕಿಡ್ನಾಪ್ ಅಂಡ್ ಟಾರ್ಚರ್

ದಾಬಸ್‌ಪೇಟೆಯ ಮೂವರು ಮುಗ್ಧರನ್ನು ಹೊತ್ತೊಯ್ದು ತನ್ನ ಮನೆಯಲ್ಲೇ ಕೂಡಿಟ್ಟು ಚಿತ್ರಹಿಂಸೆ ಕೊಟ್ಟು ಅವರ ಆಸ್ತಿ ಬರೆಸಿಕೊಂಡ ಚೆನ್ನಿಗಪ್ಪನ ಮಗ ಗೌರಿಶಂಕ್ರನ ವಿರುದ್ಧ ನೆಲಮಂಗಲ ಪೊಲೀಸ್ ಠಾಣೆಯಲ್ಲಾಗಲಿ, ಪೀಣ್ಯ ಪೊಲೀಸ್ ಠಾಣೆಯಲ್ಲಾಗಲಿ ಸಣ್ಣದೊಂದು ಕಂಪ್ಲೇಂಟ್ ಕೂಡ ದಾಖಲಾಗುವುದಿಲ್ಲ ಅಂದರೆ ಚೆನ್ನಿಗಪ್ಪ ಮತ್ತು ಆತನ ಮಕ್ಕಳ ಅಟ್ಟಹಾಸ ಇನ್ನೆಂಥದ್ದಿರಬೇಡ?

ರಾ. ಸೋಮನಾಥ್


ಅಪ್ಪ ಅರಣ್ಯ ಮಂತ್ರಿ, ಮಗ ಜಿಲ್ಲಾ ಪಂಚಾಯ್ತಿ ಮೆಂಬರ್, ಅವರದೇ ಸರ್ಕಾರವಿರುವಾಗ ಯಾರನ್ನು ಬೇಕಾದರೂ ಹೊತ್ತೊಯ್ದು ಕೂಡಿಟ್ಟು, ಚಿತ್ರಹಿಂಸೆ ಕೊಟ್ಟು ಅವರ ಆಸ್ತಿ ಬರೆಸಿಕೊಳ್ಳಬಹುದಾ?

ಬೇರೆ ಯಾರೇ ಈ ಕೃತ್ಯವೆಸಗಿದರೆ ಒದ್ದು ಜೈಲಿಗೆ ದಬ್ಬುವ ಪೊಲೀಸರು ಅದನ್ನೇ ಮಂತ್ರಿ ಮಗನೊಬ್ಬ ಮಾಡಿದನೆಂದರೆ ಬಿಟ್ಟುಬಿಡಬಹುದಾ? ದೂರು ಕೊಡಲು ಬಂದವರನ್ನೇ ಬೆದರಿಸಿ ಓಡಿಸಿದ ಪೊಲೀಸರು ಕೂಡ ಮಂತ್ರಿ ಮಗನ ರೌಡಿ ಗ್ಯಾಂಗಿನ ಸಹಚರರಾ? ದೇಶದ ಕಾನೂನಿನಲ್ಲಿ ಲೆಕ್ಕಕ್ಕೇ ಇಲ್ಲವಾ?


ಇಂಥ ಹತ್ತಾರು ಪ್ರಶ್ನೆಗಳೆಲ್ಲ ಚೆನ್ನಿಗಪ್ಪ ಮತ್ತು ಆತನ ರೌಡಿಪುತ್ರ ಗೌರಿಶಂಕ್ರನ ರಕ್ಕಸ ರಾಜ್ಯದಲ್ಲಿ ಮಾಮೂಲಾಗಿ ಬಿಟ್ಟಿದೆ. ದಾಬಸ್‌ಪೇಟೆಯ ಮೂವರು ಮುಗ್ಧರನ್ನು ಹೊತ್ತೊಯ್ದು ತನ್ನ ಮನೆಯಲ್ಲೇ ಕೂಡಿಟ್ಟು ಚಿತ್ರಹಿಂಸೆ ಕೊಟ್ಟು ಅವರ ಆಸ್ತಿ ಬರೆಸಿಕೊಂಡ ಚೆನ್ನಿಗಪ್ಪನ ಮಗ ಗೌರಿಶಂಕ್ರನ ವಿರುದ್ಧ ನೆಲಮಂಗಲ ಪೊಲೀಸ್ ಠಾಣೆಯಲ್ಲಾಗಲಿ, ಪೀಣ್ಯ ಪೊಲೀಸ್ ಠಾಣೆಯಲ್ಲಾಗಲಿ ಸಣ್ಣದೊಂದು ಕಂಪ್ಲೇಂಟ್ ಕೂಡ ದಾಖಲಾಗುವುದಿಲ್ಲ ಅಂದರೆ ಚೆನ್ನಿಗಪ್ಪ ಮತ್ತು ಆತನ ಮಕ್ಕಳ ಅಟ್ಟಹಾಸ ಇನ್ನೆಂಥದ್ದಿರಬೇಡ?

ಕಳೆದ ಆಗಸ್ಟ್ 10 ರ ಬೆಳಿಗ್ಗೆ ಚೆನ್ನಿಗಪ್ಪನ ಬಲಗೈ ಬಂಟ ಜಗದೀಶ್ ಚೌಧುರಿ ಎಂಬಾತ ಪೀಣ್ಯ ಸಮೀಪದ ನೆಲಗದರನಹಳ್ಳಿಯ ಗೌರಿಶಂಕ್ರನ ಅಡ್ಡೆಗೆ ಎಳೆದೊಯ್ದ ದಾಬಸ್‌ಪೇಟೆಯ ನಾಲ್ವರು ಅಮಾಯಕರ ಪೈಕಿ ಒಬ್ಬನ ಹೆಸರು ವರದರಾಜು. ಜೊತೆಗೇ ಆತನ ತಮ್ಮಂದಿರಾದ ನರಸಿಂಹರಾಜು, ನಟರಾಜು ಮತ್ತು ಗೋವಿಂದರಾಜು ಎಂಬುವವರನ್ನು ತನ್ನ ಗಾಡಿಗೆ ಎತ್ತಾಕಿಕೊಂಡಿದ್ದೇ ಸೀದಾ ಮಂತ್ರಿ ಚೆನ್ನಿಗಪ್ಪನ ಮಗ ಗೌರಿಶಂಕ್ರನ ಅಡ್ಡೆಗೆ ಕರೆತರಲಾಗುತ್ತದೆ. ಇಷ್ಟೆಲ್ಲಕ್ಕೂ ಮೂಲಕಾರಣ ಈ ಅಣ್ಣತಮ್ಮಂದಿರಿಗೆ ದಾಬಸ್‌ಪೇಟೆ ಸಮೀಪದ ಸೋಂಪುರ ಹೋಬಳಿ ಚಂದನಹೊಸಳ್ಳಿಯಲ್ಲಿದ್ದ 5 ಎಕರೆ 34 ಗುಂಟೆ ಪಿತ್ರಾರ್ಜಿತ ಆಸ್ತಿ!

ನಿನ್ನೆಮೊನ್ನೆಯ ತನಕ ಕೇಳುವವರೇ ದಿಕ್ಕಿಲ್ಲದ ಈ ಆಸ್ತಿಗೆ ಇದ್ದಕ್ಕಿದ್ದಂತೆ ಡಿಮ್ಯಾಂಡ್ ಹೆಚ್ಚಲು ಮುಖ್ಯ ಕಾರಣವಾದದ್ದು ಶಿವಗಂಗೆ-ಮಾಗಡಿ-ರಾಮನಗರದ ಹೊಸ ರಿಂಗ್‌ರಸ್ತೆ. ಅದಕ್ಕೆಂದು ಬಿಎಂಆರ್‌ಡಿಎ ಪ್ಲಾನ್ ಮಾಡಿ ಕಲ್ಲು ನೆಟ್ಟಿದ್ದು ಗೊತ್ತಾಗಿದ್ದೇ ಚೆನ್ನಿಗಪ್ಪನ ಮಗನ ಗ್ಯಾಂಗ್ ಬೀದಿಗಿಳಿದಿದೆ. ನೆಲಮಂಗಲ, ದಾಬಸ್‌ಪೇಟೆ, ಕೊರಟಗೆರೆಯ ಹಳ್ಳಿಗಳ ಪುಂಡರಿಗಂತೂ ಸದ್ಯ ಚೆನ್ನಿಗಪ್ಪನ ಮಗನೇ ಅನ್ನದಾತ. ಕೆಲಸ, ವಿದ್ಯೆ, ರಸ್ತೆ ನೀರು, ಆಸ್ಪತ್ರೆ ಯಾವುದೂ ಇಲ್ಲದಿದ್ದರೂ ಪ್ರತಿ ಸಂಜೆ ಕಂಠಮಟ್ಟ ಕುಡಿತಕ್ಕಂತೂ ಇಲ್ಲಿನ ಹುಡುಗರಿಗೆ ಮೋಸವಿಲ್ಲ. ಇಂಥ ಹಳ್ಳಿಯ ಇಂಥದ್ದೇ ಬಾರು, ಇಂಥದ್ದೇ ಮಿಲ್ಟ್ರಿ ಹೋಟ್ಲುಗಳಲ್ಲಿ ಚೆನ್ನಿಗಪ್ಪನ ಮಗನ ಹೆಸರು ಹೇಳಿಬಿಟ್ಟರೆ ಸಾಕು; ಕುಡಿದಷ್ಟೂ ಎಣ್ಣೆ ತಿಂದಷ್ಟೂ ಬಿರಿಯಾನಿ. ಹಾಗಂತ ತಿಂದು ಉಂಡರಷ್ಟೇ ಸಾಲದು ಚೆನ್ನಿಗಪ್ಪನ ಮಗ ಯಾರ್‍ಯಾರ ಆಸ್ತಿಗೆ ಕಾಂಪೌಂಡ್ ಹಾಕುತ್ತಾನೋ ಅದರ ರಕ್ಷಣೆಗೆ ನಿಂತು ಯುದ್ಧ ಕಾಯಬೇಕು. ಅಷ್ಟೇ ಏಕೆ 'ಅಣ್ಣಾ ಹೇಳಿಬಿಟ್ರೆ ಯಾರ ತಲೆಯನ್ನಾದ್ರೂ ತೆಗೀತೀವಿ' ಎನ್ನುವ ಚೆಲ್ರೇಗಳ ಹಿಂಡೇ ಗೌರಿಶಂಕ್ರನ ಬೆನ್ನಿಗಿದೆ.




ಗೋವಿಂದರಾಜು



ವರದರಾಜು

ದಾಬಸ್‌ಪೇಟೆ, ತ್ಯಾಮಗೊಂಡ್ಲು ಭಾಗದ ಇಂಥ ಪೋಕರಿ ಪಡೆಯೊಂದರ ನಾಯಕನೇ ಶ್ರೀಪತಿಹಳ್ಳಿಯ ಜಗ್ಗ ಉರ್ಫ್ ಜಗದೀಶ್ ಚೌಧುರಿ. ಪ್ರಾರಂಭದಲ್ಲಿ ಮರಳು ಸ್ಮಗ್ಲಿಂಗ್ ಮಾಡಿಕೊಂಡಿದ್ದ ಜಗದೀಶ್ ಆನಂತರ ಖೋಟಾನೋಟು ದಂಧೆಯಲ್ಲಿ ಓಡಾಡಿದ. ಕ್ರಮೇಣ ನೆಲಮಂಗಲದ ಸೀರಿಯಲ್ ಕಿಲ್ಲರ್ ಬೆತ್ತನಗೆರೆ ಸೀನನ ಜೊತೆಬಿದ್ದು ಆತನ ಮೂಲಕವೇ ಮಂತ್ರಿ ಚೆನ್ನಿಗಪ್ಪನ ಬೆಂಬಲಿಗನಾದ. ನೆಲಮಂಗಲ, ದಾಬಸ್‌ಪೇಟೆ ಸುತ್ತಮುತ್ತ ಗೌರಿಶಂಕ್ರನ ಲ್ಯಾಂಡ್ ಹಾವಳಿ ಹೆಚ್ಚಾಗುತ್ತಿದ್ದಂತೆ ಬಡಬಗ್ಗರ ಆಸ್ತಿ ಕಬಳಿಸಿ ಅದನ್ನು ಚೆನ್ನಿಗಪ್ಪನ ಬೊಕ್ಕಸಕ್ಕೆ ತುಂಬಿಸುವುದು ಜಗದೀಶ್ ಚೌಧುರಿಯ ನಿತ್ಯ ಕಾಯಕವಾಯಿತು.

ಇಂಥವನ ವಿಷಬುದ್ಧಿಯ ಅರಿವಿಲ್ಲದೇ ಬಲೆಗೆ ಬಿದ್ದವರು ದಾಬಸ್‌ಪೇಟೆಯ ಗೋವಿಂದರಾಜು. ಮಾರುತಿ ವ್ಯಾನ್ ಒಂದನ್ನು ಬಾಡಿಗೆಗೆ ಬಿಟ್ಟು ಹೊಟ್ಟೆ ಹೊರೆದುಕೊಂಡಿದ್ದ ಗೋವಿಂದರಾಜು ತನಗೆ ಒಂದೆರಡು ಲಕ್ಷದ ಸಾಲ ಕೊಡಿಸಿಕೊಡು ಎಂದು ಜಗದೀಶನ ಬೆನ್ನಿಗೆ ಬಿದ್ದಿದ್ದ. ಹಾಗಾದ್ರೆ ಗ್ಯಾರಂಟಿಗೆ ಅಂತ ಎರಡು ಛಾಪಾ ಕಾಗದಕ್ಕೆ ಸಹಿ ಮಾಡಿಕೊಡು ಜೊತೆಗೆ ಇನ್ನೊಂದೆರಡು ಖಾಲಿ ಚೆಕ್ಕಿಗೂ ಸಹಿ ಹಾಕಿಕೊಡು ಎಂದು ಜಗದೀಶ್ ನಂಬಿಸಿದ.




ಗೌರಿಶಂಕರನ ರೌಡಿ ಅಡ್ಡೆ


ಷಡ್ಯಂತ್ರದ ಅರಿವಿಲ್ಲದ ಗೋವಿಂದರಾಜು ಖಾಲಿ ಚೆಕ್ಕು ಮತ್ತು ಛಾಪಾ ಕಾಗದಕ್ಕೆ ಸಹಿ ಮಾಡಿ ಕೊಟ್ಟರೆ ಹಕೀಕತ್ತೆ ಬೇರೆಯಿತ್ತು. ತಿಂಗಳಾದರೂ ಜಗದೀಶ ಸಾಲ ಕೊಡುವುದಿರಲಿ, ಗೋವಿಂದರಾಜು ಕಂಡರೇನೇ ಜಾಗ ಖಾಲಿ ಮಾಡುತ್ತಿದ್ದ. ಕೊನೆಗೆ ಯಾರ್‍ಯಾರದೋ ಕಾಲು ಹಿಡಿದ ಗೋವಿಂದರಾಜು ಜಗದೀಶನನ್ನು ಹಿಡಿದು ಪಂಚಾಯ್ತಿ ಮಾಡಿದರೆ ಚೆಕ್ಕು ಕಳೆದು ಹೋಗಿದೆ ಎಂದು ಬರೆದುಕೊಟ್ಟು ಸಹಿ ಹಾಕಿಕೊಟ್ಟಿದ್ದ ಛಾಪಾ ಕಾಗದವನ್ನು ಇನ್ನೆರಡು ದಿನದಲ್ಲಿ ತಂದು ಕೊಡುತ್ತೇನೆಂದು ನಾಪತ್ತೆಯಾದ ಜಗ್ಗ ಮತ್ತೆ ತಲೆ ತಪ್ಪಿಸಿಕೊಂಡು ಓಡಾಡಲಾರಂಭಿಸಿದ.

ಕೊನೆಗೆ ಏನೆಲ್ಲಾ ಸರ್ಕಸ್ ಮಾಡಿ ಜಗದೀಶನನ್ನು ಹಿಡಿದ ಗೋವಿಂದರಾಜುಗೆ ಆಗಸ್ಟ್ 10 ರ ಬೆಳಿಗ್ಗೆ ನಿನ್ನ ತಮ್ಮಂದಿರನ್ನು ಕರಕೊಂಡು ಬಾ ಪೇಪರ್ ಕೊಡ್ತೀನಿ ಎಂದು ಜಗದೀಶ್ ನಂಬಿಸಿದ. ಅದರಂತೆ ಆಗಸ್ಟ್ 10 ರ ಬೆಳಿಗ್ಗೆ ವರದರಾಜು, ಗೋವಿಂದ ರಾಜು, ನರಸಿಂಹರಾಜು ಮತ್ತು ನಟರಾಜ್ ದಾಬಸ್‌ಪೇಟೆಯಲ್ಲಿ ಸೇರಿದ್ದಾರೆ. ಅದೇ ಹೊತ್ತಿಗೆ ರೌಡಿ ಜಗದೀಶ್ ಏಳೆಂಟು ಮಂದಿ ರೌಡಿಗಳ ಜೊತೆ ಬಂದಿದ್ದೇ ನಾಲ್ವರನ್ನೂ ತನ್ನ ಎರಡು ಕಾರುಗಳಿಗೆ ಎತ್ತಾಕಿಕೊಂಡು ನೇರವಾಗಿ ಪೀಣ್ಯದ ನೆಲಗದರನಹಳ್ಳಿಯ ಗೌರಿಶಂಕ್ರನ ಅಡ್ಡೆಗೆ ಬಂದಿದ್ದಾನೆ. ಚೆನ್ನಿಗಪ್ಪ ಮಂತ್ರಿಯಾದಾಗಿನಿಂದಲೂ ಎಚ್‌ಎಂಟಿ ಲೇಔಟಿನ ನೆಲಗದರನಹಳ್ಳಿಯ ಈ ಮನೆಯೇ ಗೌರಿಶಂಕ್ರನ ಎಲ್ಲಾ ಪಾಪಗಳ ಕಾರಸ್ಥಾನ. ದಿನದ ಯಾವ ಗಳಿಗೆಯಲ್ಲೂ ಕಮ್ಮಿಯೆಂದರೂ ಮೂರು ಗಾಡಿಗಳು ತುಂಬುವಷ್ಟು ರೌಡಿ ಹಿಂಡು ಅಲ್ಲಿ ಜಮೆಗೊಂಡಿರುತ್ತದೆ!

ಗೋವಿಂದರಾಜನನ್ನು ಇನ್ನೆಲ್ಲೋ ಬಿಟ್ಟು ಆತನ ತಮ್ಮಂದಿರಾದ ವರದರಾಜು, ನಟರಾಜ್ ಮತ್ತು ನರಸಿಂಹರಾಜುವನ್ನು ಎಳೆದೊಯ್ದ ಜಗದೀಶ್ ಆ ಮೂವರನ್ನು ಗೌರಿಶಂಕ್ರನ ಮುಂದೆ ನಿಲ್ಲಿಸಿದ್ದಾನೆ. ಥೇಟು ಸಿನಿಮಾದ ವಿಲನ್ ಗತ್ತಿನಲ್ಲಿದ್ದ ಗೌರಿಶಂಕ್ರ ಆ ಮೂವರನ್ನು ಕೆಕ್ಕರಿಸಿದ್ದೇ 'ನನ್ಮಕ್ಕಳಾ... ಮುಚ್ಕೊಂಡು ಸಹಿ ಹಾಕಿ. ಇಲ್ಲಾಂದ್ರೆ ನಿಮ್ಮ ಡೆಡ್‌ಬಾಡಿಯಷ್ಟೇ ಇಲ್ಲಿಂದ ಹೊರಬೀಳುತ್ತೆ' ಎಂದಿದ್ದಾನೆ.



ನಟರಾಜ್



ರೌಡಿ ಜಗದೀಶ ಚೌಧುರಿ

ಏನೇ ಗುಟುರು ಹಾಕಿದರೂ ಅಣ್ಣ ತಮ್ಮಂದಿರು ಸಹಿ ಹಾಕಲಿಲ್ಲ. ತಕ್ಷಣವೇ ಒಂದು ಡಜನ್ ರೌಡಿಗಳು ವರದರಾಜುವನ್ನು ಮಹಡಿಗೆ ಎಳೆದೊಯ್ದು ರೂಮೊಂದರಲ್ಲಿ ಕೂಡಿ ಹಾಕಿದ್ದಾರೆ. ನಟರಾಜ್ ಮತ್ತು ನರಸಿಂಹರಾಜುವನ್ನು ನೆಲ ಮಹಡಿಯ ಕೋಣೆಗೆ ತುರುಕಿದ್ದಾರೆ. ತನ್ನ ಕೈಯಲ್ಲಿ ಲಾಂಗ್ ಒಂದನ್ನು ಎತ್ತಿಕೊಂಡಿದ್ದೇ ಗೌರಿಶಂಕ್ರ ಮೂವರಿಗೂ ಚಿತ್ರಹಿಂಸೆ ಕೊಟ್ಟಿದ್ದಾನೆ. ಜೊತೆಗಿದ್ದ ರೌಡಿಗಳೂ ಪದೇಪದೇ ಥಳಿಸಿದ್ದಾರೆ. ಎಷ್ಟೇ ಹೊಡೆದರೂ ಅಣ್ಣ ತಮ್ಮಂದಿರು ಸಹಿ ಹಾಕಲಿಲ್ಲ. ಕೊನೆಗೆ ಗೌರಿಶಂಕ್ರನೇ ಲಾಂಗ್‌ನ ಹಿಂಬದಿಯಿಂದ ವರದರಾಜು ಬೆನ್ನಿಗೆ ಹೊಡೆದು ಸಹಿ ಹಾಕಿಸಿಕೊಂಡ. ಕೆಳಕ್ಕೆ ಬಂದವನೇ ನಟರಾಜು ಕುತ್ತಿಗೆಗೆ ಮಚ್ಚಿಟ್ಟು ನೂರು ರೂಪಾಯಿಯ ಛಾಪಾ ಕಾಗದದ ಮೇಲೆ ಆತನ ಸಹಿ ಪಡೆದಿದ್ದಾನೆ. ಆ ಹೊತ್ತಿಗಾಗಲೇ ಒದೆ ತಿಂದು ಪ್ರಜ್ಞೆ ತಪ್ಪಿ ಬಿದ್ದಿದ್ದ ನರಸಿಂಹರಾಜುವಿನ ಎಡಗೈ ಹಿಡಿದು ಮತ್ತೊಂದು ಛಾಪಾ ಕಾಗದದ ಮೇಲೆ ಹೆಬ್ಬೆಟ್ಟು ಮುದ್ರೆ ಒತ್ತಿಸಿಕೊಂಡಿದ್ದಾನೆ.

ಅದೇ ಹೊತ್ತಿಗೆ ಗೌರಿಶಂಕ್ರನ ಪಕ್ಕಾ ಛೇಲಾ ರುದ್ರೇಶ ಮತ್ತು ಮನೆಗೆಲಸದ ಗಂಗಾಧರ್ ಪ್ರತ್ಯಕ್ಷರಾಗಿದ್ದಾರೆ. ಒದೆ ತಿಂದು ನಿತ್ರಾಣರಾಗಿದ್ದ ಮೂವರನ್ನೂ ಕಾರಿಗೆ ತುರುಕಿ ಈ ಪೈಕಿ ನರಸಿಂಹರಾಜುವನ್ನು ಮಾದನಾಯಕನಹಳ್ಳಿಯ ಬಾರೆಯ ಬಳಿ ಎಸೆದು, ನಟರಾಜನನ್ನು ನೆಲಮಂಗಲದಲ್ಲಿ ಇಳಿಸಿದ್ದಾರೆ. ವರದರಾಜುವನ್ನು ಆತನ ದಾಬಸ್‌ಪೇಟೆಯ ಮನೆಗೇ ತಂದುಬಿಟ್ಟಿದ್ದಾರೆ. ಬಿಡುವುದಕ್ಕೂ ಮುನ್ನ ಗೌರಿಶಂಕ್ರ 'ನೋಡ್ರೋ, ನಿಮ್ಮನ್ನ ಮರ್ಡರ್ ಮಾಡಿದ್ರೆ ನಮಗೆ ಬರೋ ಬಚ್... ಬರೇ ಮೂರು ಲಕ್ಷ ಮಾತ್ರ. ಇನ್ನೇನಾದ್ರೂ ಕೆಮ್ಮಿದ್ರಿ ಅಂದ್ರೆ ಮೂಟೆ ಕಟ್ಟಿ ಮೋರಿಗೆ ಎಸಿತೀನಿ, ಹುಷಾರ್...!' ಎಂದೇ ಹೂಂಕರಿಸಿದ್ದ.

ಆಗಿನ್ನೂ ಚೆನ್ನಿಗಪ್ಪ ಮಂತ್ರಿಯಾಗಿದ್ದ. ಹಿಂಸೆಗೀಡಾದ ಮೂವರೂ ಮರುದಿನ ಬೆಳಿಗ್ಗೆ ನೆಲಮಂಗಲ ಪೊಲೀಸ್ ಠಾಣೆಗೆ ಬಂದರೆ ಅಲ್ಲಿದ್ದವನು ಇನ್ಸ್‌ಪೆಕ್ಟರ್ ಶಂಕರ್‌ನಾರಾಯಣ! ಅದೇ ಠಾಣೆಯ ಎಸ್ಸೈ ವಿರೂಪಾಕ್ಷ ಸ್ವಾಮಿ ಸೇರಿದಂತೆ ಇಡೀ ಪೊಲೀಸ್ ಠಾಣೆಯೇ ಚೆನ್ನಿಗಪ್ಪನ ಅಡುಗೆ ಮನೆಯಂತಿತ್ತು. ದಾಬಸ್‌ಪೇಟೆಯ ಎಸ್‌ಐ ಸುನೀಲ್‌ಕುಮಾರ್ ಮತ್ತು ಎಎಸ್‌ಐ ನಾಗರಾಜ್ ಕೂಡ ಚೆನ್ನಿಗಪ್ಪನ ಭಕ್ತಾದಿಗಳೆ. 'ಇಲ್ಯಾಕ್ರೀ ಬರ್ತೀರಾ? ನಿಮ್ಮುನ್ನ ಎಲ್ಲಿ ಹೊಡೆದ್ರೋ ಅಲ್ಲಿಗೇ ಹೋಗಿ ಕಂಪ್ಲೇಂಟ್ ಮಾಡಿ' ಎಂದು ಪೊಲೀಸರು ಸಾಗಿ ಹಾಕಿದ್ದಾರೆ. ಆಗಸ್ಟ್ 13 ಕ್ಕೆ ನಟರಾಜ್ ಮತ್ತು ವರದರಾಜ್ ಪೀಣ್ಯ ಪೊಲೀಸ್ ಠಾಣೆಗೆ ಬಂದರೆ ಇನ್ಸ್‌ಪೆಕ್ಟರ್ ರಂಗನಾಥ್ 'ನನ್ಮಕ್ಳಾ ಸುಳ್ಳು ಕಂಪ್ಲೇಂಟ್ ಕೊಡ್ತೀರಾ? ನಿಮ್ಮುನ್ನೇ ಲಾಕಪ್ಪಿಗೆ ಹಾಕ್ತೀನಿ' ಎಂದುಬಿಟ್ಟ!

ಅಲ್ಲಿಗೆ ಪೊಲೀಸರಿಗೂ ಗೌರಿಶಂಕ್ರನ ರೌಡಿಪಡೆಗೂ ವ್ಯತ್ಯಾಸವೇ ಇಲ್ಲ ಎಂಬುದು ಅಣ್ಣತಮ್ಮಂದಿರಿಗೆ ಖಾತರಿಯಾಗಿದೆ. ಆಗಸ್ಟ್ 15 ರಂದು ಶಿವಗಂಗೆಯ ಗಣೇಶನ ದೇವಸ್ಥಾನಕ್ಕೆ ಬಂದಿದ್ದ ಮಂತ್ರಿ ಚೆನ್ನಿಗಪ್ಪನ ಕಾಲಿಗೆ ಬಿದ್ದು ಕಣ್ಣೀರಿಟ್ಟಿದ್ದಾರೆ. ಪಕ್ಕದಲ್ಲೇ ಇದ್ದ ಜಿಲ್ಲಾ ಪಂಚಾಯ್ತಿ ಸದಸ್ಯ ಚಲುವರಾಜು ಮತ್ತು ಸೋಂಪುರ ಗ್ರಾಮ ಪಂಚಾಯ್ತಿ ಅಧ್ಯಕ್ಷ ಗಂಗಣ್ಣ ಕೂಡ ನಟರಾಜ್ ಸಹೋದರರ ಪರವಹಿಸಿ ಚೆನ್ನಿಗಪ್ಪನವರನ್ನು ಕೇಳಿಕೊಂಡರೆ, ಚೆನ್ನಿಗಪ್ಪ; 'ನೋಡ್ರೋ ಸುಮ್ನೇ ಗಾಂಚಾಲಿ ಮಾಡ್ಬೇಡಿ, ಬೇಕಾದ್ರೆ ಒಂದೋ ಎರಡೋ ಲಕ್ಷ ಜಾಸ್ತಿ ಕೊಡ್ತೀನಿ. .....ಕಾ ಮುಚ್ಕೊಂಡು ನನ್ನ ಮಗನ ಹೆಸರಿಗೆ ರಿಜಿಸ್ಟರ್ ಮಾಡಿಕೊಡಿ...' ಎಂದುಬಿಟ್ಟ!

ಅಲ್ಲಿಗೆ ಮಗನ ಘಾತಕಕ್ಕೆ ಅಪ್ಪನೇ ಸೂತ್ರಧಾರ ಎಂಬುದು ಖಾತ್ರಿಯಾಗಿತ್ತು. ಗೋವಿಂದರಾಜು, ವರದರಾಜು ಸೇರಿಕೊಂಡು ಮುಖ್ಯಮಂತ್ರಿ ಕುಮಾರಸ್ವಾಮಿಗೆ ದೂರು ಕೊಟ್ಟರು. ದೇವೇಗೌಡರ ಕಾಲಿಗೆ ಬಿದ್ದು 'ನಮ್ಮ ಆಸ್ತಿ ಉಳಿಸಿಕೊಡಿ' ಎಂದು ಕಣ್ಣೀರಿಟ್ಟರು. ಇನ್ನೇನು ಕೋ-ಜಾ ಸರ್ಕಾರವೇ ಪತನಗೊಂಡಿದ್ದು ಖಾತರಿಯಾದಂತೆ ರಾಜ್ಯಪಾಲರಿಗೆ ಹೋಗಿ ದೂರು ಕೊಟ್ಟರು. ಪ್ರಯೋಜನ ಮಾತ್ರ ದೊಡ್ಡ ಸೊನ್ನೆ!


ಈತನಕ ಗೌರಿಶಂಕ್ರನ ಮೇಲಾಗಲಿ ಆತನ ರೌಡಿಬಂಟರ ವಿರುದ್ಧವಾಗಲಿ ಯಾವ ಪೊಲೀಸ್ ಠಾಣೆಯಲ್ಲೂ ದೂರು ದಾಖಲಾಗಿಲ್ಲ. ಇನ್ನು ಆಸ್ತಿಯಾದರೂ ಉಳಿಯಿತಾ ಎಂದರೆ ಅದೂ ಇಲ್ಲ. ಸಹಿ ಪಡೆದ ಛಾಪಾ ಕಾಗದವನ್ನೇ ಬಳಸಿಕೊಂಡು ತನ್ನ ಮನೆಗೆಲದಸದ ಆಳು ಬಿ.ಜಿ. ಗಂಗಾಧರನ ಹೆಸರಿಗೆ ಗೋವಿಂದರಾಜು ಮತ್ತಾತನ ತಮ್ಮಂದಿರ ಐದೆಕರೆ ಮೂವತ್ನಾಲ್ಕು ಗುಂಟೆ ಆಸ್ತಿಯನ್ನು ಗೌರಿಶಂಕ್ರನೇ ನಿಂತು ಬರೆಸಿದ್ದಾನೆ. ತನ್ನ ರೌಡಿ ಬಂಟರನ್ನು ಛೂಬಿಟ್ಟು ಆ ಜಮೀನಿಗೆ ಬೇಲಿ ಹಾಕಿಸಿದ್ದಾನೆ. ಅಲ್ಲೊಂದು ಶೆಡ್ ಕಟ್ಟಿಸಿ ಅಲ್ಲಿ ಹಿಂಡುಗಟ್ಟಲೇ ಹುಡುಗರನ್ನು ಬಿಟ್ಟಿದ್ದಾನೆ. ಇತ್ತ ಗೋವಿಂದರಾಜು, ನಟರಾಜ್ ಸಹೋದರರು ಪ್ರಾಣಭೀತಿಗೆ ಬಿದ್ದು ಯಾರ್‍ಯಾರದೋ ಕೈಕಾಲು ಹಿಡಿಯುತ್ತಿದ್ದಾರೆ.

ಅಷ್ಟಕ್ಕೂ ಇದೆಲ್ಲ ಸಂಭವಿಸಿದ್ದು ಚೆನ್ನಿಗಪ್ಪ ಮಂತ್ರಿಯಾಗಿದ್ದಾಗಲೇ!


ತನ್ನ ಮಗನ ಗೂಂಡಾಗಿರಿಯ ವಿರುದ್ಧ ಬಲಿಪಶುಗಳೇ ಬಂದು ದೂರುಕೊಟ್ಟಾಗಲೂ ಮಂತ್ರಿ ಚೆನ್ನಿಗಪ್ಪನೇ ಮತ್ತೆ ಧಮಕಿ ಹಾಕುತ್ತಾನೆಂದರೆ, ಆಸ್ತಿಯನ್ನು ತನ್ನ ಮಗನಿಗೇ ಬರೆದು ಕೊಡಿ ಎಂದು ಹೂಂಕರಿಸುತ್ತಾನೆಂದರೆ; ಈ ಪ್ರಕರಣದ ಮೊದಲ ಆರೋಪಿಯನ್ನಾಗಿ ಪೊಲೀಸರು ಚೆನ್ನಿಗಪ್ಪನನ್ನೇ ತಾನೇ ಬಂಧಿಸಬೇಕು?

ಈ ಬಗ್ಗೆ ಪ್ರತಿಭಟಿಸಬೇಕಿದ್ದ, ಪ್ರಶ್ನಿಸಬೇಕಿದ್ದ ಕಾಂಗ್ರೆಸ್ಸೇ ತೆಪ್ಪಗಿದೆಯೆಂದರೆ ಈ ರಾಜ್ಯದಲ್ಲಿ ವಿರೋಧ ಪಕ್ಷ ಎಂಬುದಾದರೂ ಇದೆಯೇ? ಚೆನ್ನಿಗಪ್ಪನ ಅಟ್ಟಹಾಸಕ್ಕೆ ಅಂಕುಶವುಂಟೆ?

ಇದು ಚೆನ್ನಿಗಪ್ಪನ ರಕ್ಕಸ ರಾಜ್ಯ!




ಜೆಡಿಎಸ್ ಅಧಿಕಾರಕ್ಕೆ ಬಂದ ಎರಡೇ ವರ್ಷದೊಳಗೆ ನೆಲಮಂಗಲವೊಂದರಲ್ಲೇ ಆರು ಪೈಶಾಚಿಕ ರಾಜಕೀಯ ಹತ್ಯೆಗಳಾಗಿವೆ. ಈ ಪೈಕಿ ಮೊದಲು ಹತನಾದ ಕಾಂಗ್ರೆಸ್ ಕಾರ್ಯಕರ್ತ ಬಾಳೇಕಾಯಿ ಮಂಡಿ ಬಸವರಾಜ. ಆನಂತರ ಆತನ ಕೊಲೆಗೆ ಸಾಕ್ಷಿಗಳಾಗಿದ್ದ ಬೆತ್ತನಗೆರೆಯ ವಕೀಲ ದೇವರಾಜ್ ಮತ್ತು ಗ್ರಾಮ ಪಂಚಾಯ್ತಿ ಸದಸ್ಯ ಕೃಷ್ಣಮೂರ್ತಿಯ ಜೋಡಿ ಕೊಲೆಗೆ ಕಾರಣಕರ್ತನಾದ ಬೆತ್ತನಗೆರೆಯ ಸರಣಿ ಹಂತಕ ಸೀನ. ಈತ ಹೇಳಿಕೇಳಿ ಮಂತ್ರಿ ಚೆನ್ನಿಗಪ್ಪನ ಬಂಟ ಮತ್ತು ಗೌರಿಶಂಕ್ರನ ಪರಮಾಪ್ತ.



ಬಿನ್ನಮಂಗಲ ಕೃಷ್ಣಪ್ಪ

ಈ ಬಗ್ಗೆ ಪತ್ರಿಕೆಗಳು ಬರೆದಾಗಲೆಲ್ಲ ಮಂತ್ರಿ ಚೆನ್ನಿಗಪ್ಪ ಹೇಳುವುದು ಒಂದೇ ಡೈಲಾಗ್: "ನೆಲಮಂಗಲದ ಸರಣಿ ಕೊಲೆಗಳ ಹಿಂದೆ ನನ್ನ ಕೈವಾಡವಿದೆ ಅಂತೇನಾದ್ರೂ ಸಾಬೀತಾದ್ರೆ, ನಾನು ರಾಜಕೀಯವನ್ನೇ ಬಿಟ್ಟು ಬಿಡ್ತೀನಿ."

ಸರಿ, ಅಪ್ಪನ ಮಾತನ್ನೇ ನಂಬೋಣ ಅಂದರೆ ಮಗ ಗೌರಿಶಂಕ್ರ ಮೊದಲು ನೆಲಮಂಗಲದ ಹೊರವಲಯದ ಫಾರ್ಮ್ ಹೌಸ್‌ಗಳಲ್ಲಿ ಬ್ಯಾಂಡ್ ಹುಡುಗಿಯರ ಜೊತೆ ಸಿಕ್ಕುಬಿದ್ದ. ಆನಂತರ ಹಂತಕ ಬೆತ್ತನಗೆರೆ ಸೀನನ ಜೊತೆಗೆ ಬಹಿರಂಗವಾಗಿ ಓಡಾಡಿದ. ಸಾಲದ್ದಕ್ಕೆ ಕಡಬಗೆರೆಯ ಪಾಯ್ಸನ್ ರಾಮನಂಥ ಮಚ್ಚಿನ ಹಂತಕನನ್ನೂ ಜೊತೆ ಹಾಕಿಕೊಂಡ. ಅದಕ್ಕೆ ತಕ್ಕಂತೆ ನೆಲಮಂಗಲದ ಸರಣಿ ಹಂತಕ ಬೆತ್ತನಗೆರೆ ಸೀನನ ಬೆನ್ನಿಗೆ ಬಿದ್ದಿದ್ದ ಮಹಾದಕ್ಷ ಎಸ್‌ಐ ಪರಮೇಶ್‌ರನ್ನು ಮಂತ್ರಿ ಚೆನ್ನಿಗಪ್ಪನವರೇ ನಿಂತು ಎತ್ತಂಗಡಿ ಮಾಡಿಸಿದ್ದಾರೆ. ಸಬ್ ಇನ್ಸ್‌ಪೆಕ್ಟರ್ ಪರಮೇಶ್ ನೆಲಮಂಗಲದಲ್ಲೇ ಉಳಿದಿದ್ದರೆ ಹಂತಕ ಸೀನ ಅದ್ಯಾವತ್ತೋ ಸಿಕ್ಕಿಬಿಡುತ್ತಿದ್ದ. ಪರಮೇಶ್ ಎತ್ತಂಗಡಿಯಾಗಿದ್ದೇ ಸೀನ ಒಂದಲ್ಲ ಡಬ್ಬಲ್ ಮರ್ಡರ್ ಮಾಡಿಬಿಟ್ಟ!



ಪಾಯ್ಸನ್ ರಾಮ


ಮೂರು ಕೊಲೆಗಳನ್ನು ಮಾಡಿ ಪೊಲೀಸರ ಎದುರಿಗೇ ಸುತ್ತಾಡಿಕೊಂಡಿದ್ದರೂ ನೆಲಮಂಗಲದ ಪೊಲೀಸರು ಮಾತ್ರ ಸೀನ ಸಿಗುತ್ತಲೇ ಇಲ್ಲ ಎಂದು ಇವತ್ತಿಗೂ ತಿಪ್ಪೇ ಸಾರಿಸುತ್ತಿದ್ದಾರೆ. ಸೀನನ ಅಕ್ಕನ ಗಂಡ ಯಡಾಳುದೇವಿಯ ಫಾರ್ಮ್‌ಹೌಸ್‌ನಲ್ಲಿ ಬೆತ್ತನಗರೆ ಸೀನ ಮತ್ತು ಚೆನ್ನಿಗಪ್ಪನ ಮಗ ಪದೇಪದೇ ಪಾರ್ಟಿ ಮಾಡಿಕೊಂಡಿದ್ದಾಗಲೂ ಪೊಲೀಸರು ಅತ್ತ ಸುಳಿಯಲಿಲ್ಲ. ಕಳೆದ ಚಾಮುಂಡೇಶ್ವರಿ ಚುನಾವಣೆಯಲ್ಲಿ ಸಿದ್ದು ವಿರುದ್ಧ ಜೆಡಿಎಸ್ ಪರ ಪ್ರಚಾರಕ್ಕೆಂದು ಹೋಗಿದ್ದ ಚೆನ್ನಿಗಪ್ಪನವರ ಜೊತೆ ಅವರ ಮಗ ಗೌರಿಶಂಕ್ರ, ಯಡಾಳು ದೇವಿ ಮತ್ತು ಹಂತಕ ಬೆತ್ತನಗೆರೆ ಸೀನನೂ ಇದ್ದ. ಅದು ಗೊತ್ತಾಗಿದ್ದೇ ದಾಬಸ್‌ಪೇಟೆಯ ಎಸ್‌ಐ ರಾಮಕೃಷ್ಣ ನಾಲ್ಕಾರು ಪೊಲೀಸರೊಂದಿಗೆ ಸೀನನ ಬಂಧನಕ್ಕೆಂದು ಮೈಸೂರಿಗೆ ಬಂದಿದ್ದಾರೆ. ಇನ್ನೇನು ಸೀನನನ್ನು ಎಳೆದೊಯ್ಯಬೇಕೆನ್ನುವಷ್ಟರಲ್ಲಿ ಚೆನ್ನಿಗಪ್ಪನವರೇ ನೆಲಮಂಗಲದ ಇನ್ಸ್‌ಪೆಕ್ಟರ್ ಮತ್ತೊಬ್ಬ ರಾಮಕೃಷ್ಣರಿಗೆ ಫೋನ್ ಮಾಡಿ 'ಇದೆಲ್ಲ ಚೆನ್ನಾಗಿರೋಲ್ಲ. ಮೊದಲು ಎಸ್‌ಐಗೆ ವಾಪಸ್ ಹೋಗಕ್ಕೆ ಹೇಳಿ' ಎಂದು ದಬಾಯಿಸಿದ್ದಾರೆ.

ತಡಬಡಾಯಿಸಿದ ಎಸ್ಸೈ ಸೀನನನ್ನು ಬಿಟ್ಟಿದ್ದೇ ವಾಪಸ್ಸಾಗಿದ್ದಾರೆ. ನೆಲಮಂಗಲದ ಹಂತಕರಿಗೂ ಅಲ್ಲಿನ ಹತ್ಯೆಗಳಿಗೂ ಮಂತ್ರಿ ಚೆನ್ನಿಗಪ್ಪನವರಿಗೂ ಏನೆಲ್ಲ ಸಂಬಂಧವಿತ್ತೆಂಬುದಕ್ಕೆ ಇದಕ್ಕಿಂತ ಬೇಕೆ? ಅಷ್ಟೇ ಏಕೆ? ಇಲ್ಲಿಗೆ ಎರಡು ತಿಂಗಳ ಹಿಂದಷ್ಟೇ ಚೆನ್ನಿಗಪ್ಪನವರ ಮಗ ಗೌರಿಶಂಕ್ರ, ಯಡಾಳುದೇವಿ ಮತ್ತು ಕಿಲ್ಲರ್ ಸೀನ ಸೇರಿಕೊಂಡು ಕುಣಿಗಲ್ ರಸ್ತೆಯ ಚಾಮುಂಡಿ ಡಾಬಾದಲ್ಲಿ ಅದೇ ನೆಲಮಂಗಲ ಠಾಣೆಯ ಎಸ್ಸೈ ವಿರೂಪಾಕ್ಷರನ್ನು ಭೇಟಿಯಾಗಿ ಪಾರ್ಟಿ ಮಾಡಿದ್ದು ಸುಳ್ಳೆ? ಅಲ್ಲಿ ಹಂತಕ ಸೀನನಿಗೆ ಎಸ್ಸೈ ವಿರೂಪಾಕ್ಷರ ಕೈಯಿಂದಲೇ ಗೌರಿಶಂಕ್ರನೇ ನಿಂತು ದುಡ್ಡು ಕೊಡಿಸಿದ್ದಾನೆಂದು ನೆಲಮಂಗಲದ ಪೊಲೀಸರೇ ಬೊಬ್ಬೆಯಿಡುತ್ತಿರುವುದು ಸುಳ್ಳೆ?

ನಿಜಕ್ಕೂ ಹಂತಕ ಸೀನನಿಗೂ ಮಂತ್ರಿ ಚೆನ್ನಿಗಪ್ಪನ ಮಗ ಗೌರಿಶಂಕ್ರನಿಗೂ ಸಂಬಂಧವೇ ಇಲ್ಲವಾಗಿದ್ದರೆ ಸೀನನ ಅಕ್ಕನ ಗಂಡ ಯಾಡಾಳುದೇವಿಯ ಜೊತೆ ಎಸ್ಸೈ ವಿರೂಪಾಕ್ಷನನ್ನು ಕರೆದುಕೊಂಡು ಒಂದೇ ಕಾರಲ್ಲಿ ಧರ್ಮಸ್ಥಳ ಪ್ರವಾಸಕ್ಕೆ ಹೋಗಿದ್ದಾದರೂ ಏಕೆ? ಯಾಡಾಳುದೇವಿಯ ಬಗ್ಗೆ ಗೊತ್ತಿದ್ರೂ ತಮ್ಮ ವಿಧಾನಸೌಧದ ಮಂತ್ರಿ ಛೇಂಬರಿನಲ್ಲಿ ಆತ ಅಡ್ಡೆ ಹಾಕಲು ಚೆನ್ನಿಗಪ್ಪ ಬಿಟ್ಟಿದ್ದೇಕೆ?

ಚೆನ್ನಿಗಪ್ಪನವರ ಹೆಸರೇಳಿಕೊಂಡು ಕಿಲ್ಲರ್ ಸೀನ ನೆಲಮಂಗಲ ಸುತ್ತಮುತ್ತ ಲ್ಯಾಂಡ್ ಡೀಲಿಗಿಳಿದದ್ದು, ಬಿಲ್ಡರ್‌ಗಳನ್ನು ದೋಚುತ್ತಿರುವುದು ಮತ್ತು ತನ್ನ ಭಾವ ಯಡಾಳುದೇವಿಗೋಸ್ಕರ ನೆಲಮಂಗಲದ ಕಾಂಗ್ರೆಸ್ ನಾಯಕ ಬಿನ್ನಮಂಗಲ ಕೃಷ್ಣಪ್ಪನವರನ್ನು ಮುಗಿಸಲು ಹವಣಿಸುತ್ತಿರುವುದಕ್ಕೆ ಯಥೇಚ್ಛ ಸಾಕ್ಷಿಗಳಿವೆ. ಆಗಸ್ಟ್ 10ರ ಬೆಳಿಗ್ಗೆ ಜಗದೀಶ್ ಚೌಧುರಿ ಹೊತ್ತೊಯ್ದು ಗೌರಿಶಂಕ್ರನ ಮನೆಯಲ್ಲೇ ಟಾರ್ಚರ್ ಮಾಡಿದ ವರದರಾಜು, ನಟರಾಜು ಮುಂತಾದವರನ್ನು ಹಿಂಸಿಸುವಾಗ ಕಿಲ್ಲರ್ ಸೀನನೂ ಗೌರಿಶಂಕ್ರನ ಜೊತೆಗಿದ್ದ. ಸದ್ಯ ನೆಲಮಂಗಲ-ದಾಬಸ್‌ಪೇಟೆ ಸುತ್ತಮುತ್ತ ಎಲ್ಲೆಲ್ಲಿ ಗೌರಿಶಂಕ್ರ ಬಡಬಗ್ಗರ ಆಸ್ತಿ ಕಿತ್ತಿದ್ದಾನೋ ಅದಕ್ಕೆಲ್ಲ ಕಿಲ್ಲರ್ ಸೀನ ಮತ್ತು ಕಡಬಗೆರೆ ಹಂತಕ ಪಾಯ್ಸನ್ ರಾಮನಂಥ ರೌಡಿಗಳೇ ನಿಂತು ಕಾಂಪೌಂಡ್ ಹಾಕಿಸಿದ್ದಾರೆ. ಈ ಬಗ್ಗೆ ಆಸ್ತಿ ಕಳಕೊಂಡವರೇ ಬಂದು ಪೊಲೀಸರಿಗೆ ದೂರು ಕೊಟ್ಟಿದ್ದಾರೆ. ರಾಜ್ಯಪಾಲರಿಗೆ ದೂರು ಕೊಟ್ಟಾಗಲೂ ಪೊಲೀಸರಿಗೆ ಬಿಸಿ ಮುಟ್ಟುತ್ತಿಲ್ಲವೆಂದರೆ, ಗೌರಿಶಂಕ್ರನ ಹಾವಳಿ ಇನ್ನೆಷ್ಟಿರಬೇಡ?

ಚೆನ್ನಿಗಪ್ಪನ ರಕ್ಕಸ ರಾಜ್ಯಕ್ಕೆ ಅಂತ್ಯವೇ ಇಲ್ಲವೇ?



ಮುಗ್ಧ ಜನರ ಆಸ್ತಿಗೆ ಗೌರಿಶಂಕ್ರನ ಬೇಲಿ

ಯಡ್ಡಿಗೆ ಕಲ್ಯಾಣ ಯೋಗ?!

ಎಷ್ಟು ಸತ್ಯವೋ ಎಷ್ಟು ಸುಳ್ಳೋ ಗೊತ್ತಿಲ್ಲ, ಅಂತೂ ಇಂತಹದ್ದೊಂದು ಸುದ್ದಿ ಹಬ್ಬಿ ಅಲ್ಲಲ್ಲಿ ಗುಲ್ಲಾಗುತ್ತಿರುವುದಂತೂ ಸತ್ಯ.

ನಿನ್ನೆ ಮೊನ್ನೆ ರಾಜಕಾರಣಕ್ಕೆ ಬಂದ ಕುಮಾರಸ್ವಾಮಿ ನೋಡು ನೋಡುತ್ತಿದ್ದಂತೆಯೇ ರಾಜ್ಯದ ಮುಖ್ಯಮಂತ್ರಿಯಾಗಿಬಿಟ್ಟರು. ಇಷ್ಟು ಶೀಘ್ರವಾಗಿ ಆ ಹುದ್ದೆಗೇರುವುದೆಂದರೆ ತಮಾಷೆಯಲ್ಲ, ಅವರ ಯಶಸ್ಸಿನ ಹಿಂದೆ ಖಂಡಿತವಾಗಿಯೂ ಯಾವುದೋ ಅತೀತ ಶಕ್ತಿ ಇದ್ದಿರಲೇಬೇಕು ಎಂದು ಯಡ್ಡಿ ತೀರಾ ತಲೆಕೆಡಿಸಿಕೊಂಡು ಭಾರಿ ಸ್ಟಡಿ ಮಾಡಿದರಂತೆ. ಕೊನೆಗೆ ತಾವು ಊಹಿಸಿದ್ದೇ ಸರಿ ಎಂದು ಅವರ ಅಧ್ಯಯನದಿಂದ ಗೊತ್ತಾಯಿತಂತೆ.

ನೋಡಿ, ಕುಮಾರಸ್ವಾಮಿಯವರು ಮುಖ್ಯಮಂತ್ರಿ ಹುದ್ದೆಗೇರುವ ಮೊದಲು ಅದ್ಯಾವುದೋ ಸ್ವಾಮಿಯ ಕಾಲಿಗೆ ಅಡ್ಡಬಿದ್ದು ಅವರ ಸಲಹೆಯ ಮೇರೆಗೆ ತಮ್ಮ ಹೆಸರನ್ನು ಇಂಗ್ಲಿಷಿನಲ್ಲಿ ಸ್ವಲ್ಪ ಬದಲಾಯಿಸಿಕೊಂಡರು, ಕನ್ನಡದಲ್ಲಿ ಹಾಗೇ ಉಳಿಸಿಕೊಂಡರು; ಪಡುವಣ ದಿಕ್ಕಿನ ಕರಾವಳಿ ಕಬಾಬ್ ಕನ್ಯೆಯೊಂದಿಗೆ ಸಂಪರ್ಕ ಬೆಳೆಸಿಕೊಂಡರು. ಇದೆಲ್ಲದರ ಪರಿಣಾಮವಾಗಿ ಇಪ್ಪತ್ತು ತಿಂಗಳು ಮುಖ್ಯಮಂತ್ರಿಯಾಗಿ ಅಧಿಕಾರ ಅನುಭವಿಸಿದರು.

ಇದನ್ನೆಲ್ಲಾ ಯೋಚಿಸಿದ ಯಡ್ಡಿಯು ತಾನು ಬಹುದಿನದಿಂದಲೂ ಕಾಣುತ್ತಿರುವ ಮುಖ್ಯಮಂತ್ರಿ ಹುದ್ದೆಯ ಕನಸು ಎಲ್ಲಿ ಕನಸಾಗಿಯೇ ಉಳಿಯುತ್ತದೋ ಎಂಬ ಭಯದಿಂದ ಬೆಚ್ಚಿಬಿದ್ದಿದ್ದಾರೆ. ಕುಮಾರಸ್ವಾಮಿಯ ಯಶಸ್ಸಿನ ಕುರಿತು ಆಳವಾದ ಅಧ್ಯಯನ ನಡೆಸಿದ ಮೇಲೆ ಅವರು ನಡೆದ ದಾರಿಯಲ್ಲಿ ಸಾಗುವುದೊಂದೇ ತಮ್ಮ ಕನಸನ್ನು ನನಸು ಮಾಡಿಕೊಳ್ಳಲು ಉಳಿದಿರುವ ದಾರಿ ಎಂಬ ತೀರ್ಮಾನಕ್ಕೆ ಬಂದಿದ್ದಾರಂತೆ.

ಇವರೂ ಒಬ್ಬ ಸ್ವಾಮಿಯನ್ನು ಹುಡುಕಿ ಅವರ ಕಾಲಿಗೆ ಅಡ್ಡಡ್ಡ ಬಿದ್ದರಂತೆ. ಆ ಸ್ವಾಮಿ ಇವರಿಗೆ ಮುಖ್ಯಮಂತ್ರಿ ಗದ್ದುಗೆಗೆ ಏರುವುದಕ್ಕಾಗಿ ಏನೆಲ್ಲಾ ಮಾಡಬೇಕು ಎಂದು ಗೈಡ್ ಮಾಡುತ್ತಿದ್ದಾರಂತೆ. ಅವರ ಸಲಹೆಯ ಮೇರೆಗೆ, ಮೊದಲು ಕುಮಾರಸ್ವಾಮಿಯವರಂತೆ ಇವರೂ ತಮ್ಮ ಹೆಸರನ್ನು ಇಂಗ್ಲಿಷಿನಲ್ಲಿ ಬದಲಾಯಿಸಿಕೊಂಡರು. ಆದರೆ, ಕನ್ನಡದಲ್ಲಿ ಹಾಗೇ ಉಳಿಸಿಕೊಂಡರು.

ಎರಡನೆಯದಾಗಿ ಮತ್ತು ಬಹುಮುಖ್ಯವಾಗಿ ಸ್ವಾಮಿಯವರು ತಾವೂ ಕೂಡ ಪಡುವಣ ದಿಕ್ಕಿನ ಕರಾವಳಿ ಕನ್ಯೆಯೊಂದಿಗೆ ವಿವಾಹವಾಗಬೇಕು, ಕನ್ಯೆಯ ಹೆಸರು ಇಂಗ್ಲಿಷಿನ 'ಎಸ್'ನಿಂದ ಶುರುವಾಗುವಂತಿದ್ದರೆ ಇನ್ನೂ ಚೆನ್ನ ಎಂದು ಸಲಹೆ ಇತ್ತಿದ್ದಾರಂತೆ. ಯಡ್ಡಿಗೆ ಈ ಎರಡನೇ ಸಲಹೆಯನ್ನು ಕೇಳಿದಾಕ್ಷಣ ಏನೋ ಒಂಥರಾ ರೋಮಾಂಚನವಾಗಿ ಮುಖವೆಲ್ಲಾ ಕೆಂಪಾಗಿಬಿಟ್ಟಿತಂತೆ. "ರೋಗಿ ಬಯಸಿದ್ದೂ ಹಾಲು ಅನ್ನ, ವೈದ್ಯ ಹೇಳಿದ್ದೂ ಹಾಲು ಅನ್ನ" ಅಂತಾರಲ್ಲ, ಹಾಗೆ ಯಡ್ಡಿಗೆ ಭಾರಿ ಖುಷಿಯಾಗಿ ತಡಮಾಡದೇ ಗುಟ್ಟಾಗಿ ವೈವಾಹಿಕ ಕಾರ್ಯವನ್ನು ಮುಗಿಸಿಬಿಟ್ಟಿದ್ದಾರಂತೆ.

ಆದರೆ, ಸ್ವಾಮಿಯ ಸಲಹೆಯಂತೆ ಎಲ್ಲ ಮುಗಿಸಿದ ಮೇಲೂ ಇನ್ನೂ ಯಾಕೆ ಮುಖ್ಯಮಂತ್ರಿ ಹುದ್ದೆ ಬರಲಿಲ್ಲ ಎಂದು ಬಹಳ ಚಿಂತೆಗೀಡಾಗಿರುವ ಯಡ್ಡಿ ಮತ್ತೆ ಕುಮಾರಸ್ವಾಮಿಯ ಯಶಸ್ಸಿನ ಕುರಿತು ಅಧ್ಯಯನ ಮಾಡಲು ಹೊರಟಿದ್ದಾರಂತೆ.

ಯಡ್ಡಿಯೂರಪ್ಪನವರು ಮದುವೆಯಾಗಿರುವ ಸುದ್ದಿ ಪಕ್ಷದೊಳಗೇ ಇರುವ ಅನಂತೂ ಬಣದವರಿಗೆ ಗೊತ್ತಾಗಿ ಕ್ಯಾತೆ ತೆಗೆಯುತ್ತಿದ್ದಾರಂತೆ. 'ಹೀಗೆ ಅಧಿಕಾರಕ್ಕಾಗಿ ಈ ಇಳೀವಯಸ್ಸಿನಲ್ಲಿ ಎರಡನೆ ಮದುವೆಯಾಗುವುದೆಂದರೇನು, ಇದರಿಂದ ಏಕಪತ್ನೀವ್ರತಸ್ಥ ಶ್ರೀರಾಮನ ಪರಂಪರೆಯ ಸಂಘಪರಿವಾರದ ಇಮೇಜಿಗೆ ಏನಾಗುತ್ತದೆ, ಭಾರತೀಯ ಸಂಸ್ಕೃತಿಗೆ ಇಂತಹದ್ದು ತರವಾದುದಲ್ಲ, ಇಂತಹ ವ್ಯಕ್ತಿ ಮುಖ್ಯಮಂತ್ರಿಯಾದರೆ ರಾಜ್ಯದ ಜನತೆಗೆ ಒಂದು ಕೆಟ್ಟ ಮಾದರಿಯಾಗಿ ಜನರೂ ಇವರನ್ನೇ ಅನುಕರಿಸುವ ಅಪಾಯವಿದೆ. ಆಗ ಪುರುಷರ ಎರಡರಷ್ಟು ಮಹಿಳೆಯರು ಬೇಕಾಗುತ್ತಾರೆ. ಅವರನ್ನು ಎಲ್ಲಿಂದ ತರುವುದು? ಸಾಮಾಜಿಕ ಸಂಕ್ಷೋಭೆಯುಂಟಾಗುತ್ತದೆ. ಹಾಗಾಗಿ ಯಾವುದೇ ಕಾರಣಕ್ಕೂ ಅವರನ್ನು ಮುಖ್ಯಮಂತ್ರಿ ಮಾಡಬಾರದು. ಅವರ ಜಾಗದಲ್ಲಿ ಬೇರೊಬ್ಬ ಏಕಪತ್ನೀವ್ರತಸ್ಥನನ್ನು ಮುಖ್ಯಮಂತ್ರಿಯನ್ನಾಗಿ ಮಾಡಬೇಕು' ಎಂಬ ದೂರನ್ನು ಆರ್‌ಎಸ್‌ಎಸ್‌ನ ರಾಷ್ಟ್ರೀಯ ಕಾರ್ಯಕಾರಿಣಿಗೆ ಒಯ್ದಿದ್ದಾರಂತೆ.

ಈಗ ಧಾರವಾಡದಲ್ಲಿ ನಡೆಯುತ್ತಿರುವ ಆರ್‌ಎಸ್‌ಎಸ್‌ನ ರಾಷ್ಟ್ರೀಯ ಕಾರ್ಯಕಾರಿಣಿಯ ಬೈಠಕ್‌ನ ಅಜೆಂಡಾದಲ್ಲಿ ಈ ವಿಚಾರವೂ ಚರ್ಚೆಯಾಗಲಿದೆಯಂತೆ. ಅಲ್ಲೇನು ತೀರ್ಮಾನ ಆಗುತ್ತೋ ನೋಡಬೇಕು. ಯಡ್ಡಿಗೆ ಮಾತ್ರ ಈಗ 'ಅತ್ತ ದರಿ, ಇತ್ತ ಪುಲಿ' ಎಂಬ ಸಂಕಟ. ಇದನ್ನು ಪರಿಹರಿಸುವುದಕ್ಕೆ ಅದ್ಯಾವ ಸ್ವಾಮಿಯ ಕಾಲಿಗೆ ಅಡ್ಡ ಬೀಳ್ತಾರೋ ಗೊತ್ತಿಲ್ಲ.

■ ಕಡೇನಂದಿಹಳ್ಳಿ ಕುಮಾರ್



ಪುತ್ತಿಗೆ ಶ್ರೀಗೆ ಕೃಷ್ಣಪೂಜೆ ನಿರಾಕರಣೆ

ಉಡುಪಿ ಶ್ರೀಕೃಷ್ಣನ ಹುಂಡಿಗಾಗಿ ಅಷ್ಟಮಠಗಳ ಕಿತ್ತಾಟ




ಉಡುಪಿಯ ಅಷ್ಟಮಠಗಳ ಇತ್ತೀಚಿನ ಕಾರ್ಯವೈಖರಿಗಳನ್ನು ನೋಡಿದರೆ ಅವು ಧಾರ್ಮಿಕ ಶ್ರದ್ಧಾಕೇಂದ್ರಗಳೋ ಅಥವಾ ರಾಜ್ಯ-ದೇಶ ರಾಜಕಾರಣದ ಅಡ್ಡೆಗಳೋ ಎಂಬ ಅನುಮಾನ ಬಾರದಿರದು. ಪೇಜಾವರ ಸ್ವಾಮಿ ಬಿಡ್ಡಾಡಿಕೊಂಡು ದಿನಕ್ಕೊಂದು ಹೇಳಿಕೆ ನೀಡುತ್ತಾ ಏಕಕಾಲದಲ್ಲಿ ಸಂಘಪರಿವಾರದ ಸಿದ್ಧಾಂತಿಯೂ ಮತ್ತು ಪಾರ್ಟ್ ಟೈಮ್ ರಾಜಕಾರಣಿಯೂ ಆಗಿಹೋಗಿದ್ದರೆ ಉಳಿದ ಮಠಗಳೂ ಇದಕ್ಕಿಂತ ಭಿನ್ನವಾಗಿಲ್ಲ. ಈ ಮಠಗಳು ಶ್ರೀಸಾಮಾನ್ಯನ ಉದ್ಧಾರಕ್ಕಾಗಿ ಕಿಂಚಿತ್ತೂ ಶ್ರಮವಹಿಸಿದ ಉದಾಹರಣೆಗಳಿಲ್ಲ. ಆದರೆ, ಅದೇ ಶ್ರೀಸಾಮಾನ್ಯ ಜನರಿಂದ ದಕ್ಷಿಣೆ ಎತ್ತಿ ದೋಚುವುದರಲ್ಲಿ ಎತ್ತಿದ ಕೈ.

ಈತನಕ ಶೂದ್ರರನ್ನು ತುಳಿಯುವುದಕ್ಕೆ, ಜಾತೀಯತೆಯನ್ನು ಕಟ್ಟುನಿಟ್ಟಾಗಿ ಪಾಲಿಸಿ ಪಕ್ಕಾ ಸಂವಿಧಾನ ವಿರೋಧಿಯಾಗಿ ನಡೆದುಕೊಳ್ಳುವುದಕ್ಕೆ ಹೆಸರು ಮಾಡಿದ್ದ ಈ ಅಷ್ಟ ಮಠಗಳು ಈಗ ತಮ್ಮೊಳಗಿನ ಕಚ್ಚಾಟಕ್ಕೂ ಪ್ರಸಿದ್ಧಿಯಾಗುತ್ತಿವೆ. ಇದಕ್ಕೆ ಸಾಗರೋಲ್ಲಂಘನೆ ಮಾಡಿದ ಅಪರಾಧಕ್ಕಾಗಿ ಪುತ್ತಿಗೆ ಶ್ರೀಗೆ ಪರ್ಯಾಯವನ್ನು ನಿರಾಕರಿಸಿ, ಶ್ರೀಕೃಷ್ಣನ ಪೂಜೆ, ದರ್ಶನವನ್ನು ಮಾಡದಿರುವಂತೆ ನಿರ್ಬಂಧ ಹೇರಿರುವುದು ಒಂದು ಸಣ್ಣ ಉದಾಹರಣೆಯಷ್ಟೆ.

ಏನಿದು ಪರ್ಯಾಯ?

ವೈಷ್ಣವ ಪರಂಪರೆಯ ಉಡುಪಿಯ ಅಷ್ಟ ಮಠಗಳು ತಮ್ಮ ನಡುವಿನ ಸಮನ್ವಯತೆಗಾಗಿ ಹಲವಾರು ನಿಯಮಾವಳಿಗಳನ್ನೊಳಗೊಂಡ ಒಂದು ಅಲಿಖಿತ ಸಂವಿಧಾನವನ್ನೇ ರೂಪಿಸಿಕೊಂಡಿವೆ. ಇಂತಹ ನಿಯಮಗಳಲ್ಲಿ ಉಡುಪಿ ಶ್ರೀಕೃಷ್ಣ ದೇವಾಲಯದ ಉಸ್ತುವಾರಿಗೆ ಸಂಬಂಧಿಸಿದ ಪರ್ಯಾಯವೂ ಒಂದು. ಇದರ ಪ್ರಕಾರ ಪ್ರತೀ ಎರಡು ವರ್ಷಗಳಿಗೊಮ್ಮೆ ಸರತಿಯ ಪ್ರಕಾರ ಒಂದೊಂದು ಮಠ ಕೃಷ್ಣ ದೇವಾಲಯದ ಉಸ್ತುವಾರಿಯನ್ನು ನೋಡಿಕೊಳ್ಳುತ್ತದೆಯಲ್ಲದೆ ಎರಡು ವರ್ಷಗಳ ಕಾಲ ದೇವಾಲಯಕ್ಕೆ ಬರುವ ಆದಾಯದ ಒಡೆಯನೂ ಆಗಿರುತ್ತದೆ. ಇದನ್ನು 'ಪರ್ಯಾಯ' ಎಂದು ಕರೆಯಲಾಗುತ್ತದೆ. ಈ ನಿಯಮದ ಪ್ರಕಾರ ಅಷ್ಟಮಠಗಳ ಯಾವುದಾದರೊಬ್ಬ ಸ್ವಾಮಿಯು ಸಮುದ್ರವನ್ನು ದಾಟಿದರೆ ಅವರಿಗೆ ಶ್ರೀಕೃಷ್ಣನ ಪೂಜೆ ಮಾಡುವ, ದರ್ಶನ ಮಾಡುವ ಅಧಿಕಾರ ಇರುವುದಿಲ್ಲ.



ಸುಗುಣೇಂದ್ರ ತೀರ್ಥ


ವಾಸ್ತವದಲ್ಲಿ ಇಂತಹದ್ದೊಂದು ನಿಯಮ ಅಷ್ಟ ಮಠಗಳಿಗೆ ಅಗತ್ಯವಾಗಿ ಬೇಕು. ಇಲ್ಲದಿದ್ದರೆ, ಕೋಟ್ಯಂತರ ರೂಪಾಯಿಗಳ ಆದಾಯ ಬರುವ ಶ್ರೀಕೃಷ್ಣ ದೇವಾಲಯದ ಉಸ್ತುವಾರಿಯನ್ನು ಅಷ್ಟ ಮಠಗಳಲ್ಲಿ ಯಾವ ಮಠ ನೋಡಿಕೊಳ್ಳಬೇಕು, ಅದರ ಆದಾಯವನ್ನು ಯಾರು ಬಳಸಿಕೊಳ್ಳಬೇಕು ಎಂಬ ಬಗ್ಗೆ ದೊಡ್ಡ ಯುದ್ಧವೇ ನಡೆದು ರಕ್ತಪಾತವೇ ಆಗಿಬಿಡುತ್ತದೆ. ಆದ್ದರಿಂದ ಈ ಪರ್ಯಾಯ ಎಂಬುದು ಉಡುಪಿಯ ಶ್ರೀಕೃಷ್ಣನ ಹುಂಡಿಯನ್ನು ಸರದಿ ಪ್ರಕಾರ ನುಂಗುವುದಕ್ಕೆ ಅಷ್ಟ ಮಠಗಳು ಮಾಡಿಕೊಂಡ ನಿಯಮ ಎಂದು ಒಂದೇ ಮಾತಿನಲ್ಲಿ ಹೇಳಬಹುದು.

ಈ ಹಿಂದೆ ಪೇಜಾವರರ ಉತ್ತರಾಧಿಕಾರಿ ವಿಶ್ವವಿಜಯ ತನ್ನ ಹಿರಿಯ ವಿಶ್ವೇಶ ತೀರ್ಥರ ಅನುಮತಿಯನ್ನು ಪಡೆದು ಅಮೆರಿಕಕ್ಕೆ ಹೋಗಿದ್ದ. ಆದರೆ ಇದನ್ನು ಇತರ ಮಠಾಧೀಶರು ವಿರೋಧಿಸಿದ್ದರಿಂದ ಆತ ತನ್ನ ಸ್ಥಾನಕ್ಕೇ ರಾಜೀನಾಮೆ ನೀಡಿ ಜಾಗ ಖಾಲಿಮಾಡಿದ್ದ. ನಂತರ ಅದಮಾರು ಮಠದ ವಿಭುದೇಶ ಶ್ರೀಗಳು ತಮ್ಮ ಪೂರ್ಣಪ್ರಜ್ಞಾ ವಿದ್ಯಾಪೀಠಕ್ಕೆ ಅನಿವಾಸಿ ಭಾರತೀಯರಿಂದ ಹಣ ಎತ್ತಲು ವಿದೇಶಕ್ಕೆ ಹೋಗಿ ಪರ್ಯಾಯ ತಪ್ಪಿಸಿಕೊಂಡಿದ್ದರು. ಆದರೆ ಪೂಜೆ ಪುನಸ್ಕಾರಗಳನ್ನು ತಮ್ಮ ಕಿರಿಯ ಸ್ವಾಮಿಗಳಿಗೆ ವಹಿಸಿಕೊಟ್ಟು ಕೃಷ್ಣನ ಆದಾಯ ಕೈತಪ್ಪದಂತೆ ನೋಡಿಕೊಳ್ಳುವಲ್ಲಿ ಯಶಸ್ವಿಯಾಗಿದ್ದರು. ಈಗ ಸುಗುಣೇಂದ್ರತೀರ್ಥರ ಸರದಿ.

ಸುಗುಣೇಂದ್ರ ತೀರ್ಥರಿಗೆ ಪರ್ಯಾಯ ನಿರಾಕರಣೆ

ಈ ಬಾರಿಯ 'ಪರ್ಯಾಯದ ಸರತಿ ಪುತ್ತಿಗೆ ಮಠದ ಸುಗುಣೇಂದ್ರ ತೀರ್ಥ ಅವರಿಗೆ ಬರುವುದಿತ್ತು, ಬರುವ ಜನವರಿಯಲ್ಲಿ ಅವರು ಪರ್ಯಾಯ ಸ್ವೀಕರಿಸುವುದಕ್ಕೆ ಎಲ್ಲ ಸಿದ್ಧತೆಗಳೂ ನಡೆದಿದ್ದವು. ಆದರೆ, ಸಾಗರೋಲ್ಲಂಘನ ಮಾಡಬಾರದು ಎಂಬ ನಿಯಮವನ್ನು ಧಿಕ್ಕರಿಸಿದ ಅವರು ಅಮೆರಿಕ ಪ್ರವಾಸ ಕೈಗೊಂಡರು. ಇದನ್ನೇ ಕಾಯುತ್ತಿದ್ದ ಅಷ್ಟ ಮಠಾಧೀಶರಾದ ಪರ್ಯಾಯ ಕೃಷ್ಣಾಪುರ ಸ್ವಾಮಿ, ಪೇಜಾವರ ಸ್ವಾಮಿ, ಪಲಿಮಾರು ಸ್ವಾಮಿ, ಕಾಣಿಯೂರು ಹಾಗೂ ಸೋದೆ ಸ್ವಾಮಿಗಳು ಸಭೆ ನಡೆಸಿ ಸುಗುಣೇಂದ್ರರಿಗೆ ಪರ್ಯಾಯವನ್ನು ನಿರಾಕರಿಸುವ ನಿರ್ಧಾರ ತೆಗೆದುಕೊಂಡೇ ಬಿಟ್ಟರು. ಸುಗುಣೇಂದ್ರರ ಭಂಟನಾದ ಇನ್ನೊಬ್ಬ ಅಷ್ಟ ಮಠಾಧೀಶ ಶಿರೂರು ಮಠದ ಲಕ್ಷ್ಮೀವರತೀರ್ಥ, ಅದಮಾರು ಸ್ವಾಮಿ ಮತ್ತು ಪುತ್ತಿಗೆ ಸುಗುಣೇಂದ್ರರು ಅನುಪಸ್ಥಿತಿಯಲ್ಲಿರುವಾಗಲೇ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಸಾಗರೋಲ್ಲಂಘನೆ ಮಾಡಿದರೆ ಪರ್ಯಾಯ ಸಿಗುವುದಿಲ್ಲ ಎಂದು ಗೊತ್ತಿದ್ದರೂ ಸುಗುಣೇಂದ್ರರು ಯಾಕೆ ಅಮೆರಿಕ ಪ್ರವಾಸ ಕೈಗೊಂಡರು ಎಂಬುದು ಅರ್ಥವಾಗದ ಪ್ರಶ್ನೆ ಏನಲ್ಲ. ಅವರು ಉಡುಪಿಯಲ್ಲಿ 'ಗೀತಾ ಮಂದಿರ' ಎಂಬ ಭವ್ಯ ಮಂದಿರವೊಂದನ್ನು ಕಟ್ಟಿಸಿದ್ದು ಅದರ ಹೆಸರಿನಲ್ಲಿ ಅಮೆರಿಕದಲ್ಲಿ ವಾಸವಾಗಿರುವ ಶ್ರೀಮಂತ ಅನಿವಾಸಿ ಭಾರತೀಯರಿಂದ ಕೋಟಿಗಟ್ಟಲೆ ಹಣ ಎತ್ತುವುದು ಅವರ ಪ್ರವಾಸದ ಮುಖ್ಯ ಉದ್ದೇಶವಾಗಿತ್ತು. ಅಮೆರಿಕದ ಅನಿವಾಸಿ ಭಾರತೀಯರು ನೀಡುವ ಹಣಕ್ಕೆ ಹೋಲಿಸಿದರೆ ಉಡುಪಿಯ ಎರಡು ವರ್ಷಗಳ ಪರ್ಯಾಯದಿಂದ ಬರುವ ಹಣ ಲೆಕ್ಕಕ್ಕೇ ಇಲ್ಲ ಎಂದು ಅಂದಾಜಿಸಿ ಅವರು ಈ ಪ್ರವಾಸ ಕೈಗೊಂಡಿದ್ದಾರೆ. ಆದರೆ ಅವರ ನಿರೀಕ್ಷೆ ಹುಸಿಯಾಗಿ ಹೋಗಿದೆ. ಅತ್ತ ಅಮೆರಿಕದಲ್ಲೂ ಇವರಿಗೆ ಜೇಬು ತುಂಬಲಿಲ್ಲ, ಇತ್ತ ಉಡುಪಿಗೆ ಬಂದರೆ ಇಲ್ಲಿ ಪರ್ಯಾಯವೂ ಇಲ್ಲ. ಹೀಗಾಗಿ ಏನಾದರೂ ಮಾಡಿ ಪರ್ಯಾಯದ ನೀತಿ ನಿಯಮಗಳನ್ನು ಮುರಿದು, ತಾನೊಬ್ಬ ಪ್ರಗತಿಪರ ಸ್ವಾಮಿ ಎಂದು ಬಿಂಬಿಸುತ್ತಾ ಪರ್ಯಾಯವನ್ನು ಪಡೆಯಲೇಬೇಕೆಂಬ ಹಠಕ್ಕೆ ಸುಗುಣೇಂದ್ರರು ಬಿದ್ದಿದ್ದಾರೆ. ಈ ಕಾರ್ಯದಲ್ಲಿ ತನಗೆ ಸಾಥ್ ನೀಡುವುದಕ್ಕಾಗಿ ಪಾರ್ಟ ಟೈಮ್ ರೌಡಿ ಎಂದೇ ಪ್ರಸಿದ್ಧನಾಗಿರುವ ಇನ್ನೊಬ್ಬ ಅಷ್ಟಮಠಾಧೀಶ ಶಿರೂರು ಮಠದ ಲಕ್ಷ್ಮೀವರತೀರ್ಥನನ್ನು ಜೊತೆಗಿಟ್ಟುಕೊಂಡಿದ್ದಾರೆ. ಈ ಇಬ್ಬರೂ ಈಗ 'ನೀನನಗಿದ್ದರೆ ನಾ ನಿನಗೆ' ಎಂಬಂತೆ ತಮ್ಮ ಪಂಚೆಯನ್ನು ಬಿಗಿ ಮಾಡಿಕೊಂಡು ಉಳಿದ ಅಷ್ಟ ಮಠಾಧೀಶರ ವಿರುದ್ಧ ಧರ್ಮಯುದ್ಧಕ್ಕಿಳಿದಿದ್ದಾರೆ.



ಪೇಜಾವರ ಶ್ರೀ

ಲಕ್ಷ್ಮೀವರತೀರ್ಥನಿಗೂ ಸುಗುಣೇಂದ್ರನ ಸಾಥ್ ಬೇಕಿತ್ತು, ಏಕೆಂದರೆ, ಅಷ್ಟ ಮಠಗಳಲ್ಲಿ ಪೇಜಾವರದ ವಿಶ್ವೇಶತೀರ್ಥ ಸ್ವಾಮಿಯ ವರ್ಚಸ್ಸು ದಿನದಿಂದ ದಿನಕ್ಕೆ ಬೆಳೆಯುತ್ತಿದ್ದು ಲಕ್ಷ್ಮೀವರತೀರ್ಥನನ್ನು ಕೇಳುವವರಿಲ್ಲದಂತಾಗಿತ್ತು. ಅಲ್ಲದೇ, ಪೇಜಾವರ ಶ್ರೀ ಕೂಡ ಈತನನ್ನು ತುಳಿಯಲು ಬಹುದಿನಗಳಿಂದ ಮಸಲತ್ತು ನಡೆಸುತ್ತಿರುವುದು ಲಕ್ಷ್ಮೀವರತೀರ್ಥನನ್ನು ಕೆರಳಿಸಿತ್ತು. ಹೀಗಾಗಿ ಸುಗುಣೇಂದ್ರರ ಜೊತೆಗಿದ್ದರೆ ಪೇಜಾವರ ಶ್ರೀಯನ್ನು ಪಳಗಿಸಬಹುದು ಎಂಬುದು ಅವರ ತರ್ಕ. ಅಲ್ಲದೆ, ಲಕ್ಷ್ಮೀವರತೀರ್ಥರ ಐಲುಪೈಲುಗಳ ಪುರಾಣ ಗ್ರಂಥ ದೊಡ್ಡದಾಗಿ ಬೆಳೆಯುತ್ತಿದೆ. ಇವುಗಳನ್ನೆಲ್ಲಾ ಮುಚ್ಚಿಹಾಕಬೇಕೆಂದರೆ ಅಷ್ಟ ಮಠದ ಕನಿಷ್ಠ ಇನ್ನೊಬ್ಬ ಸ್ವಾಮಿಯಾದರೂ ತನ್ನ ಜೊತೆಗಿರಬೇಕು ಎಂದು ಲೆಕ್ಕಾಚಾರ ಹಾಕಿ ಸುಗುಣೇಂದ್ರರ ಪರವಾಗಿ ಈಗ ಫೀಲ್ಡಿಗಿಳಿದಿದ್ದಾರೆ.

ತಮ್ಮ ಅನುಪಸ್ಥಿತಿಯಲ್ಲಿ ಐದು ಜನ ಅಷ್ಟಮಠಾಧೀಶರು ಸುಗುಣೇಂದ್ರರಿಗೆ ಪರ್ಯಾಯ ನಿರಾಕರಿಸುವ ತೀರ್ಮಾನ ತೆಗೆದುಕೊಂಡ ತಕ್ಷಣ ಅದರ ವಿರುದ್ಧ ಕಾರ್ಯಾಚರಣೆ ನಡೆಸುತ್ತಿದ್ದಾರೆ. "ಸುಗುಣೇಂದ್ರರು ತಮ್ಮ ಎರಡನೇ ಪರ್ಯಾಯ ಮುಗಿಸಿದ ಮೇಲೆ ಒಟ್ಟ
ಮೂರು ಬಾರಿ ವಿದೇಶ ಪ್ರಯಾಣ ಮಾಡಿದ್ದಾ
ಈತನಕ ಯಾರೂ ಚಕಾರ ಎತ್ತಿಲ್ಲ. ಈಗ ಮೂರನೇ
ಬಾರಿಯ ಪರ್ಯಾಯ ಸರದಿ ಬಂದ ಮೇ
ಪರ್ಯಾಯ ಸಮಾರಂಭಕ್ಕಾಗಿ ಎಲ್ಲಾ ಸಿದ್ಧತೆಗಳ
ಮುಗಿಯುವತನಕ ಯಾರೂ ತಕರಾರು ಎತ್ತಿಲ್ಲ. ಎ
ಮುಗಿದ ಮೇಲೆ ಈಗ ಕ್ಯಾತೆ ತೆಗೆಯುವುದರ ಹಿಂ
ಸ್ವಾಮಿಗಳನ್ನು ಬಲಹೀನರನ್ನಾಗಿ ಮಾಡುವ ಕುತಂ
ಅಡಗಿದೆ. ಇದಕ್ಕೆ ನಾವು ಅವಕಾಶ ಕೊಡುವುದಿ
ಪ್ರತೀ ಪರ್ಯಾಯ ಸಂದರ್ಭದಲ್ಲೂ ಜಗಳ ಇರ
ಇದೆ. ಈ ಬಾರಿಯೂ ಇದೆ ಅಷ್ಟೆ. ಸುಗುಣೇಂದ್ರ
ಪರ್ಯಾಯ ನಡೆಸುತ್ತಾರೆ" ಎಂದು ಸುಗುಣೇಂ
ಮತ್ತು ಲಕ್ಷ್ಮೀವರತೀರ್ಥರ ಬಂಟ ಬಣ ಸೆಡ್ಡುಹೊಡೆ
ನಿಂತಿದೆ. ಸುಗುಣೇಂದ್ರತೀರ್ಥರಿಗೆ ಶ್ರೀಕೃಷ್ಣನ ದರ್ಶ
ಪೂಜೆ ದೊರೆಯದಿದ್ದರೂ ಪರವಾಗಿಲ್ಲ, ಪೂಜ
ಪುನಸ್ಕಾರಗಳನ್ನು ಬೇರೆಯವರಿಗೆ ವಹಿಸಿಕೊಡಬಹುದ
ಆದರೆ, ಕೃಷ್ಣದೇವಾಲಯದ ಉಸ್ತುವಾರಿ ಮತ್ತ
ಅದರಿಂದ ಬರುವ ಆದಾಯಗಳು ಕೈತಪ್ಪದಂ
ನೋಡಿಕೊಳ್ಳಲು ಸಜ್ಜಾಗಿದ್ದಾರೆ.

ಒಳಜಗಳ ಬೀದಿಜಗಳವಾಗುತ್ತಿರುವುದನ್ನು ನೋಡಿದ ಪೇಜಾವರ ಸ್ವಾಮಿ ಅಷ್ಟ ಮಠಗಳ ಹುಳುಕು ಹೊರಬರದಂತೆ ತಡೆಯಲು ಹರಸಾಹಸ ನಡೆಸುತ್ತಿದ್ದಾರೆ. ಆಡಳಿತದ ಉಸ್ತುವಾರಿಯನ್ನು ಪುತ್ತಿಗೆ ಮಠಕ್ಕೆ ವಹಿಸಲಾಗುವುದು, ಆದರೆ ಪೂಜೆ ಪುನಸ್ಕಾರಗಳನ್ನು ಸುಗುಣೇಂದ್ರರು ಮಾಡುವಂತಿಲ್ಲ ಎಂಬ ಮಾತನ್ನು ಈಗಾಗಲೇ ಪೇಜಾವರ ಹೇಳಿಕೆ ಕೊಟ್ಟಿರುವುದನ್ನು ನೋಡಿದರೆ ಸುಗುಣೇಂದ್ರ ಮತ್ತು ಲಕ್ಷ್ಮೀವರತೀರ್ಥರ ಆರ್ಭಟಕ್ಕೆ
ಪೇಜಾವರ ಬೆಚ್ಚಿಬಿದ್ದಿರುವುದು ಗೊತ್ತಾಗುತ್ತದೆ. ಈ
ತಿಂಗಳ 28ಕ್ಕೆ ಇನ್ನೊಂದು ಸಭೆ ನಡೆಸಿ, ಸುಗುಣೇಂದ್ರ
ಸಮ್ಮುಖದಲ್ಲಿಯೇ ಸೂಕ್ತ ನಿರ್ಣಯ ತೆಗೆದುಕೊ
ಲಾಗುವುದೆಂದು ಅವರು ಹೇಳಿದ್ದಾರೆ. ಅಂದ
ನಡೆಯಲಿರುವ ಜಂಗಿ ಕುಸ್ತಿಯಲ್ಲಿ ನರಪೇತಲ ಪೇಜಾವರ
ಕೈ ಮೇಲಾಗುತ್ತೋ ಅಥವಾ ಪಾರ್ಟ್ ಟೈಂ ರೌ
ಲಕ್ಷ್ಮೀವರತೀರ್ಥರ ಕೈ ಮೇಲಾಗುತ್ತೋ ನೋಡಬೇಕು
ಇವರ ಜಂಗಿ ಕುಸ್ತಿಯಲ್ಲಿ ಯಾರ್‍ಯಾರ ಐಲುಪೈಲುಗಳ
ಬಯಲಾಗುತ್ತವೆಯೋ ನೋಡಬೇಕು. ಅಂತೂ
ಕರ್ನಾಟಕದ ಜನತೆಗೊಂದು ಮನರಂಜನೆ ಯಂತೂ
ಸಿಗುತ್ತದೆ.

– ಕುಮಾರ್ ಬುರಡಿಕಟ

ಪರ್ಯಾಯ ಸ್ವಾಮಿಗೆ ಆದಾಯವೆಷ್ಟು?

ಉಡುಪಿಯ ಶ್ರೀಕೃಷ್ಣ ದೇವಾಲಯದ ಆದಾಯ
ವನ್ನು ಗಮನಿಸಿದರೆ 'ಪರ್ಯಾಯಕ್ಕೆ ಯಾಕಿಷ್ಟು
ಪೈಪೋಟಿ ಎಂಬುದು ಅರ್ಥವಾಗುತ್ತದೆ. ಪರ್ಯಾಯ
ಸಮಾರಂಭಕ್ಕೆ ಮೊದಲು ಸರತಿಯ ಸ್ವಾಮಿ ಇಡೀ
ದೇಶದಾದ್ಯಂತ ಪ್ರಯಾಣ ಮಾಡಿ ಕೋಟಿಗಟ್ಟಲೆ ಹಣ
ಸಂಗ್ರಹಿಸಿಕೊಂಡು ಬರುತ್ತಾರೆ. ಇದು ಪರ್ಯಾಯ
ಪಟ್ಟಕ್ಕೇರುವ ಮೊದಲಿನ ಮಾತು.

ಪರ್ಯಾಯ ಪಟ್ಟಕ್ಕೇರಿದ ನಂತರ ಶ್ರೀಕೃಷ್ಣ
ದೇವಾಲಯಕ್ಕೆ ಬರುವ ಕಾಣಿಕೆ, ಫೀಜು ಸೇರಿದರೆ
ದಿನವೊಂದಕ್ಕೆ ಏನಿಲ್ಲವೆಂದರೂ ದೇವಾಲಯದ
ಆದಾಯ ಎರಡು ಲಕ್ಷ ದಾಟುತ್ತದೆ. ಇಲ್ಲಿ ಶ್ರೀಕೃಷ್ಣನ
ವಿಗ್ರಹವನ್ನು ಒಮ್ಮೆ ರಥಬೀದಿಯಲ್ಲಿ ಸುತ್ತಿಸಿಕೊಂಡು
ಬರುವ 'ಚಾಮರ ಸೇವೆ' ಮಾಡಿಸಲು ಭಕ್ತ
10,000 ರೂ.ಗಳನ್ನು ತೆರಬೇಕಾಗುತ್ತದೆ. ದಿನ
ವೊಂದಕ್ಕೆ ಕನಿಷ್ಠ 10 ಚಾಮರ ಸೇವೆಗಳು ನಡೆಯು
ತ್ತವೆ. ಅಂದರೆ, ಇದರಿಂದಲೇ ದೇವಾಲಯಕ್ಕೆ ಪ್ರತಿದಿನ
ಒಂದು ಲಕ್ಷ ರೂಪಾಯಿ ಬಂದು ಸೇರುತ್ತದೆ.

ಪರ್ಯಾಯ ಸ್ವಾಮಿಗಳೇ ಈ ಹಣಕ್ಕೆಲ್ಲಾ ಒಡೆಯ
ರಾಗಿರುತ್ತಾರೆ. ಅವರು ಅದನ್ನು ಕೃಷ್ಣ ದೇಗುಲದ
ಉದ್ಧಾರಕ್ಕಾಗಲೀ, ಜನಸಾಮಾನ್ಯರ ಕಲ್ಯಾಣಕ್ಕಾಗಲೀ
ಬಳಸುವುದಿಲ್ಲ. ಅದೇನಿದ್ದರೂ ಪರ್ಯಾಯ ಸ್ವಾಮಿಯ
ಜೇಬು ಸೇರುತ್ತದೆ. ಅದನ್ನು ಆತ ತನ್ನ ಮನಸ್ಸಿಗೆ
ಬಂದಂತೆ ಮಜಾ ಮಾಡಬಹುದು. ಈತನಕ ಬಂದ
ಎಲ್ಲ ಪರ್ಯಾಯ ಸ್ವಾಮಿಗಳು ಮಾಡಿದ್ದೂ ಇದನ್ನೆ.
ಅಷ್ಟ ಮಠಗಳ ನಡುವಿನ ಜಗಳ ಕೂಡ ಈ
ಕಾರಣಕ್ಕಾಗಿಯೇ.

ಲಕ್ಷ್ಮೀವರತೀರ್ಥರ ಐಲುಪೈಲುಗಳು

ಮಂಗನ ಕೈಯಲ್ಲಿ ಮಾಣಿಕ್ಯ ಕೊಡೋದು ಲಕ್ಷ್ಮೀವರತೀರ್ಥರ ಕೈಯಲ್ಲಿ ಮಠ ಕೊಡೋದು ಎರಡೂ ಒಂದೆ ಅಂತ ಕಾಣುತ್ತೆ. ಅಷ್ಟ ಮಠವೊಂದಕ್ಕೆ ಇಂತಹ ಸ್ವಾಮಿಯೊಬ್ಬರು ಸಿಕ್ಕಿರುವುದು ಭಕ್ತಸಮೂಹಕ್ಕೆ ಒದಗಿದ ಒಂದು ದುರಂತವೇ ಸರಿ.

ಈತ ವರ್ಚಸ್ಸು, ಹಣ, ಕೀರ್ತಿ, ಪ್ರಭಾವ ಎಲ್ಲದರಲ್ಲೂ ಪೇಜಾವರನನ್ನು ಮೀರಿಸಬೇಕು ಎಂದು ರೇಸಿಗಿಳಿದಿದ್ದಾನೆ. ಹಿಂದುತ್ವದ ಪ್ರಚಾರಕನಾಗಿ, ಸಿದ್ಧಾಂತಿಯಾಗಿರುವ ಪೇಜಾವರರನ್ನು ಸಂಘಪರಿವಾರದ ಚೆಡ್ಡಿಗಳು ಹೊತ್ತು ಮೆರೆಸುತ್ತಿರುವುದು ಲಕ್ಷ್ಮೀವರತೀರ್ಥನಿಗೆ ಮೆಣಸಿನಕಾಯಿ ಮುರಿದಂತಾಗಿದೆ. ಹೀಗಾಗಿ, ತಾನೂ ಪೇಜಾವರನಿಗಿಂತ ಕಡಿಮೆ ಏನಲ್ಲ ಎಂದು ತೋರಿಸಿಕೊಳ್ಳಲು ಭಜರಂಗದಳಗಳಂತಹ ಕೊಲೆಗಡುಕ ಸಂಘಟನೆಗಳೊಂದಿಗೆ ಸೇರಿ "ಮುಸ್ಲಿಮರ ಕೈ ಕಡಿಯಿರಿ, ಕೊಲೆ ಮಾಡಿ" ಎಂದು ಬಹಿರಂಗವಾಗಿ ಹೇಳುತ್ತಾನೆ. ಬಿಜೆಪಿ ಏನಾದರೂ ರಾಜ್ಯದಲ್ಲಿ ಅಧಿಕಾರಕ್ಕೆ ಬಂದರೆ ಖುದ್ದು ಮಚ್ಚು, ರಾಡು ಹಿಡಿದು ಬೀದಿಗಿಳಿದುಬಿಡುತ್ತಾನೋ ಏನೋ? ಇದು ಇವನ ಒಂದು ಮುಖ.

ಈತನ ರಾಸಲೀಲೆಗಳನ್ನು ಲೆಕ್ಕ ಹಾಕುತ್ತಾ ಹೋದರೆ ಅದೇ ಒಂದು ಕಾಮಸೂತ್ರ ಗ್ರಂಥವಾಗಿಬಿಡುತ್ತದೆ. ಈ ಕಾರಣಕ್ಕಾಗಿಯೇ ಈತನನ್ನು ಲಕ್ಷ್ಮೀವರತೀರ್ಥ ಸ್ವಾಮಿ ಎಂದು ಕರೆಯುವುದಕ್ಕಿಂತ ರಾಸಲೀಲಾ ಸ್ವಾಮಿ ಎಂದು ಕರೆದರೇನೇ ಉಡುಪಿಯಲ್ಲಿ ಜನ ಬೇಗ ಅರ್ಥ ಮಾಡಿಕೊಳ್ಳುತ್ತಾರೆ. ಅಂದರೆ, ಈತ ಎಲ್ಲವನ್ನೂ ಬಿಟ್ಟ ಸನ್ಯಾಸಿ ಏನಲ್ಲ; ಎಲ್ಲಾ ಭೋಗ-ಭಾಗ್ಯಗಳನ್ನು ಅನುಭವಿಸುವ ಮಹಾನುಭೋಗಿ. ಈತನಿಗೆ ಅನಧಿಕೃತವಾಗಿ ಎರಡು ಮಕ್ಕಳಿವೆ. ಮೊದಲನೆಯದಕ್ಕೆ ಈಗ 5-6 ವರ್ಷ ತುಂಬಿರಬೇಕು. ಎರಡನೆಯದು ಇನ್ನೂ ಆರು ತಿಂಗಳ ಹಸುಗೂಸು. ಇದು ಇವನ ಇನ್ನೊಂದು ಮುಖ. ನಮಗೆ ಕಾಣದ ಇನ್ನೂ ಅದೆಷ್ಟು ಮುಖಗಳಿವೆಯೋ?

ಕರಾವಳಿಯನ್ನು ತಮ್ಮ ಬೇಸ್ ಮಾಡಿಕೊಂಡು ಕರ್ನಾಟಕವನ್ನು ಗುಜರಾತ್ ಮಾಡುವುದಕ್ಕೆ ಹೊರಟಿರುವ ಚೆಡ್ಡಿಗಳು ಅಲ್ಪಸಂಖ್ಯಾತರ ಮೇಲೆ ಅವ್ಯಾಹತ ಹಲ್ಲೆಗಿಳಿದಿರುವುದು ಎಲ್ಲರಿಗೂ ಗೊತ್ತಿರುವ ವಿಚಾರವೆ. ಅವರ ದೌರ್ಜನ್ಯವನ್ನು ಕಾನೂನಿನ ಕಣ್ಣಿನಿಂದ ಮುಚ್ಚಿಹಾಕುವುದಕ್ಕೆ ಮತ್ತು ದೌರ್ಜನ್ಯಗಳಲ್ಲಿ ಸಾಥ್ ನೀಡುವುದಕ್ಕೆ ಪೊಲೀಸ್ ಮತ್ತು ಆಡಳಿತ ಯಂತ್ರಾಂಗವೂ ಅವರ ಜೊತೆ ಕೈಜೋಡಿಸುತ್ತಿರುವುದು ಇತ್ತೀಚಿನ ದಿನಗಳಲ್ಲಿ ಜೋರಾಗಿಯೇ ನಡೆದಿದೆ. ಇದಕ್ಕೆ ಪಡುಬಿದ್ರಿಯಲ್ಲಿ ನಡೆದ ಘಟನೆಯೇ ಜೀವಂತ ಸಾಕ್ಷಿ.

ಕರಾವಳಿಯಲ್ಲಿ ಚೆಡ್ಡಿ-ಪೊಲೀಸ್ ಭಾಯಿ ಭಾಯಿ

ಒಂದು ವಾರದ ಹಿಂದೆ ಸ್ಥಳೀಯ ಭಜರಂಗದಳದ ಕಾರ್ಯಕರ್ತನೊಬ್ಬನನ್ನು ಪಲ್ಸರ್ ಬೈಕ್‌ನಲ್ಲಿ ಬಂದ ಮುಸುಕುಧಾರಿಗಳು ಹೊಡೆದಿದ್ದರು. ಹಲ್ಲೆ ನಡೆಸಿದವರನ್ನು ಕೂಡಲೇ ಬಂಧಿಸಬೇಕೆಂದು ಭಜರಂಗದಳದ ಕಾರ್ಯಕರ್ತರು ಒಂದು ವಾರದಿಂದಲೂ ಪ್ರತಿಭಟನೆ ನಡೆಸುತ್ತಿದ್ದರು. ಹೊಡೆದವರು ಯಾರು ಎಂಬುದು ಗೊತ್ತಿಲ್ಲದ ಕಾರಣ ಪೊಲೀಸರು ಯಾರನ್ನೂ ಬಂಧಿಸಿರಲಿಲ್ಲ. ಆದರೆ ಪೊಲೀಸ್ ಠಾಣೆಗೇ ಮುತ್ತಿಗೆ ಹಾಕಿದ ಚೆಡ್ಡಿಗಳು 'ಯಾವುದಾದರೂ ಒಬ್ಬ ಮುಸ್ಲಿಮನನ್ನು ಬಲಿ ಹಾಕಿರಿ' ಎಂದು ಒತ್ತಾಯಿಸಿದರಲ್ಲದೆ, ಹಾಗೆ ಮಾಡಬೇಕೆಂದು ಪೊಲೀಸರಿಗೆ ಒಂದು ಗಡುವನ್ನೂ ನಿಗದಿಪಡಿಸಿದರು.



ಸಂಘಪರಿವಾರದ ಚೆಡ್ಡಿಗಳನ್ನು ತೃಪ್ತಿಪಡಿಸುವುದಕ್ಕಾಗಿ ಮಣಿಪಾಲ್ ಕ್ರೈಂ ಬ್ಯೂರೋದ ಪೊಲೀಸರು ಯಾವುದೇ ಸಾಕ್ಷಾಧಾರಗಳಿಲ್ಲದೇ ಪಡುಬಿದ್ರಿಯ ಜ್ಯೂನಿಯರ್ ಕಾಲೇಜೊಂದರಲ್ಲಿ ಉಪನ್ಯಾಸಕರಾಗಿರುವ ಅಬ್ದುಲ್ ಖಾದರ್ ಹುಸೇನ್ ಎಂಬುವವರನ್ನು ಶನಿವಾರ ಬಂಧಿಸಿದ್ದಾರೆ. ಪೊಲೀಸರು ಹುಸೇನರನ್ನೇ ಬಂಧಿಸಲು ಕಾರಣ ಏನೆಂದರೆ ಅವರ ಬಳಿಯೂ ಒಂದು ಪಲ್ಸರ್ ಬೈಕಿದೆ! ಇವರೇ ತಮ್ಮ ಪಲ್ಸರ್ ಬೈಕ್ ಮೇಲೆ ಬಂದು ಭಜರಂಗದಳದ ಕಾರ್ಯಕರ್ತರನ್ನು ಹೊಡೆದಿದ್ದಾರೆಂಬುದು ಪೊಲೀಸರ ತರ್ಕ!!

ಹುಸೇನ್‌ರವರು ತಮ್ಮ ಹರಿತ ಮತ್ತು ಸೃಜನಶೀಲ ವ್ಯಂಗ್ಯಚಿತ್ರಗಳಿಂದ ಪ್ರಸಿದ್ಧರಾಗಿರುವ 'ಪ್ರಜಾವಾಣಿ' ದಿನಪತ್ರಿಕೆಯ ವ್ಯಂಗ್ಯಚಿತ್ರಕಾರ ಪಿ. ಮಹಮ್ಮದ್‌ರವರ ಸಹೋದರ. ವಾಸ್ತವದಲ್ಲಿ ಹುಸೇನ್ ಬಳಿ ಪಲ್ಸರ್ ಬೈಕಿರುವುದೇ ಪೊಲೀಸರಿಗೆ ಪ್ರಧಾನ ಕಾರಣ ಅಲ್ಲ. ಅದಕ್ಕಿಂತಲೂ ಮುಖ್ಯವಾಗಿರುವುದೆಂದರೆ ಅವರು ಮುಸ್ಲೀಮರಾಗಿರುವುದು. ಅದರಷ್ಟೇ ಇನ್ನೊಂದು ಮುಖ್ಯ ಕಾರಣ ಅವರು ಕರ್ನಾಟಕ ಫೋರಂ ಫಾರ್ ಡಿಗ್ನಿಟಿ (ಕೆಎಫ್‌ಡಿ) ಎಂಬ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದು, ಕರಾವಳಿಯಲ್ಲಿ ಸಂಘಪರಿವಾರದ ಗೂಂಡಾಗಳು ಅಲ್ಪಸಂಖ್ಯಾತರ ಮೇಲೆ ನಡೆಸುತ್ತಿರುವ ದಾಳಿಗಳಿಗೆ ತಮ್ಮ ಪ್ರತಿರೋಧವನ್ನು ಒಡ್ಡುತ್ತಿರುವುದು. ಈ ಎಲ್ಲ ಕಾರಣಗಳಿಂದ ಹುಸೇನರ ನ್ಯಾಯಸಮ್ಮತ ದನಿಯನ್ನು ಅಡಗಿಸುವುದು ಪೊಲೀಸರ ಉದ್ದೇಶ. ಹೀಗೆ, ಒಂದೆಡೆ ಹುಸೇನ್‌ರವರ ನ್ಯಾಯಕ್ಕಾಗಿನ ದನಿಯನ್ನು ಅಡಗಿಸುವುದಕ್ಕಾಗಿ, ಇನ್ನೊಂದೆಡೆ ಸಂಘಪರಿವಾರದ ಚೆಡ್ಡಿಗಳನ್ನು ತೃಪ್ತಿಪಡಿಸುವುದಕ್ಕಾಗಿ ಅವರನ್ನು ಬಲಿಪಶುವನ್ನಾಗಿ ಮಾಡಲಾಗಿದೆ.

ಇತ್ತೀಚೆಗಂತೂ ಕರಾವಳಿಯ ಪೊಲೀಸರು ಚೆಡ್ಡಿಗಳ ಮನತೃಪ್ತಿಪಡಿಸುವುದಕ್ಕಾಗಿ ಅಮಾಯಕ ಮುಸ್ಲಿಮರನ್ನು ಬೆದರಿಸುವುದು, ಬಂಧಿಸುವುದು, ಅವರಿಗೆ ಚಿತ್ರಹಿಂಸೆ ಕೊಡುವುದು ಸರ್ವೇಸಾಮಾನ್ಯವಾಗಿಬಿಟ್ಟಿದೆ. ಕೆಲವು ದಿನಗಳ ಹಿಂದೆ ಯಾವುದೇ ತಪ್ಪನ್ನು ಮಾಡದ ಅಮಾಯಕ ಮುಸ್ಲಿಮ್ ಆಟೋ ಚಾಲಕರನ್ನು ಬಂಧಿಸಿ ಚಿತ್ರಹಿಂಸೆ ಕೊಟ್ಟಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಅಬ್ದುಲ್ ಖಾದರ್ ಹುಸೇನ್‌ರವರ ಬಂಧನ ಈ ಸಾಲಿಗೆ ಇತ್ತೀಚಿನ ಸೇರ್ಪಡೆ. ಸ್ಥಳೀಯ ಬಿಜೆಪಿ ಎಮ್ಮೆಲ್ಲೆ ಲಾಲ್ಜಿ ಮೆಂಡೋನ್ ಕೂಡ ತಾನೊಬ್ಬ ಮೊಗವೀರನಾದರೂ ಜನಿವಾರ ಚೆಡ್ಡಿಗಳ ಸೇವೆಯಲ್ಲಿ ನಿರತನಾಗಿದ್ದಾನೆ. ತಾನು ಕೆಟ್ಟು ಕೆರ ಹಿಡಿದಿರುವುದಲ್ಲದೇ ಈಗ ಊರನ್ನು ಕೆಡಿಸಲು ಹೊರಟಿದ್ದಾನೆ.

ಅಸಲಿಗೆ ಭಜರಂಗ ದಳದ ಒಂದು ಗುಂಪು ಇನ್ನೊಂದು ಗುಂಪಿನ ಸದಸ್ಯನ ಮೇಲೆ ಹಲ್ಲೆ ನಡೆಸಿದೆ ಎಂಬುದು ಬಹುತೇಕ ಸ್ಥಳೀಯ ಜನರ ಅಭಿಪ್ರಾಯ. ಏಕೆಂದರೆ ಆ ಎರಡೂ ಗುಂಪುಗಳ ನಡುವೆ ಇತ್ತೀಚೆಗೆ ಪೈಪೋಟಿ ಏರ್ಪಟ್ಟಿತ್ತಲ್ಲದೆ ದೇವಸ್ಥಾನದ ಆಡಳಿತ ವಿಷಯಕ್ಕೆ ಸಂಬಂಧಪಟ್ಟಂತೆ ಆ ಗುಂಪುಗಳು ಕೈ ಕೈ ಮಿಲಾಯಿಸುವ ಮಟ್ಟಕ್ಕೂ ಅವರ ಜಗಳ ಹೋಗಿತ್ತು. ಆ ಜಗಳದ ಮುಂದುವರಿದ ಭಾಗವಾದ ಈ ಹಲ್ಲೆ ಪ್ರಕರಣವನ್ನೇ ಮುಂದಿಟ್ಟುಕೊಂಡು, ತಮ್ಮ ಒಳಜಗಳ ಹೊರಬಾರದಂತೆ ಮತ್ತು ಅದನ್ನೇ ಮುಸ್ಲಿಮರ ವಿರುದ್ಧ ತಿರುಗಿಸುವಂತೆ ಚೆಡ್ಡಿಗಳು ನೋಡಿಕೊಂಡಿದ್ದಾರೆ. ಅವರ ಈ ಷಡ್ಯಂತ್ರಕ್ಕೆ ಪೊಲೀಸರೂ ಕೈ ಜೋಡಿಸಿದ್ದಾರೆ.

ರಾಜ್ಯದಲ್ಲಿ ರಾಜ್ಯಪಾಲರ ಆಡಳಿತವಿರುವಾಗಲೇ ಚೆಡ್ಡಿಗಳು ಇಷ್ಟೊಂದು ದೌರ್ಜನ್ಯವೆಸಗುತ್ತಾರೆಂದರೆ ಇನ್ನು ಅಧಿಕಾರಕ್ಕೆ ಬಂದರೆ ಏನೆಲ್ಲಾ ದೊಂಬಿಗಳನ್ನು ನಡೆಸಬಹುದೆಂದು ಪ್ರಜಾತಂತ್ರ ಪ್ರೇಮಿಗಳು ಮತ್ತು ಶಾಂತಿಪ್ರಿಯರು ಆತಂಕಗೊಂಡಿದ್ದಾರೆ. ಇವರೆಲ್ಲಾ ಒಟ್ಟಾಗಿ ಈಗ ಚೆಡ್ಡಿಗಳನ್ನು ನಿಯಂತ್ರಿಸುವಂತೆ ಆಗ್ರಹಿಸಿ ರಾಜ್ಯಪಾಲರಿಗೆ ತಿಳಿಸಬೇಕಿದೆ.

■ ವರದಿಗಾರ



ಕುಂದಾಪುರದಲ್ಲಿ ಚೆಡ್ಡಿ ದರ್ಬಾರ್

ಈ ಚೆಡ್ಡಿಗಳು ಮಾತೆತ್ತಿದರೆ ದೇಶ, ಸಂಸ್ಕೃತಿ, ಪ್ರಜಾತಂತ್ರ ಎಂತೆಲ್ಲ ಪುಷ್ಕಳವಾಗಿ ಭಾಷಣ ಬಿಗಿಯುತ್ತಾರೆ. ಆದರೆ ಆಚರಣೆಯಲ್ಲಿ ಮಾತ್ರ ಇವರು ಪಕ್ಕಾ ಹಿಟ್ಲರ್‌ನ ಶನಿಸಂತಾನಗಳು ಎಂಬುದನ್ನು ಆಗಾಗ ತೋರಿಸುತ್ತಿರುತ್ತಾರೆ. ತಾವು ಹೇಳಿದ್ದೇ ಕಾನೂನು, ಮಾಡಿದ್ದೇ ದರ್ಬಾರ್ ಎನ್ನುವಂತಹ ರಾಜ್ಯವೊಂದನ್ನು ನಿರ್ಮಿಸಲು ಹೊರಟಿರುವ ಇವರಿಗೆ ಸದಾ ಜೈಕಾರ ಹಾಕುವವರು ಮಾತ್ರ ಬೇಕು. ತಮ್ಮ ರಕ್ತಪಿಪಾಸು ಸಿದ್ಧಾಂತಕ್ಕೆ ತಾತ್ವಿಕ ಭಿನ್ನತೆಯನ್ನು ವ್ಯಕ್ತಪಡಿಸುವವರನ್ನು ಕಂಡರೆ ಇವರಿಗೆ ಮೆಣಸಿನಕಾಯಿ ಮುರಿದಿಟ್ಟಂತಾಗುತ್ತದೆ. ಅಂತಹವರಿಗೆ ಕೊಡಬಾರದ ಕಿರುಕುಳ ಕೊಟ್ಟು ಹಿಂಸಿಸುತ್ತಾರೆ. ಕೊನೆಗೆ ಅದಕ್ಕೂ ಮಣಿಯದಿದ್ದರೆ ಅವರನ್ನು ಹೊಸಕಿಹಾಕುವುದಕ್ಕೂ ಹೇಸುವುದಿಲ್ಲ. ಮೊನ್ನೆ ಕುಂದಾಪುರದಲ್ಲಿ ನಡೆದ ಘಟನೆಯನ್ನೇ ನೋಡಿ.

ರಾಷ್ಟ್ರೀಯ ಹೆದ್ದಾರಿ ದುರವಸ್ಥೆಯಲ್ಲಿದೆ ಎಂದು ಕುಂದಾಪುರದ ಸ್ವಯಂಸೇವಾ ಸಂಘ, ಶ್ರೀರಾಮಸೇನೆ ಮತ್ತಿತರ ಸಂಘಪರಿವಾರದ ಸಂಘಟನೆಗಳು ಅಕ್ಟೋಬರ್ 30ರಂದು ಹೆದ್ದಾರಿ ಬಂದ್‌ಗೆ ಕರೆ ನೀಡಿದ್ದವು. ಅಂದು ಬೆಳಗ್ಗೆ 8.30ರ ಸುಮಾರಿಗೆ "ಹೊಸ ಬದುಕು" ಪತ್ರಿಕೆಯ ಸಂಪಾದಕ ಶಶಿಧರ್ ಹೆಮ್ಮಾಡಿ ಮನೆಯಿಂದ ಕುಂದಾಪುರ ಪೇಟೆಗೆ ಹೊರಟಿದ್ದಾರೆ. ಅವರನ್ನು ನೋಡಿದ ತಕ್ಷಣ ಭಜರಂಗ ದಳದ ಪುಢಾರಿ ಗಿರೀಶ್‌ಗೆ ನಖಶಿಖ ಸಿಟ್ಟು ನೆತ್ತಿಗೇರಿಬಿಟ್ಟಿದೆ.

ಏಕೆಂದರೆ, ಕೋಮುವಾದಿಗಳ ಕಪಿಮುಷ್ಠಿಯಲ್ಲಿ ಕಗ್ಗತ್ತಲಾಗಿರುವ ಕರಾವಳಿಯಲ್ಲಿ ಮಾನವತೆ, ಪ್ರಜಾತಂತ್ರದ ಹಣತೆ ಹಚ್ಚಲು ಪ್ರಯತ್ನಿಸುತ್ತಿರುವ ಕೆಲವೇ ಜನರಲ್ಲಿ ಶಶಿಧರ್ ಕೂಡ ಒಬ್ಬರು. ಇಡೀ ಕರಾವಳಿಯ ಬಹುತೇಕ ಪತ್ರಿಕೆಗಳು, ಮತ್ತಿತರ ಮಾಧ್ಯಮಗಳು ಕೇಸರಿಕರಣಗೊಂಡಿರುವಾಗ ಶಶಿಧರ್ ತಮ್ಮ 'ಹೊಸ ಬದುಕು' ಪತ್ರಿಕೆಯ ಮೂಲಕ ಸತ್ಯವನ್ನು ಸಾರುವ ದಿಟ್ಟತನ ತೋರಿದವರು. ಕುಂದಾಪುರದ ಏಡ್ಸ್ ಸೂಜಿ ಪ್ರಕರಣವಿರಬಹುದು, ಮತ್ತಿತರ ಯಾವುದೇ ಗಲಭೆಗಳಿರಬಹುದು ಎಲ್ಲದರಲ್ಲೂ ಅವರು ತಮ್ಮ ಹರಿತವಾದ ಪೆನ್ನಿನಿಂದ ಕೋಮುವಾದಿಗಳ ನೈಜ ಬಣ್ಣವನ್ನು ಬಯಲಿಗೆಳೆದವರು.

ಮೊನ್ನೆ ನಡೆದ ನಗರಸಭಾ ಚುನಾವಣೆಯ ಸಂದರ್ಭದಲ್ಲೂ ಬಿಜೆಪಿ ದಾಖಲೆ ಪ್ರಮಾಣದ ಹಣ ಚೆಲ್ಲಿದ್ದರ ಬಗ್ಗೆ ಹರಿತವಾಗಿ ಮತ್ತು ವಸ್ತುನಿಷ್ಠವಾಗಿ ಬರೆದಿದ್ದರು. ಅಷ್ಟೇಅಲ್ಲ, ಆರ್‌ಎಸ್‌ಎಸ್‌ನ ರಕ್ತಪಿಪಾಸು ಸಿದ್ಧಾಂತವನ್ನು, ಅದರ ಕಪಟ ರಾಜಕೀಯವನ್ನು ತಾತ್ವಿಕವಾಗಿಯೂ ವಿರೋಧಿಸಿ ಬರೆಯುತ್ತಿದ್ದರು.

ಹೀಗಾಗಿ ಸಂಘಪರಿವಾರದ ಪಾಳೆಯದಲ್ಲಿ ಅವರಿಗೆ ಸಾಕಷ್ಟು ವೈರಿಗಳು ಹುಟ್ಟಿಕೊಂಡಿದ್ದಾರೆ. ಅಂತಹ ವೈರಿಗಳಲ್ಲಿ ಭಜರಂಗದಳದ ಈ ಗಿರೀಶ್ ಕೂಡ ಒಬ್ಬ. ಈ ಕಾರಣಕ್ಕಾಗಿಯೇ ಅವರನ್ನು ನೋಡಿದ ತಕ್ಷಣ ಅವನಿಗೆ ಶಶಿಧರ್ ಮೇಲಿನ ದ್ವೇಷವೂ ತನ್ನ ಕೇಸರಿ ಸಿದ್ಧಾಂತದ ಮೇಲಿನ ಪ್ರೇಮವೂ ಏಕಕಾಲಕ್ಕೆ ಉಕ್ಕಿಬಂದು ಜತೆಯಲ್ಲಿದ್ದ ಸುಮಾರು 200 ಜನ ಕಪಿಸೈನ್ಯದೊಂದಿಗೆ ಶಶಿಧರ್ ಮೇಲೆ ಮುಗಿಬಿದ್ದಿದ್ದಾನೆ.

"ನೀನು ಮುಸ್ಲಿಮ್ ಮತ್ತು ಕ್ರಿಶ್ಚಿಯನ್ನರ ಏಜಂಟನೆ? ಯಾವಾಗಲೂ ಅವರ ಪರವಾಗಿ ಮತ್ತು ಸಂಘಪರಿವಾರದ ವಿರೋಧವಾಗಿ ಬರೆಯುತ್ತೀಯಾ, ಇವತ್ತು ನಿನ್ನನ್ನು ಇಲ್ಲಿಂದ ಬಿಡುವುದಿಲ್ಲ" ಎಂದು ಆರ್ಭಟಿಸಿದ್ದಾನೆ. ಅಷ್ಟೇ ಅಲ್ಲದೆ, ಸುಮಾರು 45 ನಿಮಿಷಗಳ ಕಾಲ ತನ್ನ 'ಸುಸಂಸ್ಕೃತ' ಭಾಷೆಯಲ್ಲಿ ವಾಚಾಮಗೋಚರವಾಗಿ ಬೈಯ್ದು ತನ್ನ ಬಾಯಿ ಚಪಲ ತೀರಿಸಿಕೊಂಡಿದ್ದಾನೆ. ಅಷ್ಟರಲ್ಲಿ ಶಶಿಧರ್ ಅವರ ಸ್ನೇಹಿತ ಮತ್ತು ಪ್ರಗತಿಪರ ಮನಸ್ಸಿನ ಇನ್ನೊಬ್ಬ ಪತ್ರಕರ್ತ ಕೇಶವ ಸಸಿಹಿತ್ಲು ಕೂಡ ಸ್ಥಳಕ್ಕೆ ಬಂದಿದ್ದಾರೆ. ಈ ಚೆಡ್ಡಿವೀರರು ಅವರನ್ನೂ ತಡೆದು ತಮ್ಮ ಬಾಯಿಚಪಲ ತೀರಿಸಿಕೊಂಡಿದ್ದಾರೆ.

ವಿಷಯ ತಿಳಿದ ಕುಂದಾಪುರ ಪತ್ರಕರ್ತರ ಸಂಘದ ಅಧ್ಯಕ್ಷ ಗಿರೀಶ್‌ನೊಂದಿಗೆ ದೂರವಾಣಿಯಲ್ಲಿ ಮಾತನಾಡಿ ಅವರಿಬ್ಬರನ್ನು ಬಿಡುವಂತೆ ಹೇಳಿದರೂ ಅಮಲೇರಿದ ಗಿರೀಶ್ ಜಪ್ಪೆನ್ನಲಿಲ್ಲ.

ಇನ್ನೂ ದುರಂತವೆಂದರೆ, ಸ್ಥಳದಲ್ಲಿಯೇ ಎಸ್ಸೈ ಜಯಂತ್ ಮತ್ತು ಎಎಸ್‌ಐ ಬಾಬು ಸಾರಥ್ಯದಲ್ಲಿ ಹಿಂದು ಪೊಲೀಸರಿದ್ದರೂ ಮತ್ತೇರಿದ ಮಂಗಗಳಂತೆ ವರ್ತಿಸುತ್ತಿದ್ದ ಚೆಡ್ಡಿ ಗ್ಯಾಂಗನ್ನು ನಿಯಂತ್ರಿಸಲು ಅವರು ಯಾರೂ ಮುಂದಾಗಲಿಲ್ಲ. ಕೊನೆಗೆ, ಆ ಇಬ್ಬರೂ ಪತ್ರಕರ್ತರು ಹೇಗೋ ಅಲ್ಲಿಂದ ತಪ್ಪಿಸಿಕೊಂಡು ಬರುವುದಕ್ಕೆ ಹರಸಾಹಸ ಮಾಡಬೇಕಾಯಿತು. ಈಗ ಕುಂದಾಪುರ ಸರ್ಕಲ್ ಇನ್ಸ್‌ಪೆಕ್ಟರ್ ವ್ಯಾಲಂಟೈನ್ ಡಿಸೋಜ ಅವರಿಗೆ ಶಶಿಧರ್ ಹೆಮ್ಮಾಡಿಯವರು ಲಿಖಿತ ದೂರು ದಾಖಲಿಸಿದ್ದಾರೆ.

ಈಗ ಪೊಲೀಸರು ಅದ್ಯಾವ ಕ್ರಮ ಕೈಗೊಳ್ಳುತ್ತಾರೋ ನೋಡಬೇಕು. ಇಲ್ಲಿನ ಪೊಲೀಸರಿಗೆ ಒಂದು ಕೆಟ್ಟ ಚರಿತ್ರೆಯಿದೆ. ಇಂತಹ ಪ್ರಕರಣಗಳು ಬಂದಾಗ ಅವರು ಸಾಮಾನ್ಯವಾಗಿ ಚೆಡ್ಡಿಗಳ ಪರವಾಗಿಯೇ ನಿಲ್ಲುತ್ತಾರೆ. ಕುಂದಾಪುರ ಏಡ್ಸ್ ಸೂಜಿ ಪ್ರಕರಣವಾದಾಗಲೂ ಅವರು ನೈಜ ಅಪರಾಧಿಗಳಾದ ಸಂಘಪರಿವಾರದವರಿಗೆ ರಕ್ಷಣೆ ಕೊಟ್ಟು ಬಲಿಪಶುಗಳಾದ ಮುಸ್ಲಿಮರನ್ನೇ ಬಂಧಿಸಿ ಕೇಸ್ ಜಡಿದಿದ್ದರು. ಡಿ'ಸೋಜ ಇಂತಹ ವಂಚಕ ಪರಂಪರೆಯನ್ನು ನಿಲ್ಲಿಸುತ್ತಾರೋ ಅಥವಾ ಅದನ್ನೇ ಮುಂದುವರೆಸುತ್ತಾರೋ ಎಂಬುದನ್ನು ಕಾದುನೋಡಬೇಕಷ್ಟೆ.

■ ವರದಿಗಾರ

ಸುಮ್ ಸುಮ್ನೆ

ಯಾವುದೇ ಸ್ನೇಹ ಅಥವಾ ಸಂಬಂಧ ಹೇಗಿರಬೇಕೆಂದರೆ ನಮ್ಮ ಎರಡು ಕಣ್ಣುಗಳಂತಿರಬೇಕು. ಏಕೆಂದರೆ ನಮ್ಮ ಎರಡು ಕಣ್ಣುಗಳ ನಡುವಿನ ಸಂಬಂಧ ಅಷ್ಟು ಅರ್ಥಪೂರ್ಣವಾದದ್ದು. ಅವೆರಡೂ ಒಟ್ಟಿಗೆ ಮಿಟುಕುತ್ತವೆ, ಜೊತೆಜೊತೆಯಾಗಿ ಚಲಿಸುತ್ತವೆ, ಕಂಡ ಎಲ್ಲವನ್ನು ಒಂದಾಗಿಯೇ ಗ್ರಹಿಸುತ್ತವೆ, ಒಟ್ಟಾಗಿಯೇ ನಿದ್ರಿಸುತ್ತವೆ, ಕಣ್ಣೀರಿಡುತ್ತವೆ, ನಗುತ್ತವೆ. ಅದಕ್ಕೇ ಅಂದದ್ದು ಸ್ನೇಹ, ಸಂಬಂಧ ನಮ್ಮ ಎರಡು ಕಣ್ಣುಗಳಂತಿರಬೇಕು ಎಂದು.

ಸರಿಯಾಗಿದೆಯಲ್ಲವೇ?

ಬಹಳಷ್ಟು ಜನ ರಾಕೆಟ್ ತಂತ್ರಜ್ಞಾನದ ಹಿಂದಿರುವ ಸಿದ್ಧಾಂತವನ್ನೇ ಅನುಸರಿಸುತ್ತಾರೆ. ಅಂದಮಾತ್ರಕ್ಕೆ ಅವರ ಆಕಾಶದೆತ್ತರದ ಕನಸುಗಳನ್ನಾಗಲಿ, ಆಶಯಗಳನ್ನಾಗಲಿ ಹೊಂದಿರುತ್ತಾರೆಂದಲ್ಲ, ಬದಲಾಗಿ ಅವರ ಪುಕುಳಿಗಳಿಗೆ ಬೆಂಕಿ ಹತ್ತಿದಾಗ ಮಾತ್ರ ಅವರು ಕಾರ್ಯಪ್ರವೃತ್ತರಾಗುತ್ತಾರೆ ಎಂದಷ್ಟೇ!

ಚಾಕು ಹಿಡಿದಿದ್ದ ಕಳ್ಳನೊಬ್ಬ ಅಂದ: ಜೇಬಿನಲ್ಲಿರುವ ನಿನ್ನ ಕಾಸನ್ನೆಲ್ಲ ತೆಗಿ!

ಆತ ಅಂದ: ನಾನ್ಯಾರು ಅಂತ ಗೊತ್ತಾ ನಿಂಗೆ? ನಾನು ರಾಜಕಾರಣಿ.

ಕಳ್ಳ: ಹೌದಾ? ಹಾಗಾದರೆ ನಿನ್ನ ಜೇಬಿನಲ್ಲಿರುವ ನನ್ನ ಕಾಸನ್ನೆಲ್ಲ ತೆಗಿ!



ಲೋಕಾಯುಕ್ತ ರೇಡ್ ಬಲೆಗೆ ಬಿದ್ದ ದೊರೆಗಳು

ಐವತ್ತು ಕೋಟಿಯ ಆಸ್ತಿ ಪತ್ತೆ, ದಾಳಿಗೀಡಾದ ಹದಿಮೂರು ಮಂದಿ ಸರ್ಕಾರಿ ದೊರೆಗಳ ಪೈಕಿ ಓರ್ವ ಎಸ್.ಪಿ. ಶ್ರ್ಯಾಂಕಿನ ಅಧಿಕಾರಿ! ಇನ್ನಿಬ್ಬರು ಎಸಿಪಿಗಳು, ಓರ್ವ ಡಿವೈಎಸ್‌ಪಿ, ಮೂವರು ಪೊಲೀಸ್ ಇನ್ಸ್‌ಪೆಕ್ಟರ್‌ಗಳು ಜೊತೆಗೆ ಐವರು ಆರ್.ಟಿ.ಓ. ಇನ್ಸ್‌ಪೆಕ್ಟರ್‌ಗಳು ಮತ್ತು ಲೋಕೋಪಯೋಗಿ ಇಲಾಖೆಯ ಓರ್ವ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್!

2007 ರ ನವೆಂಬರ್ 3 ರಂದು ನಡೆದದ್ದು ಲೋಕಾಯುಕ್ತದ ಇತಿಹಾಸದಲ್ಲೇ ಅತೀ ದೊಡ್ಡ ಸುಸಜ್ಜಿತ ಕಾರ್ಯಾಚರಣೆ ನಿಜ. ಸಿಕ್ಕಿಬಿದ್ದವರ್‍ಯಾರೂ ಪ್ರಾಮಾಣಿಕರಲ್ಲ ಎಂಬುದೂ ಅಷ್ಟೇ ಸತ್ಯ. ಬೆರಳೆಣಿಕೆಯ ಒಂದಿಬ್ಬರನ್ನು ಹೊರತುಪಡಿಸಿದರೆ ಅಷ್ಟೇನೂ ಕುಖ್ಯಾತರಲ್ಲದ, ಲೂಟಿಯಲ್ಲಿ ತಿಮಿಂಗಿಲಗಳಂತಿಲ್ಲದ ಒಂದು ಡಜನ್ ಭ್ರಷ್ಟ ಅಧಿಕಾರಿಗಳನ್ನು ಲೋಕಾಯುಕ್ತ ಹಿಡಿದು ಹಾಕಿದೆ ಎಂಬುದೂ ನಿಜ.



ಕುಖ್ಯಾತಿ ಮತ್ತು ಹಾವಳಿಯ ಮಟ್ಟಿಗೆ ಸಿಕ್ಕಿಬಿದ್ದವರು ಅದೆಷ್ಟೇ ಸಣ್ಣ ಮಟ್ಟದವರಾಗಿದ್ದರೂ; ಸಿಕ್ಕ ಸಣ್ಣ ಅವಕಾಶದಲ್ಲಿ ಫಲವತ್ತಾದ ಹುದ್ದೆಯಲ್ಲಿದ್ದ ಅಲ್ಪಕಾಲಾವಧಿಯಲ್ಲಿ ಅವರು ಕೂಡಿ ಹಾಕಿದ ಅಕ್ರಮ ಸಂಪತ್ತಾದರೂ ಎಷ್ಟು?

ಯಲಹಂಕದ **Armed Police Training School** ಅಂದರೆ ಸಶಸ್ತ್ರ ಪೊಲೀಸ್ ತರಬೇತಿ ಶಾಲೆಯ ಎಸ್.ಪಿ. ಶ್ರೀನಿವಾಸ ಅಯ್ಯರ್ ಯಾವತ್ತೂ ಆಯಕಟ್ಟಿನ ಹುದ್ದೆಯಲ್ಲಿರಲಿಲ್ಲ. ಸಶಸ್ತ್ರ ಮೀಸಲು ಪಡೆಯ ಪೊಲೀಸರಿಗೆ ತರಬೇತಿ ಕೊಡುವುದರಲ್ಲೂ ಇನ್ನೆಂಥಾ ಆಮದನಿ ಸಾಧ್ಯ?

ಪೊಲೀಸ್ ಪೇದೆಗಳಿಗೆ ತರಬೇತಿ ಕೊಡುವುದರಲ್ಲೂ ಲಾಭವಿದೆ ಎಂದು ತೋರಿಸಿಕೊಟ್ಟ ಶ್ರೀನಿವಾಸ ಅಯ್ಯರ್ ಎಂಥಾ ಚಾಣಾಕ್ಷನೆಂದರೆ; ಒಂದು ಬ್ಯಾಚಿನಲ್ಲಿ ಕನಿಷ್ಠ ಐನೂರು ಮಂದಿ ಪೊಲೀಸ್ ಪೇದೆಗಳಿದ್ದರೆ ಸಾಕು ತಿಂಗಳೊಂದಕ್ಕೆ ಕನಿಷ್ಠ ಐದು ಲಕ್ಷ ರೂಪಾಯಿಯ ಮೇಲ್ಕಾಸು ಹುಟ್ಟಿಸಬಲ್ಲ ಪ್ರಚಂಡ. ಅದೂ ಹೇಗೆ ಗೊತ್ತೆ? ಈ ಪೈಕಿ ಕನಿಷ್ಠ ಐವತ್ತು ಮಂದಿ ಪೇದೆಗಳು ತರಬೇತಿಗೆ ಬರದಿದ್ದರೂ ಅವರಿಗೆ ಅಟೆಂಡೆನ್ಸ್ ಸಿಕ್ಕಿಬಿಡುತ್ತಿತ್ತು. ತಿಂಗಳಾನುಗಟ್ಟಲೇ ತರಬೇತಿಗೇ ಬರದೆ ಬಡ್ಡಿ ದಂಧೆಯನ್ನೋ, ಲ್ಯಾಂಡ್ ಡೀಲನ್ನೋ ಮಾಡಿಕೊಂಡಿದ್ದು ತಮ್ಮ ಅರ್ಧ ಸಂಬಳವನ್ನು ತರಬೇತಿ ಕೇಂದ್ರದ ಮುಖ್ಯಸ್ಥನಿಗೆ ಕೊಟ್ಟು ಬಿಟ್ಟೇ ಅಟೆಂಡೆನ್ಸ್ ಗಿಟ್ಟಿಸುವ ಕನಿಷ್ಠ ನೂರು ಮಂದಿ ಪೊಲೀಸ್ ಪೇದೆಗಳ ಸಂಬಳದಲ್ಲಿ ತಿಂಗಳೊಂದಕ್ಕೆ ಸಾವಿರ ರೂಪಾಯಿ ಮುರಕೊಂಡರೂ ಒಂದು ಲಕ್ಷ ರೂಪಾಯಿಯಾಗುತ್ತದೆ. ಅದೇ ಐನೂರು ಜನಕ್ಕೆ....?



ಪುರುಷೋತ್ತಮ

ಈ ರೀತಿ ಸುಳ್ಳು ಹಾಜರಾತಿ ಕೊಟ್ಟೇ ಎಸ್.ಪಿ. ಶ್ರೀನಿವಾಸ ಅಯ್ಯರ್ 30x50 ಸೈಟಿನಲ್ಲಿ ಮೂರಂತಸ್ತಿನ ಕಾಂಪ್ಲೆಕ್ಸ್ ಎಬ್ಬಿಸಿದ್ದಾರೆ, ಕೆ.ಆರ್. ಪುರಂನಲ್ಲಿ 60x40 ನಿವೇಶನದಲ್ಲೊಂದು ಬಂಗಲೆ ಕಟ್ಟಿದ್ದಾರೆ, ಜೊತೆಗೆ ಎಲೆಕ್ಟ್ರಾನಿಕ್ ಸಿಟಿ ಮತ್ತು ಶಿವಪ್ರಿಯ ಲೇಔಟಿನಲ್ಲಿ 60x40 ಅಳತೆಯ ಎರಡು ಭರ್ಜರಿ ಸೈಟುಗಳನ್ನು ಖರೀದಿಸಿದ್ದಾರೆ. ಸಿಕ್ಕ ಎರಡೂವರೆ ಲಕ್ಷದ ಕ್ಯಾಷು, ನೂರು ಗ್ರಾಂ ಚಿನ್ನ ಮತ್ತು ಒಂದೂವರೆ ಕೆ.ಜಿ.ಯಷ್ಟು ಬೆಳ್ಳಿ ಅವರ ಸೈಟು-ಕಾಂಪ್ಲೆಕ್ಸ್‌ಗಳ ಮುಂದೆ ಯಾವ ಲೆಕ್ಕ?

ಯಃಕಶ್ಚಿತ್ ಪೊಲೀಸ್ ತರಬೇತಿ ಶಾಲೆಯ ಎಸ್.ಪಿ. ಯೊಬ್ಬನೇ ಇಷ್ಟೆಲ್ಲಾ ಗಳಿಸುತ್ತಾನೆಂದರೆ ಇನ್ನು ವಿಧಾನಸೌಧದ ಎಸಿಪಿ ಅಜ್ಜಪ್ಪ ಅದರ ದುಪ್ಪಟ್ಟನ್ನಾದರೂ ದುಡಿದಿರಲೇಬೇಕು. ಪ್ರಾರಂಭದಲ್ಲಿ ನೆಲಮಂಗಲದಲ್ಲಿ ಸಬ್ ಇನ್ಸ್‌ಪೆಕ್ಟರ್ ಆಗಿದ್ದು ಅನಂತರ ಚಿತ್ರದುರ್ಗದ ಕಡೆ ಎತ್ತಂಗಡಿಯಾದ ಅಜ್ಜಪ್ಪ ಬೆಂಗಳೂರಿನ ಬೇರೆ ಪೊಲೀಸ್ ಅಧಿಕಾರಿಗಳಿಗೆ ಹೋಲಿಸಿದರೆ ಹೆಚ್ಚು ಮೆರೆದವರಲ್ಲ, ಒಂದಷ್ಟು ದಿನಗಳ ಕಾಲ ಅಶೋಕ್‌ನಗರ ಪೊಲೀಸ್ ಠಾಣೆಯಲ್ಲಿದ್ದದ್ದು ಅದಕ್ಕೂ ಮುನ್ನ ಕಲಾಸಿಪಾಳ್ಯದಲ್ಲಿದ್ದದ್ದು ಬಿಟ್ಟರೆ ಈಗಿರುವ ಎಸಿಪಿ ಹುದ್ದೆಯೇ ಅವರ ಸರ್ವೀಸಿನ ಸುವರ್ಣಯುಗ!

ಅಂಥಾದ್ದರಲ್ಲಿ ಚಂದ್ರಾಲೇಔಟಿನಲ್ಲಿ ಅಜ್ಜಪ್ಪ 30x53 ಅಳತೆಯ ನಿವೇಶನ, ನಾಗರಬಾವಿಯಲ್ಲೊಂದು ಬಿಡಿಎ ಸೈಟು, ತಂದೆಯ ಹೆಸರಿಗೆ 22 ಎಕರೆ ಜಮೀನು, ಬನ್ನೇರುಘಟ್ಟ ರಸ್ತೆಯಲ್ಲಿ ನಿರ್ಮಾಣ್ ಶೆಲ್ಟರ್ಸ್‌ನವರಿಂದ ಕೊಂಡುಕೊಂಡ 40x70 ಸೈಟು ಮತ್ತು ಚಿತ್ರದುರ್ಗದಲ್ಲಿ ಕಟ್ಟಿದ ಮನೆ. ಜೊತೆಗೆ ಅರ್ಧ ಕೆ.ಜಿ. ಚಿನ್ನ, ಇನ್ನರ್ಧ ಕೆ.ಜಿ. ಬೆಳ್ಳಿ, ಅಕ್ಸೆಂಟ್ ಹೋಂಡಾ ಕಾರು, ಲಕ್ಷಾಂತರ ರೂ.ಗಳ ಎಲೆಕ್ಟ್ರಾನಿಕ್ಸ್ ಇತ್ಯಾದಿ ಸೇರಿಬಿಟ್ಟರೆ ಅದೇ ಒಟ್ಟು ಮೂರುಕೋಟಿಯ ಸೊತ್ತಾಗುತ್ತದೆ.


ಸಿಕ್ಕ ಸಣ್ಣ ಅವಕಾಶದಲ್ಲೇ ಎಸಿಪಿ ಅಜ್ಜಪ್ಪ ಈಪಾಟಿ ಆಸ್ತಿಗಳಿಸಿದ್ದಾರೆಂದರೆ ಇನ್ನು ಕಾಲಾಂತರದಿಂದ ಬೆಂಗಳೂರಿನಲ್ಲೇ ಬೇರುಬಿಟ್ಟಿರುವ ಘಟಾನುಘಟಿ ಖಾಕಿ ದೊರೆಗಳು ಇನ್ನೆಷ್ಟು ಗಳಿಸಿರಬೇಡ?

ವಿಧಾನಸೌಧ ಭದ್ರತಾ ವಿಭಾಗದ ಎಸಿಪಿ ವಿಶ್ವನಾಥ್ ಸಿಂಗ್, ರಾಮಮೂರ್ತಿನಗರದ ಇನ್ಸ್‌ಪೆಕ್ಟರ್ ಎಚ್. ಸಿದ್ದಪ್ಪ ನಗರ ವಿಶೇಷ ಘಟಕದ ಇನ್ಸ್‌ಪೆಕ್ಟರ್ ಮರಿಸ್ವಾಮಿಗೌಡ, ಉಪ್ಪಾರಪೇಟೆ ಟ್ರಾಫಿಕ್ ಇನ್ಸ್‌ಪೆಕ್ಟರ್ ಎಸ್.ಬಿ. ಮಲ್ಲಿಕಾರ್ಜುನ್, ಕಾಡುಗೋಡಿ ಇನ್ಸ್‌ಪೆಕ್ಟರ್ ಪುರುಷೋತ್ತಮ್, ಯಶವಂತಪುರದ ಆರ್‌ಟಿಓ ಇನ್ಸ್‌ಪೆಕ್ಟರ್ ಬಾಲಚಂದ್ರರಾವ್, ರಾಜಾಜಿನಗರದ ಆರ್‌ಟಿಓ ಇನ್ಸ್‌ಪೆಕ್ಟರ್ ಈಶ್ವರ್‌ನಾಯ್ಕ್, ದೇವನಹಳ್ಳಿಯ ಮತ್ತೊಬ್ಬ ಆರ್‌ಟಿಓ ಇನ್ಸ್‌ಪೆಕ್ಟರ್ ಎಂ. ಲಕ್ಷ್ಮಣ, ಬಳ್ಳಾರಿಯ ಆರ್‌ಟಿಓ ಇನ್ಸ್‌ಪೆಕ್ಟರ್‌ಗಳಾದ ಶಂಕರಪ್ಪ ಮತ್ತು ಸಿದ್ದೇಶ್ವರ, ಜೊತೆಗೆ ಬೀದರ್‌ನ ಕಾರಂಜಾ ಯೋಜನೆಯ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಲಕ್ಷ್ಮಣರಾವ್ ಇತ್ಯಾದಿ ಹದಿಮೂರು ಮಂದಿ ಸರ್ಕಾರಿ ಅಧಿಕಾರಿಗಳ ಪೈಕಿ ಬಹುತೇಕರು ದೊಡ್ಡಮಟ್ಟದ ತಿಮಿಂಗಿಲಗಳಲ್ಲ.

ಇವರಲ್ಲಿ ಕಾಡುಗೋಡಿ ಇನ್ಸ್‌ಪೆಕ್ಟರ್ ಪುರುಷೋತ್ತಮ ಈ ಹಿಂದೆ ಸಂಜಯನಗರದಲ್ಲಿದ್ದು ಮಾಡಿದ ಹಾವಳಿ ಅಷ್ಟಿಷ್ಟಲ್ಲ. ಟಾಟಾನಗರದಲ್ಲಿ 70 ಲಕ್ಷದ ಅಪಾರ್ಟ್‌ಮೆಂಟ್, ಕೊಡಿಗೇಹಳ್ಳಿಯಲ್ಲಿ 40x60 ಸೈಟು, ಶಾರದಾ ನಗರದಲ್ಲಿ 18x54 ಅಳತೆಯ ಮತ್ತೊಂದು ಸೈಟು, ಕೋಡಿಹೊಸಳ್ಳಿಯಲ್ಲಿ 60x40 ಸೈಟು, ನಂಜನಗೂಡಿನಲ್ಲಿ ಮೂರೆಕರೆ ಜಮೀನು ಇತ್ಯಾದಿ ಆಸ್ತಿಗಳನ್ನು ಸರ್ಕಾರಿ ಸಂಬಳವೊಂದರಿಂದಲೇ ಗಳಿಸಲು ಹೇಗೆ ಸಾಧ್ಯ?

ಹಾಗೆ ನೋಡಿದರೆ ವಿಧಾನಸೌಧ ಸೆಕ್ಯೂರಿಟಿಯ ಎಸಿಪಿ ವಿಶ್ವನಾಥ್‌ಸಿಂಗ್ ಈ ಹಿಂದೆ ಹೆಡ್‌ಕಾನ್ಸ್‌ಟೇಬಲ್ ಆಗಿದ್ದು ಯಾವುದೋ ಖೋಟಾದಲ್ಲಿ ಬಡ್ತಿ ಹೊಂದಿಯೇ ಎಸಿಪಿಯಾದ. ಮೊದಲು ಮಲ್ಲೇಶ್ವರಂನ ಟ್ರಾಫಿಕ್ ಇನ್ಸ್‌ಪೆಕ್ಟರ್ ಆಗಿದ್ದ. ಆನಂತರ ಯಶವಂತಪುರಕ್ಕೆ ಟ್ರಾಫಿಕ್ ಇನ್ಸ್‌ಪೆಕ್ಟರ್ ಆದ. ಈಗ ಎಸಿಪಿಯಾದರೂ ಅದು ಹಿಂದಿನಷ್ಟು ಆಮದನಿಯ ಹುದ್ದೆಯೇನಲ್ಲ. ಇಂಥ ಸಣ್ಣ ಅವಕಾಶದಲ್ಲೇ ಈಜುಕೊಳ ಬಡಾವಣೆಯಲ್ಲಿ 45x30 ಬಿಲ್ಡಿಂಗು, ಮಗಳ ಹೆಸರಲ್ಲಿ 40x30 ಯ ಶಾಪಿಂಗ್ ಕಾಂಪ್ಲೆಕ್ಸ್ ಕಟ್ಟಿಸುತ್ತಾನೆಂದರೆ ಅದು ಸಣ್ಣ ಸಾಧನೆಯಲ್ಲ. ಹಾಗೆ ಉಪ್ಪಾರಪೇಟೆ ಟ್ರಾಫಿಕ್ ಇನ್ಸ್‌ಪೆಕ್ಟರ್ ಎಸ್.ಬಿ. ಮಲ್ಲಿಕಾರ್ಜುನ ಸದ್ದಿಲ್ಲದೇ ಎಚ್.ಆರ್.ಬಿ.ಆರ್. ಲೇಔಟಿನಲ್ಲಿ ಒಂದು ಕೋಟಿಗೂ ಮೀರಿದ ಬಂಗಲೆ ಕಟ್ಟಿಸುತ್ತಾರೆಂದರೆ ಇನ್ನು ಲೋಕಾಯುಕ್ತರ ಕಣ್ಣುತಪ್ಪಿಸಿ ಇನ್ನೆಷ್ಟು ಬಚ್ಚಿಟ್ಟಿರಬೇಡ?

ಇದ್ದುದರಲ್ಲಿ ಸಭ್ಯ ಮತ್ತು ಸಜ್ಜನ ಇನ್ಸ್‌ಪೆಕ್ಟರ್ ಮರಿಸ್ವಾಮಿಗೌಡ ಹುಟ್ಟಾ ಶ್ರೀಮಂತರು. ಉಪ್ಪಾರಪೇಟೆ, ಅಶೋಕ್‌ನಗರದಂಥ ಪ್ರಭಾವೀ ಪೊಲೀಸ್ ಠಾಣೆಗಳಲ್ಲಿ ವರ್ಷಾನುಗಟ್ಟಲೇ ಇದ್ದಾಗಲೂ ಕೈಬಾಯಿ ಕೆಡಿಸಿಕೊಂಡವರಲ್ಲ. ಲೋಕಾಯುಕ್ತದ ಕೆಂಗಣ್ಣಿಗೆ ಯಾವ ಕಾರಣಕ್ಕೆ ಬಿದ್ದರೋ? ಅವರಿಗಿಂತಲೂ ಕುಖ್ಯಾತರಾದ ಭ್ರಷ್ಟರಾದವರನ್ನೆಲ್ಲ ಕೈಬಿಟ್ಟು ಸರ್ಕಾರದ ಅನುಮತಿ ಪಡಕೊಂಡೇ ಕಟ್ಟಿಸಿದ ಬಂಗಲೆಯನ್ನೂ ಬಿಡದೇ ಲೋಕಾಯುಕ್ತ ರೇಡು ಮಾಡುತ್ತದೆಯೆಂದರೆ, ಯಾಕೋ ಅವರ ಗ್ರಹಚಾರ ಕೆಟ್ಟಿರಬೇಕು.



ಸಿದ್ದಪ್ಪ


ನಿಜಕ್ಕೂ ಲೋಕಾಯುಕ್ತ ಹಿಡಿಯಬೇಕಿದ್ದ ಅಸಲೀ ಖದೀಮರಿನ್ನೂ ಹಾಗೇ ಉಳಿದುಬಿಟ್ಟಿದ್ದಾರೆ. ಸಣ್ಣಪುಟ್ಟ ಮೀನುಗಳಷ್ಟೇ ಬಲೆಗೆ ಬಿದ್ದಿವೆ. ಲೋಕಾಯುಕ್ತದ ಹೊಸ ಎಡಿಜಿಪಿ ರೂಪ್‌ಕುಮಾರ್ ದತ್ತಾ ಈ ಹಿಂದೆ ಸಿಬಿಐನ ಭ್ರಷ್ಟಾಚಾರ ನಿಗ್ರಹದಳದಲ್ಲಿದ್ದವರು. ಅಲ್ಲಿದ್ದ ಹದಿನಾಲ್ಕು ವರ್ಷಗಳ ಕಾಲದ ತಮ್ಮ ಅನುಭವವನ್ನು ಬಳಸಿಕೊಂಡೇ ಇಂಥದೊಂದು ವ್ಯವಸ್ಥಿತ ದಾಳಿಯನ್ನು ಸಂಯೋಜಿಸಿದ್ದಾರೆ ನಿಜ. ಲೋಕಾಯುಕ್ತ ಸಂತೋಷ್ ಹೆಗಡೆಯವರಾಗಲಿ, ಎಡಿಜಿಪಿ ದತ್ತಾ ಆಗಲಿ ಇದನ್ನೇ ಮಹಾನ್ ಸಾಧನೆ ಎನ್ನುವುದಾದರೆ ಅಲ್ಲಿಗೆ ತಿಮಿಂಗಿಲಗಳನ್ನು ಹಿಡಿಯುವವರ್‍ಯಾರು?

ಬಲೆಗೆ ಬಿದ್ದ ಹುಡಿಪುಡಿಗಳೇ ಈ ಪಾಟಿ ಸಂಪಾದಿಸಿರುವಾಗ ಅಸಲೀ ಖದೀಮರು ಇನ್ನೆಷ್ಟು ದೋಚಿರಬೇಡ?

ಅವರನ್ನು ಮುಟ್ಟುವ ತಾಕತ್ತು ಲೋಕಾಯುಕ್ತಕ್ಕಿದೆಯೇ?

■ ರಾ. ಸೋಮನಾಥ್


ಚಲುವರಾಯನ ಆರ್‌ಟಿಓ ಶನಿಸಂತತಿ



ಬೋನಿಗೆ ಬಿದ್ದ ಆರ್‌ಟಿಓ ಇನ್ಸ್‌ಪೆಕ್ಟರ್‌ಗಳಾದ ಬಾಲಚಂದ್ರರಾವ್, ಈಶ್ವರ್ ನಾಯ್ಕ್, ಎಂ. ಲಕ್ಷ್ಮಣ, ಸಿದ್ದೇಶ್ವರ ಮತ್ತು ಶಂಕರಪ್ಪ ಇತ್ಯಾದಿಗಳಿಗೆ ಹೋಲಿಸಿದರೆ ಪೊಲೀಸ್ ಅಧಿಕಾರಿಗಳ ಗಳಿಕೆ ಏನೇನೂ ಅಲ್ಲ.

ಸದ್ಯ ಯಶವಂತಪುರದ ಆರ್‌ಟಿಓ ಇನ್ಸ್‌ಪೆಕ್ಟರ್ ಬಾಲಚಂದ್ರರಾವ್‌ನ ಡಾಲರ್ಸ್ ಕಾಲನಿಯ ಬಂಗಲೆಯೇ ಮೂರು ಕೋಟಿಯ ಸೊತ್ತಾಗುತ್ತದೆ. ಮತ್ತಿಕೆರೆಯಲ್ಲಿ ಪತ್ನಿ ಗೀತಾ ಹೆಸರಿನ 50x40 ಸೈಟು ಜೊತೆಗೆ 3200 ಅಡಿಯ ಮನೆ, ಪತ್ನಿಯ ಹೆಸರಿಗೊಂದು ಸರ್ವೀಸ್ ಸ್ಟೇಷನ್, ಹೆಬ್ಬಾಳದಲ್ಲಿ 3 ಗುಂಟೆ ಜಮೀನು; ಇತ್ಯಾದಿಯೆಲ್ಲ ಸೇರಿಬಿಟ್ಟರೆ ಬಾಲಚಂದ್ರರಾವ್ ಕಮ್ಮಿಯೆಂದರೂ ನಾಲ್ಕು ಕೋಟಿಯ ಧಣಿ!

ಮೂಲತಃ ಸಿರ್ಸಿಯ ಈಶ್ವರನಾಯ್ಕ ಹೇಳಿಕೊಳ್ಳುವಂಥ ಫಲವತ್ತಾದ ಚೆಕ್‌ಪೋಸ್ಟುಗಳಲ್ಲಿ ದುಡಿದಿಲ್ಲವಾದರೂ ಹೆಬ್ಬಾಳದ ಚೋಳನಾಯಕನಹಳ್ಳಿಯಲ್ಲಿ 50x80 ಅಳತೆಯ ಕಾಂಪ್ಲೆಕ್ಸ್ ಕಟ್ಟಿಸಿದ್ದಾನೆ. ದೊಡ್ಡಬೊಮ್ಮಸಂದ್ರದಲ್ಲಿ 60x40 ಅಡಿಯ ಮತ್ತೊಂದು ಸೈಟು ಕೊಳ್ಳುತ್ತಾನೆ. ಬ್ಯಾಂಕುಗಳಲ್ಲಿ ಹದಿನಾರು ವಿವಿಧ ಅಕೌಂಟುಗಳನ್ನು ತೆಗೆದು ಲಕ್ಷಾಂತರ ರೂಪಾಯಿ ಶೇಖರಿಸಿಟ್ಟಿದ್ದಾನೆ. ಇನ್ನು ದೇವನಹಳ್ಳಿ ಆರ್‌ಟಿಓ ಇನ್ಸ್‌ಪೆಕ್ಟರ್ ಲಕ್ಷ್ಮಣನ ಕೋರಮಂಗಲದ ಬಂಗಲೆಯೊಂದೇ ಎರಡೂವರೆ ಕೋಟಿ ಬೆಲೆ ಬಾಳುತ್ತದೆ. ಆತನ ಜಯನಗರದ ಬಂಗಲೆಯ ಹಾಲಿ ಮಾರ್ಕೆಟ್ ರೇಟೇ ಒಂದೂವರೆ ಕೋಟಿಯಾಗುತ್ತದೆ. ಬಳ್ಳಾರಿಯ ಸಿದ್ದೇಶ್ವರನ ಸ್ಥಿರ-ಚರಾಸ್ತಿ ಇವರ್‍ಯಾರಿಗೂ ಕಮ್ಮಿಯಿಲ್ಲ.



ಮೆಳ್ಳೀಗೇರಿ

ಇದು ಅಂಥ ಪ್ರಭಾವಿಗಳಲ್ಲದ ಯಾವತ್ತೂ ಆಯಕಟ್ಟಿನ ಉತ್ಪತ್ತಿಯ ಚೆಕ್‌ಪೋಸ್ಟುಗಳನ್ನೇ ಕಾಣದ ಆರ್‌ಟಿಓ ಖದೀಮರ ಅಲ್ಪಕಾಲದ ಗಳಿಕೆಯಾದರೆ, ಆ ಕಾಲದಿಂದಲೂ ದೋಚುತ್ತಲೇ ಇರುವ ಅಸಲೀ ಬಕಾಸುರರ ಪಟ್ಟಿ ಇನ್ನೂ ದೊಡ್ಡದಿದೆ.

ಬಿಜಾಪುರದ ಝಳಕಿ ಚೆಕ್‌ಪೋಸ್ಟ್, ಬೀದರ್‌ನ ಹುಮ್ನಾಬಾದ್ ಚೆಕ್‌ಪೋಸ್ಟ್, ಬೆಳಗಾವಿ, ಅತ್ತಿಬೆಲೆಯಂಥ ಚೆಕ್‌ಪೋಸ್ಟುಗಳನ್ನು ಆ ಕಾಲದಿಂದಲೂ ದೋಚುತ್ತಲೇ ಬಂದ ಆರ್‌ಟಿಓ ಇನ್ಸ್‌ಪೆಕ್ಟರ್‌ಗಳ ಪೈಕಿ ಮಂಜೇಗೌಡ ಒಬ್ಬನೇ ವಿಜಯನಗರದ ಒಂಬತ್ತನೇ ಮೇನ್‌ನಲ್ಲಿ ಸಾಲುಸಾಲಾಗಿ ನಾಲ್ಕು ಬಂಗಲೆಗಳನ್ನು ಖರೀದಿಸಿದ್ದಾನೆ. ಈತ ಮಾಜಿ ಸಾರಿಗೆ ಮಂತ್ರಿ ಚಲುವರಾಯನ ಸಂಬಂಧಿ. ಈತನ ಬಂಟ ಸತ್ಯ ಬೆಂಗಳೂರು-ಮೈಸೂರುಗಳಲ್ಲಿ ಕಮ್ಮಿಯೆಂದರೂ ಹತ್ತು ಸೈಟುಗಳ ಒಡೆಯ. ಸದ್ಯ ಝಳಕಿ ಚೆಕ್‌ಪೋಸ್ಟ್‌ನ್ನು ದೋಚುತ್ತಿರುವ ಶ್ರೀನಿವಾಸಪ್ಪ ಒಬ್ಬನೇ ಹತ್ತುಕೋಟಿಯ ಆಸ್ತಿವಂತ. ನಾಗರಬಾವಿಯ ಅಂಬೇಡ್ಕರ್ ಕಾಲೇಜ್ ಬಳಿ ವಿಶಾಲ ಕಾಂಪ್ಲೆಕ್ಸ್, ರಾಜರಾಜೇಶ್ವರಿ ನಗರದಲ್ಲೊಂದು ಬಂಗಲೆ, ಜೆಪಿನಗರದಲ್ಲಿ ಇನ್ನೊಂದು ಬಂಗಲೆಯ ಒಡೆಯ ಶ್ರೀನಿವಾಸಪ್ಪ ಝಳಕಿ ಚೆಕ್‌ಪೋಸ್ಟಿನ ಕಾಯಂ ಧಣಿ. ಈತನ ಶಿಷ್ಯ ಪ್ರಮುತೇಶ್ ಎಂಬಾತ ಸದ್ಯ ಚಿತ್ರದುರ್ಗದ ಆರ್‌ಟಿಓ ಕಚೇರಿಯನ್ನಾಳುತ್ತಾನೆ. ಯಾವ ಮಂತ್ರಿಯೂ ನಾಚುವಂತೆ ಎನ್‌ಜಿಇಎಫ್ ಲೇಔಟಿನಲ್ಲಿ ಅರಮನೆ ಕಟ್ಟಿಸಿದ್ದಾನೆ.

ಇನ್ನು ನೆಲಮಂಗಲದ ಇನ್ಸ್‌ಪೆಕ್ಟರ್ ಕೆ.ಸಿ. ಜಗದೀಶನ ಬಸವೇಶ್ವರ ನಗರದ ಬಂಗಲೆ ನೋಡಿಬಿಟ್ಟರೆ ಎಂಥವರಿಗೂ ತಲೆ ತಿರುಗುತ್ತದೆ. ಕೊಪ್ಪಳದ ಆರ್‌ಟಿಓ ಇನ್ಸ್‌ಪೆಕ್ಟರ್ ಸೋಮಶೇಖರ್, ಝಳಕಿಯ ವಿ.ಪಿ. ರಮೇಶ್ ಬೀದರ್‌ನ ಇಕ್ರಂ ಪಾಷಾ ಮುಂತಾದ ಆರ್‌ಟಿಓ ಬಕಾಸುರರ ಅಕ್ರಮ ಗಳಿಕೆಯ ಮುಂದೆ ಈಗ ಬಲೆಗೆ ಬಿದ್ದ ಆರ್‌ಟಿಓ ಕ್ರಿಮಿಗಳು ಏನೇನೂ ಅಲ್ಲ. ಈ ಪೈಕಿ ಕೊಪ್ಪಳದ ಆರ್‌ಟಿಓ ಇನ್ಸ್‌ಪೆಕ್ಟರ್ ಮೆಳ್ಳಿಗೇರಿ ಇಡೀ ಮೈನ್ಸ್ ಸ್ಮಗ್ಲಿಂಗ್ ದಂಧೆಯ ಸೂತ್ರಧಾರ. ಬಳ್ಳಾರಿಯ ಕಳ್ಳಗಣಿಗಳಿಂದ ಕರಾವಳಿಯ ಬಂದರುಗಳಿಗೆ ಪ್ರತಿನಿತ್ಯ ಲಾರಿಗಳಲ್ಲಿ ನಡೆಯುವ ಓವರ್‌ಲೋಡಿಂಗ್ ದಂಧೆಗೆ ಕಾರಣಕರ್ತನಾದ ಇದೇ ಮೆಳ್ಳಿಗೇರಿ ಇವತ್ತು ನೂರು ಕೋಟಿಯ ಆಸ್ತಿವಂತ. ಇನ್ನು ಝಳಕಿ ಚೆಕ್‌ಪೋಸ್ಟ್ ಅನ್ನು ಆವತ್ತಿನಿಂದಲೂ ಆಕ್ರಮಿಸಿರುವ ಶ್ರೀನಿವಾಸಪ್ಪ ಸಾರಿಗೆ ಮಂತ್ರಿ ಚಲುವರಾಯಸ್ವಾಮಿಗೆ ರೊಕ್ಕ ತಿನ್ನಿಸಿಯೇ ಟ್ರಾನ್ಸ್‌ಫರ್ ದಂಧೆಗೆ ಕೈಯಿಟ್ಟ.

ಝಳಕಿ ಚೆಕ್‌ಪೋಸ್ಟ್‌ನ ಹಗಲು ದರೋಡೆ, ಕೊಪ್ಪಳ ಆರ್‌ಟಿಓ ಕಚೇರಿಯ ಮೈನ್ಸ್ ಸ್ಮಗ್ಲಿಂಗ್ ಮತ್ತು ಓವರ್‌ಲೋಡಿಂಗ್ ದಂಧೆ, ಬೆಳಗಾವಿ, ಬೀದರ್, ಅತ್ತಿಬೆಲೆ, ಕೋಲಾರದ ಆರ್‌ಟಿಓ ಕಚೇರಿಗಳ ನಿತ್ಯ ಸುಲಿಗೆಗಳ ಮೇಲೆ ಯಾವತ್ತೂ ದಾಳಿ ಮಾಡದ ಲೋಕಾಯುಕ್ತ ಇಂಥ ಯಕಶ್ಚಿತ್ ಆರ್‌ಟಿಓ ಇನ್ಸ್‌ಪೆಕ್ಟರ್‌ಗಳ ಮೇಲಷ್ಟೇ ರೇಡು ಮಾಡುತ್ತದೆಯೆಂದರೆ ಏನರ್ಥ?

ಸಣ್ಣ ಮೀನುಗಳನ್ನು ಬಲಿ ಹಾಕಿ ದೊಡ್ಡ ಮಿಕಗಳನ್ನು ಕೊಬ್ಬಿಸುವುದೆ? ■

ತಲಾ ಎಮ್ಮೆಲ್ಲೆಗೆ ಒಂದು ಕೋಟಿ?

ಕುಮಾರ್-ಜಮೀರ್ ಕುದುರೆ ಖರೀದಿ

ಅಪ್ಪ ಮಕ್ಕಳನ್ನು ದಾಟಾಮಗೋಚರ ಬೈಯ್ದು ಬಿಜೆಪಿಯ ಚೆಡ್ಡಿ ವೀರರು ಇದ್ದಕ್ಕಿದ್ದಂತೆ ನರಮ್ಮಾಗಿದ್ದು, ಕಾಂಗ್ರೆಸ್ ಜೊತೆ ಕೈಜೋಡಿಸುವಂತೆ ಎಂ.ಪಿ. ಪ್ರಕಾಶ್‌ರನ್ನೇ ದೆಹಲಿಗಟ್ಟಿದ ಕುಮಾರಸ್ವಾಮಿ ವಿಕಾವಿಕಿ ಉಲ್ಟಾ ಹೊಡೆದದ್ದು, ನಡುರಸ್ತೆಯಲ್ಲಿ ಕಚ್ಚಾಡಿದ ಬಿಜೆಪಿ-ಜೆಡಿಎಸ್‌ಗಳು ಮತ್ತೆ ಕೈಕೈ ಮಿಲಾಯಿಸಿದ್ದು ನಿಜಕ್ಕೂ ಪಕ್ಷ ಉಳಿಸಿಕೊಳ್ಳುವ ಒಂದೇ ಕಾರಣಕ್ಕಾ?

ಅಥವಾ ಇದೆಲ್ಲವನ್ನೂ ಮೀರಿದ ಇನ್ನಾವುದೋ ನಿಗೂಢ ಕಾರಣವಿತ್ತಾ?



ಎಂ.ಪಿ. ಪ್ರಕಾಶ್‌ರನ್ನು ಬೆಂಬಲಿಸಿ ದೆಹಲಿಗೆ ಹೋಗಿದ್ದ ಅರ್ಧಕ್ಕರ್ಧ ಜೆಡಿಎಸ್ ಎಮ್ಮೆಲ್ಲೆಗಳು ಅರ್ಧಕ್ಕೇ ಕೈಕೊಟ್ಟಿದ್ದೇಕೆ? ಒಡೆದು ಹೋಗಲಿದ್ದ ಜೆಡಿಎಸ್ ವಿಕಾವಿಕಿ ಒಗ್ಗೂಡಿದ್ದೇಕೆ?

ಅದು ಚುನಾವಣೆಯನ್ನು ತಪ್ಪಿಸುವ ಗುರಿಯೊಂದೇ ಆಗಿದ್ದರೆ ಬಿಜೆಪಿಗಿಂತಲೂ ಕಾಂಗ್ರೆಸ್ ಜೊತೆ ಕೈಜೋಡಿಸಬಹುದಿತ್ತಲ್ಲ? ಹಾಗಾದರೂ ಚುನಾವಣೆ ತಪ್ಪುತ್ತಿತ್ತಲ್ಲವೆ?

ಇಂಥ ಅನೇಕ ಪ್ರಶ್ನೆಗಳ ಮೂಲದಲ್ಲಿ ಕುರುಡು ಕಾಂಚಾಣವಲ್ಲದೇ ಮತ್ತೇನಿಲ್ಲ ಎಂಬ ಪರಮಸತ್ಯ ಬಹುಶಃ ಅದೆಷ್ಟು ಜನಕ್ಕೆ ಗೊತ್ತೋ? ಆದರೆ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಮತ್ತು ಜೆಡಿಎಸ್‌ನ ಎಲ್ಲಾ ಶಾಸಕರಿಗಂತೂ ಜೆಡಿಎಸ್-ಬಿಜೆಪಿ ಪುನರ್ ಮಿಲನಕ್ಕೆ ದುಡ್ಡಲ್ಲದೇ ಮತ್ತೇನಿಲ್ಲ ಎಂಬುದು ಖಂಡಿತ ಗೊತ್ತಿರಲೇಬೇಕು!

ಸದ್ಯ ಜೆಡಿಎಸ್‌ನ ಕನಿಷ್ಠ ಇಪ್ಪತ್ತೈದು ಮಂದಿ ಎಮ್ಮೆಲ್ಲೇಗಳಿಗೆ ತಲಾ 25 ಲಕ್ಷದಂತೆ ಒಂದು ಕಂತಿನ ಅಡ್ವಾನ್ಸ್ ಜೇಬಿಗೆ ಬಿದ್ದಿದೆ. ಉಳಿಕೆ 75 ಲಕ್ಷವನ್ನು ಯಡ್ಡಿ ಮುಖ್ಯಮಂತ್ರಿಯಾದ ಮೇಲೆ ಕೊಟ್ಟೇ ಕೊಡುತ್ತೇನೆಂದು ಸ್ವತಃ ಕುಮಾರಸ್ವಾಮಿಯೇ ಗ್ಯಾರಂಟಿ ಕೊಟ್ಟಿದ್ದಾರೆ. ಹೀಗೆ ಎಮ್ಮೆಲ್ಲೇಗಳಿಗೆ ಬಟವಾಡೆಯಾದ ದುಡ್ಡಿನ ಒಂದು ಪಾಲನ್ನು ಡಿಎಲ್‌ಎಫ್ ಕಂಪೆನಿಯೂ ಮತ್ತೊಂದು ಪಾಲನ್ನು ಬಿಜೆಪಿಯ ಲ್ಯಾಂಡ್ ಗ್ರಾಬರ್ ಕಟ್ಟಾ ಸುಬ್ರಹ್ಮಣ್ಯಂ ನಾಯ್ಡುವೂ ಪಾವತಿ ಮಾಡಿದ್ದು ಜೇಬಿಗಿಳಿಸಿದ ಯಾವ ಜೆಡಿಎಸ್ ಎಮ್ಮೆಲ್ಲೆಗೆ ತಾನೇ ಗೊತ್ತಿಲ್ಲ?

ಅಕ್ಟೋಬರ್ 27 ರಂದು ದೆಹಲಿಗೆ ಹೋದ ಎಂ.ಪಿ. ಪ್ರಕಾಶ್ ಜೊತೆಗೆ ವೀರಬಸಂತರೆಡ್ಡಿ ಮುದ್ನಾಳ್, ಬೇಳೂರು ಗೋಪಾಲಕೃಷ್ಣ, ಸುರಪುರದ ರಾಜೂಗೌಡ, ಬಸವಕಲ್ಯಾಣದ ಮಲ್ಲಿಕಾರ್ಜುನ ಕೂಬ, ಅಮರೇಗೌಡ ಬಯ್ಯಾಪುರ, ಬಿ.ಸಿ. ಪಾಟೀಲ್, ಶರಣಬಸಪ್ಪ ದರ್ಶನಾಪುರ, ರವಿಕಾಂತ ಪಾಟೀಲ್, ಚಿತ್ತಾಪುರದ ವಿಶ್ವನಾಥ್ ಪಾಟೀಲ್ ಹೆಬ್ಬಾಳ ಮತ್ತು ಸಂತೋಷ್ ಲಾಡ್ ಮುಂತಾದ ಹದಿಮೂರು ಮಂದಿ ಶಾಸಕರ ದಂಡೇ ಇತ್ತು. ಅಫಜಲಪುರದ ಎಂ.ವೈ. ಪಾಟೀಲ, ಕೆ.ಎನ್. ರಾಜಣ್ಣ, ಶಿಡ್ಲಘಟ್ಟದ ಮುನಿಶಾಮಪ್ಪ, ಬಳ್ಳೊಳ್ಳಿಯ ಆರ್.ಕೆ. ರಾಥೋಡ್ ಮುಂತಾದವರೆಲ್ಲ ಸೇರಿಬಿಟ್ಟರೆ ಆ ಸಂಖ್ಯೆ ಇಪ್ಪತ್ತಮೂರಕ್ಕೇರುತ್ತಿತ್ತು. ಇವರ ಜೊತೆಗೆ ಸಿದ್ಧರಾಮಯ್ಯ ಬಣದ ಒಂಭತ್ತು ಮಂದಿ ಸೇರಿಬಿಟ್ಟರೆ ಎಂ.ಪಿ. ಪ್ರಕಾಶ್ ಬೆನ್ನಿಗೆ ಒಟ್ಟು 32 ಎಮ್ಮೆಲ್ಲೆಗಳಾಗುತ್ತಿದ್ದರು. ಇವರೊಡನೆ ವಾಟಾಳ್ ನಾಗ ರಾಜ್ ಮತ್ತು ಕೆಜಿಎಫ್‌ನ ರಾಜೇಂದ್ರನ್ ಕೈಜೋಡಿಸುವ ಸಾಧ್ಯತೆಯಿತ್ತು. ಜೊತೆಗೇ ಜೆಡಿಎಸ್‌ನ ಮೂವರು ಒಕ್ಕಲಿಗ ಶಾಸಕರೂ ಪ್ರಕಾಶ್ ಪಾಳಯಕ್ಕೆ ಸೇರಲು ಉತ್ಸುಕರಾಗಿದ್ದರು. ಎಲ್ಲವೂ ಲೆಕ್ಕಾಚಾರದಂತೆ ನಡೆದುಬಿಟ್ಟಿದ್ದರೆ ಪ್ರಕಾಶ್ ಬೆನ್ನಿಗೆ ಒಟ್ಟು 38 ಶಾಸಕರಿರುತ್ತಿದ್ದರು.

ಅಲ್ಲಿಗೆ ಕಾಂಗ್ರೆಸ್ ಮತ್ತು ಜೆಡಿಎಸ್‌ನ ಪ್ರಕಾಶ್ ಬೆಂಬಲಿಗರು ಸೇರಿ ಅಪ್ಪ ಮಕ್ಕಳನ್ನು ಹೊರಗಿಟ್ಟು ಸರ್ಕಾರ ರಚಿಸುವುದು ನಿಕ್ಕಿಯಾಗಿತ್ತು. ಈ ಹಂತದಲ್ಲೇ ಖರ್ಗೆ ಮತ್ತು ಡಿಕೇಶಿ ಬಿಡದಿ ಟೌನ್‌ಶಿಪ್‌ನ ಗುತ್ತಿಗೆ ಹಿಡಿದಿದ್ದ ಡಿಎಲ್‌ಎಫ್ ಕಂಪನಿಯ ವಿರುದ್ಧ ಕಾರ್ಯಾಚರಣೆಗಿಳಿದುಬಿಟ್ಟರು.

ಬಿಡದಿ ಟೌನ್‌ಶಿಪ್‌ನ ಗುತ್ತಿಗೆಯನ್ನು ಡಿಎಲ್‌ಎಫ್ ಕಂಪೆನಿಗೇ ಕೊಡಿಸುವಲ್ಲಿ ಮಿಕ್ಕೆಲ್ಲರಿಗಿಂತಲೂ ದೊಡ್ಡ ಕೈಯಿರುವುದು ಬಾಲಕೃಷ್ಣೇಗೌಡರದ್ದು. ಹತ್ತು ಸಾವಿರ ಕೋಟಿಯ ಈ ಪ್ರಾಜೆಕ್ಟ್‌ಗೆ ಬಾಲಕೃಷ್ಣೇ ಗೌಡರ ಮಗನೇ ಸ್ಲೀಪಿಂಗ್ ಪಾರ್ಟನರ್. ಈ ಹೊತ್ತಿಗಾಗಲೇ ನೂರಾರು ಕೋಟಿಯ ಕಮೀಷನ್ ಗಿಟ್ಟಿಸಿದ ಬಾಲಕೃಷ್ಣೇಗೌಡರಿಗೆ ಡಿಎಲ್‌ಎಫ್ ಧಣಿಯಿಂದ ಆತಂಕದ ಕರೆ ಬಂದಿದೆ. ಸರ್ಕಾರ ಬಿದ್ದಿದ್ದೇ ಇಡೀ ಯೋಜನೆಯನ್ನೇ ರದ್ದುಗೊಳಿಸಲು ಕಾಂಗ್ರೆಸ್ ರಾಜ್ಯಪಾಲರನ್ನು ಛೂ ಬಿಟ್ಟಿದೆಯೆಂದೂ ಹಾಗಾಗಿದ್ದೇ ಆದಲ್ಲಿ ಪಾಲುದಾರಿಕೆಯನ್ನೇ ರದ್ದು ಗೊಳಿಸಬೇಕಾಗುತ್ತದೆಯೆಂದೂ ಡಿಎಲ್‌ಎಫ್ ಧಣಿ ಚೌಕಾಸಿಗಿಳಿದಿದ್ದಾನೆ. ಅಲ್ಲಿಗೆ ಕಾಂಗ್ರೆಸ್ ತಮ್ಮ ಬುಡಕ್ಕೇ ಬತ್ತಿಯಿಡುತ್ತಿದೆ ಎಂಬುದು ದೇವೇಗೌಡರಿಗೆ ಮನದಟ್ಟಾಗಿದೆ.



ಇಂಥದ್ದೊಂದು ಬೆಳವಣಿಗೆ ಕಂಡೇ ದಂಗುಬಡಿದವನು ಬಿಜೆಪಿಯ ಕಟ್ಟಾನಾಯ್ಡು. ಅಧಿಕಾರ ಕಾಂಗ್ರೆಸ್ ಪಾಲಾದರೆ ತನ್ನ ನಕಲಿ ಕಂಪೆನಿಗೆ 448 ಎಕರೆ ಭೂಮಿ ತಪ್ಪುತ್ತದೆ. ಸ್ಕಿಲ್ ಧಣಿ ನಿಖಿಲ್ ಗಾಂಧಿಗೆ ದೇವನಹಳ್ಳಿ ಏರ್‌ಪೋರ್ಟ್ ಹಿಂಭಾಗದಲ್ಲಿ ಕೊಟ್ಟ 250 ಎಕರೆ ಜಮೀನಿಗೆ ಪಡಕೊಂಡ ಕಮೀಷನನ್ನು ವಾಪಸ್ಸು ಮಾಡಬೇಕಾಗುತ್ತದೆ. ಇದಕ್ಕಿಂತ ಯಡ್ಡಿ ಮುಖ್ಯಮಂತ್ರಿಯಾಗಿಬಿಟ್ಟರೆ, ಲ್ಯಾಂಡೂ ಉಳಿಯುತ್ತದೆ ಕಮಿಷನ್ನೂ ಗಿಟ್ಟುತ್ತದೆ.

ಹಾಗಂತ ಲೆಕ್ಕಹಾಕಿಯೇ ವೆಂಕಯ್ಯ ನಾಯ್ಡುವನ್ನು ಅರ್ಜೆಂಟಾಗಿ ಬೆಂಗಳೂರಿಗೆ ಬರಮಾಡಿಕೊಂಡ ಕಟ್ಟಾ ಬಿಜೆಪಿ ರಾಷ್ಟ್ರಾಧ್ಯಕ್ಷ ರಾಜನಾಥ್‌ಸಿಂಗ್‌ರ ಮನವೊಲಿಸಿ ಮತ್ತೆ ಜೆಡಿಎಸ್-ಬಿಜೆಪಿ ಸರ್ಕಾರ ಸ್ಥಾಪಿಸುವಂತೆ ಮಸಲತ್ತು ಮಾಡುವಂತೆ ಮೂವತ್ತು ಕೋಟಿ ರೂಪಾಯಿಯ ಗಂಟು ಮಡಗಿದ್ದಾನೆ. ದುಡ್ಡೆತ್ತಿಕೊಂಡು ಹೋದ ವೆಂಕಯ್ಯ ನೇರವಾಗಿ ರಾಜನಾಥ್ ಸಿಂಗರೆಲ್ಲೇ ಕಂಡು ಡೀಲು ಕುದುರಿಸಿದ್ದಾನೆ. ಸಾಲದ್ದಕ್ಕೆ ಎಲ್ಲಾ ಜೆಡಿಎಸ್ ಶಾಸಕರಿಗೆ ತಲಾ ಇಪ್ಪತ್ತೈದು ಲಕ್ಷದಂತೆ ಸರ್ಕಾರ ಸ್ಥಾಪನೆಯ ಅಡ್ವಾನ್ಸ್ ರೂಪದಲ್ಲಿ ಇಪ್ಪತ್ತು ಕೋಟಿ ದುಡ್ಡನ್ನು ಕುಮಾರಸ್ವಾಮಿಗೆ ಮುಟ್ಟಿಸಿದ್ದಾನೆ.

ದುಡ್ಡು ತಂದದ್ದು ಚಾಮರಾಜಪೇಟೆ ಶಾಸಕ ಜಮೀರ್. ದುಡ್ಡು ಬಂದಿದ್ದೇ ತಡ ಕುಮಾರ್-ಜಮೀರ್ ಸೇರಿ ಎಂ.ಪಿ. ಪ್ರಕಾಶ್ ಜೊತೆ ದೆಹಲಿಗೆ ಹಾರಿದ್ದ ಒಬ್ಬೊಬ್ಬರೇ ಶಾಸಕರಿಗೆ ಗಾಳ ಹಾಕಿದ್ದಾರೆ. ಆತನ ಎಂ.ಪಿ. ಪ್ರಕಾಶರ ನಿಷ್ಠ ಬೆಂಬಲಿಗರಂತಿದ್ದ ವಿಶ್ವನಾಥ್ ಪಾಟೀಲ್ ಹೆಬ್ಬಾಳ್, ಬಿ.ಸಿ. ಪಾಟೀಲ್, ಕೆ.ಎನ್. ರಾಜಣ್ಣ, ಶರಣಬಸಪ್ಪ ದರ್ಶನಾಪುರ, ಎಂ.ವೈ. ಪಾಟೀಲ್, ಕೊಳ್ಳೇಗಾಲದ ಬಾಲರಾಜ್, ನರಸಿಂಹ ನಾಯಕ್, ಬಸಂತರೆಡ್ಡಿ ಮುದ್ನಾಳ್ ಮುಂತಾದವರೆಲ್ಲ ವಿಕಾವಿಕಿ ಪ್ರಕಾಶ್‌ಗೆ ಟಾಟಾ ಹೇಳಿ ಬೆಂಗಳೂರಿಗೆ ಬಂದಿದ್ದಾರೆ.


ಇವರೆಲ್ಲರಿಗೂ ಸದಾಶಿವನಗರದ ಜಮೀರ್ ಗೆಸ್ಟ್‌ಹೌಸಿನಲ್ಲೇ ಅಡ್ವಾನ್ಸ್ ಪಾವತಿಯಾಗಿದೆ. ಇದು ಗೊತ್ತಾಗಿದ್ದೇ ಜೆಡಿಎಸ್‌ನ ಡಿ. ನಾಗರಾಜಯ್ಯ, ಶ್ರೀನಿವಾಸ್, ಸಿ.ಎಸ್. ಪುಟ್ಟರಾಜು, ಸುನೀತಾ ವೀರಪ್ಪಗೌಡ, ಪಾವಗಡದ ತಿಮ್ಮರಾಯಪ್ಪ ತಮಗೂ ಒಂದೊಂದು ಕೋಟಿ ಕೊಡುವಂತೆ ಚಲುವರಾಯಸ್ವಾಮಿಗೆ ದುಂಬಾಲು ಬಿದ್ದಿದ್ದಾರೆ.

ಅಲ್ಲಿಗೆ ಜೆಡಿಎಸ್‌ನ ಇಪ್ಪತ್ತೈದು ಮಂದಿ ಶಾಸಕರಿಗೆ ತಲಾ 25 ಲಕ್ಷದಂತೆ ಒಟ್ಟು ಆರೂಕಾಲು ಕೋಟಿ ರೂಪಾಯಿ ಬಟವಾಡೆಯಾಗಿತ್ತು. ವೆಂಕಯ್ಯನಾಯ್ಡು ಒಬ್ಬನಿಗೆ ಕಟ್ಟಾ ಮೂಲಕ ಒಟ್ಟು 60 ಕೋಟಿ ರೂಪಾಯಿ ಸೇರಿತ್ತು! ಡಿಎಲ್‌ಎಫ್ ಧಣಿಯಿಂದ ಹಲವು ಕೋಟಿಗಳ ಒಂದು ಕಂತು ಮತ್ತು ಕಟ್ಟಾ ವಿತರಿಸಿದ ಎರಡನೇ ಕಂತು ಜೆಡಿಎಸ್-ಬಿಜೆಪಿಯನ್ನು ಎರಡನೇ ಬಾರಿ ಒಗ್ಗೂಡಿಸಿತ್ತು. ಸರ್ಕಾರ ಬಂದರೆ ಯಾರಿಗೆಷ್ಟು ಲಾಭವೋ ಗೊತ್ತಿಲ್ಲ; ಆದರೆ ಬಿಡದಿ ಟೌನ್‌ಶಿಪ್‌ನ ಡಿಎಲ್‌ಎಫ್‌ನ ಕಂಪೆನಿಗೂ ಕಟ್ಟಾ ಕೈಹಾಕಿದ ಭೂಕಬಳಿಕೆಗೂ ಲಾಭ ಕಟ್ಟಿಟ್ಟ ಬುತ್ತಿ.

–ರಾ.ಸೋ

ಚಾಮರಾಜನಗರದಲ್ಲಿ ರಾಮೇಶ್ವರಪ್ಪ ಎಂಬ ಹೆಗ್ಗಣ

ರಾಜ್ಯದ ಅತೀ ಹಿಂದುಳಿದ ಪ್ರದೇಶಗಳಲ್ಲಿ ಒಂದಾದ ಚಾಮರಾಜನಗರ ಸದ್ಯಕ್ಕೆ ಉದ್ಧಾರವಾಗುವ ಲಕ್ಷಣಗಳು ಕಾಣುತ್ತಿಲ್ಲ. ಒಂದೆಡೆ ನಾಮರ್ಥ ಜಿಲ್ಲಾಧಿಕಾರಿ ವಿಶ್ವನಾಥ ರೆಡ್ಡಿ, ಇನ್ನೊಂದೆಡೆ ಆತನನ್ನು ಕೋಲುಬಸವನಂತೆ ಆಡಿಸುವಷ್ಟು ಬಲಿತಿರುವ ಆಹಾರ ಇಲಾಖೆಯ ಉಪನಿರ್ದೇಶಕ ಕಾ. ರಾಮೇಶ್ವರಪ್ಪ ಎಂಬ ಹೆಗ್ಗಣ. ಇವರ ಕೈಯಲ್ಲಿ ಸಿಕ್ಕು ಚಾಮರಾಜನಗರ ಜಿಲ್ಲೆ ಕತ್ತಲೆಯಿಂದ ಕಗ್ಗತ್ತಲಿಗೆ ಹೋಗುತ್ತಿರುವುದಂತೂ ಸತ್ಯ. ಅದರಲ್ಲೂ ಈ ರಾಮೇಶ್ವರಪ್ಪ ಎಂಬ ವಸೂಲಿ ರಾಜನ ದಗಲ್ಬಾಜಿಗಳನ್ನು ನೋಡಿದರೆ ಜಿಲ್ಲೆಯಲ್ಲಿ ಸರ್ಕಾರ, ಕಾನೂನು, ಜಿಲ್ಲಾಧಿಕಾರಿ, ಮಂತ್ರಿ ಎಲ್ಲವೂ ಇವನೇ ಆಗಿಹೋಗಿದ್ದಾನೇನೋ ಎಂಬ ಅನುಮಾನ ಬಾರದಿರದು. ತನಗೆ ಗೊಡ್ಡು ಸಲಾಮು ಹೊಡೆಯುವ ಭ್ರಷ್ಟ ಅಧಿಕಾರಿಗಳಿಗೆ ನೀರು ಗೊಬ್ಬರ ತಿನ್ನಿಸಿ ಬೆಳೆಸುವುದು, ತನ್ನ ಮಾತನ್ನು ಪ್ರಶ್ನಿಸುವವರನ್ನು, ತನ್ನ ದಾರಿಗೆ ಅಡ್ಡ ಬರುವವರನ್ನು ತನಗಿರುವ ಪವರ್ ಬಳಸಿಕೊಂಡು ನೀರು ನೆರಳು ಇಲ್ಲದ ಜಾಗಕ್ಕೆ ವರ್ಗಾವಣೆ ಮಾಡಿಸುವುದು ಇವನ ದಿನನಿತ್ಯದ ಕಸುಬುಗಳಾಗಿ ಹೋಗಿವೆ.



ಕಾ. ರಾಮೇಶ್ವರಪ್ಪ

ರಾಮೇಶ್ವರಪ್ಪನ ಭ್ರಷ್ಟ ಚರಿತ್ರೆ

ಮೂಲತಃ ಚಿತ್ರದುರ್ಗದವನಾದ ರಾಮೇಶ್ವರಪ್ಪ ಮಂಡ್ಯ ಜಿಲ್ಲೆಗೆ ಬಂದು ಆಹಾರ ಇಲಾಖೆಯಲ್ಲಿ ಭ್ರಷ್ಟಾಚಾರಗಳೊಂದಿಗೇನೇ ತನ್ನ ವೃತ್ತಿಜೀವನವನ್ನು ಪ್ರಾರಂಭಿಸಿದ. ಅಲ್ಲಿ ಮಾಡಬಾರದ ಘನಂದಾರಿ ಹಗರಣಗಳನ್ನು ಮಾಡಿ, ತಿನ್ನಬಾರದಷ್ಟು ತಿಂದು ಮೈಕೈ ಹೊಲಸು ಮಾಡಿಕೊಂಡು ಕಂಡಕಂಡವರ ಹತ್ತಿರ ಛೀ... ಥೂ... ಎಂದು ಉಗಿಸಿಕೊಂಡಿದ್ದ, 1998-99ನೇ ಸಾಲಿನಲ್ಲಿ ನಡೆದ ಕೆ.ಎ.ಎಸ್. ಪರೀಕ್ಷೆಯಲ್ಲಿ ತನ್ನ ಕುಟುಂಬದ ನಾಲ್ಕು ಜನ (ತನ್ನ ನಾದಿನಿಯನ್ನೂ ಒಳಗೊಂಡಂತೆ) ಕ್ರಮವಾಗಿ 10 ರ‍್ಯಾಂಕುಗಳೊಳಗೆ ಬಂದು ವಿವಿಧ ಇಲಾಖೆಯಲ್ಲಿ ನೇಮಕವಾಗುವಂತೆ ಕೈಯಾಡಿಸಿದ್ದ. ಆದರೆ, ಆಗ ಆತನ ಅದೃಷ್ಟ ಚೆನ್ನಾಗಿರಲಿಲ್ಲ. ಪರೀಕ್ಷೆ ಬರೆದು ವಂಚಿತರಾದವರಿಗೆ ಹೇಗೋ ಇವನು ಮಾಡಿದ ಘನಂದಾರಿ ಕೆಲಸ ಗೊತ್ತಾಗಿ ಸುಪ್ರೀಮ್ ಕೋರ್ಟ್ ಮೆಟ್ಟಿಲೇರಿದರು. ನಂತರ ನಡೆದ ಸಿಓಡಿ ತನಿಖೆಯಿಂದಾಗಿ ನೇಮಕಾತಿಯಲ್ಲಿನ ಅವ್ಯವಹಾರ ಬಯಲಾಗಿ ಇವರ ಕುಟುಂಬದವರ ಆಯ್ಕೆಯನ್ನು ಸರ್ಕಾರ ಅಸಿಂಧುಗೊಳಿಸಿತ್ತು. ಅಂದೇ ತನ್ನ ನೌಕರಿಯನ್ನು ಕಳೆದುಕೊಂಡು ಪರ್ಮನೆಂಟಾಗಿ ಸೆಂಟ್ರಲ್ ಜೈಲು ಸೇರಬೇಕಿದ್ದ ಈತ ಹೇಗೋ ಅವರಿವರ ಕಾಲು ಹಿಡಿದು ಬದುಕಿಬಿಟ್ಟ. ಅಂದೇನಾದರೂ ಈತ ನೌಕರಿ ಕಳೆದುಕೊಂಡಿದ್ದರೆ ಚಾಮರಾಜನಗರ ಇಂದು ಇವನ ದಗಲ್ಬಾಜಿ ದಂಧೆಗಳನ್ನು ನೋಡಬೇಕಾದ ದುರಂತ ಬರುತ್ತಿರಲಿಲ್ಲ.



ವಿಶ್ವನಾಥ ರೆಡ್ಡಿ

ಚಾಮರಾಜನಗರದ ಜನರ ದುರಾದೃಷ್ಟವೋ ಏನೋ ಮಂಡ್ಯದಿಂದ ವರ್ಗವಾದವನು ನೇರವಾಗಿ ಇಲ್ಲಿನ ಆಹಾರ ಇಲಾಖೆಯ ಉಪನಿರ್ದೇಶಕನಾಗಿ ವಕ್ಕರಿಸಿಕೊಂಡ. ಕಳೆದ ನಾಲ್ಕು ವರ್ಷಗಳಲ್ಲಿ ಈತ ಇಲಾಖೆಯಲ್ಲಿ ಮಾಡಬಾರದ ಭ್ರಷ್ಟಾಚಾರಗಳಿಲ್ಲ, ದೌರ್ಜನ್ಯಗಳಿಲ್ಲ. ಜಿಲ್ಲೆಯಾದ್ಯಂತ ಇರುವ ನ್ಯಾಯಬೆಲೆ ಅಂಗಡಿ ಮಾಲಿಕರಿಂದ ಹಾಗೂ ಸೀಮೆಎಣ್ಣೆ ಡೀಲರ್‌ಗಳಿಂದ ಪ್ರತಿ ಅಂಗಡಿಗೆ 200 ರೂಪಾಯಿಯಂತೆ ಫಿಕ್ಸ್ ಮಾಡಿ ದೋಚತೊಡಗಿದ. ಜಿಲ್ಲೆಯಾದ್ಯಂತ ಸುಮಾರು ಎರಡು ಸಾವಿರದಷ್ಟಿರುವ ಡೀಲರ್‌ಗಳು ಮತ್ತು ನ್ಯಾಯಬೆಲೆ ಅಂಗಡಿಗಳು ಪ್ರತಿತಿಂಗಳು ಇವನಿಗೆ ನೀಡುವ ಕಪ್ಪವೇ ಎರಡು ಲಕ್ಷ ದಾಟುತ್ತದೆ. ಬಂದ ಹಣದಲ್ಲಿ ಮೇಲಧಿಕಾರಿಗಳಿಗೆ, ರಾಜಕಾರಣಿಗಳಿಗೆ ಒಂದಿಷ್ಟು ತಿನ್ನಿಸಿ ಉಳಿದಿದ್ದನ್ನು ಜೇಬಿಗಿಳಿಸಿಬಿಡುತ್ತಾನೆ.

ಕಂದಾಯ ಇಲಾಖೆಯ ಮೇಲೂ ಕಣ್ಣು!

ಆಹಾರ ಸರಬರಾಜು ಇಲಾಖೆಯಲ್ಲಿ ಸಿಗುತ್ತಿರುವ ಮೇವು ಪ್ರಾಯಶಃ ಕಾ. ರಾಮೇಶ್ವರಪ್ಪನಿಗೆ ಸಾಕಾಗುತ್ತಿಲ್ಲ ಅಂತ ಕಾಣುತ್ತದೆ. ಅದಕ್ಕಾಗಿಯೇ ಈಗ ಕಂದಾಯ ಇಲಾಖೆಯ ಮೇಲೆ ಕಣ್ಣು ಹಾಕಿದ್ದಾನೆ. ಜಿಲ್ಲಾಧಿಕಾರಿ ವಿಶ್ವನಾಥ ರೆಡ್ಡಿಯನ್ನೇ ಕೋಲುಬಸವನಂತೆ ಆಡಿಸುತ್ತಿರುವ ಈತ ಇಡೀ ಕಂದಾಯ ಇಲಾಖೆಯ ಮೇಲೆ ಹಿಡಿತ ಸಾಧಿಸಲು ಪ್ರಯತ್ನಿಸುತ್ತಿದ್ದಾನೆ. ತನ್ನ ವಸೂಲಿಬಾಜಿಯ ಪುಡಿ ಹಿಂಡನ್ನು ಅಲ್ಲಿಯೂ ಬೆಳೆಸಿಕೊಳ್ಳಲು ಪ್ರಯತ್ನಿಸುತ್ತಿರುವ ಈತನ ವಿರುದ್ಧ ಮಾತನಾಡಿದ ಇಲಾಖೆಯ ಅಧಿಕಾರಿಗಳಿಗೆ ಕಿರುಕುಳ ಕೊಡುವುದನ್ನು ನಿತ್ಯ ಕರ್ಮವನ್ನಾಗಿಸಿಕೊಂಡಿದ್ದಾನೆ. ಅದಕ್ಕೆ ಅವರು ಬಗ್ಗದಿದ್ದರೆ ಮಹದೇವ ಪ್ರಸಾದ್‌ನ ಕಿವಿಯೂದಿ ಅವರನ್ನು ವರ್ಗಾವಣೆ ಮಾಡಿಸಿಬಿಡುತ್ತಾನೆ.



ರೈತರನ್ನುದ್ದೇಶಿಸಿ ಮಾತನಾಡುತ್ತಿರುವ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಕೌಶಿಕ್ ಮುಖರ್ಜಿ, ಜಿಲ್ಲಾಧಿಕಾರಿ ವಿಶ್ವನಾಥರೆಡ್ಡಿ ಮತ್ತು ಸಿಇಓ ಜಯರಾಂ ಹಾಜರಿದ್ದರು.

ಇವನ ಆಟ ಈತನಕ ಹೇಗೋ ನಡೆದುಕೊಂಡು ಬಂದಿತ್ತು. ಆದರೆ, ಮೊನ್ನೆ ಕೊಳ್ಳೇಗಾಲದ ತಹಶೀಲ್ದಾರ್ ವಿ. ನಾಗರಾಜ್ ಹತ್ತಿರ ಅದು ಠುಸ್ ಎಂದಿತು. ಎಲ್ಲರ ಮುಂದೆ ತನ್ನ ನಖರಾಗಳನ್ನು ಪ್ರದರ್ಶಿಸಿದಂತೆ ವಿ. ನಾಗರಾಜ್ ವಿರುದ್ಧವೂ ಈತ ಫಿಟ್ಟಿಂಗ್ ಇಟ್ಟು ಕಿರುಕುಳ ಕೊಡುತ್ತಿದ್ದ. ಇದನ್ನೆಲ್ಲ ಲೆಕ್ಕಿಸದ ನಾಗರಾಜ್ ತಮ್ಮ ರಾಜೀನಾಮೆಯನ್ನು ಜಿಲ್ಲಾಧಿಕಾರಿಗಳಿಗೆ ಬಿಸಾಕಿಬಿಟ್ಟರು. ಕೊನೆಗೆ ಇದೆಲ್ಲ ಎಲ್ಲಿ ದೊಡ್ಡ ರಾಮಾಯಣವಾಗಿಬಿಡುತ್ತೋ ಎಂಬ ಭಯದಿಂದ ಜಿಲ್ಲಾಧಿಕಾರಿಯವರೇ ಖುದ್ದಾಗಿ ನಾಗರಾಜ್ ಅವರಿಗೆ ಸೇವೆಯಲ್ಲಿ ಮುಂದುವರೆಯುವಂತೆ ಸೂಚಿಸಿದ್ದಾರೆ. ಹೀಗೆ ತಹಶೀಲ್ದಾರರ ರಾಜೀನಾಮೆಯಿಂದ ಹಾಲು ಕುಡಿದಿದ್ದ ರಾಮೇಶ್ವರಪ್ಪ ಈಗ ಇಂಗು ತಿಂದ ಮಂಗನಂತಾಗಿ ಮನೆ ಸೇರಿದ್ದಾನೆ.

ಬರಗೆಟ್ಟ ಜಿಲ್ಲೆಗೆ ಜಲಪಾತೋತ್ಸವ ಬೇಕಿತ್ತೆ?

ಚಾಮರಾಜನಗರ ಜಿಲ್ಲೆ ಬರಗಾಲದಿಂದ ತತ್ತರಿಸಿ ರೈತರು ಆಹಾರಕ್ಕಾಗಿ ಹಪಹಪಿಸುತ್ತಿರುವಾಗ ರಾಮೇಶ್ವರಪ್ಪ ಅದ್ದೂರಿಯಾಗಿ ಜಲಪಾತೋತ್ಸವ ಆಚರಿಸಿ ಲಕ್ಷಾಂತರ ರೂಪಾಯಿಗಳನ್ನು ಕೊಳ್ಳೆ ಹೊಡೆಯುತ್ತಾನೆಂದರೆ ಏನೆನ್ನಬೇಕು? ಜಿಲ್ಲೆಯ ಭರಚುಕ್ಕಿಯಲ್ಲಿ ಜಲಪಾತೋತ್ಸವ ನಡೆಯುವಂತೆ ಮಾಡಿ, ಅದರ ಖರ್ಚಿಗಾಗಿ ಸರ್ಕಾರದಿಂದ ಆರು ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿಸಿ, ಅದರ ಎಲ್ಲಾ ಉಸ್ತುವಾರಿಯನ್ನು ರಾಮೇಶ್ವರಪ್ಪನಿಗೆ ವಹಿಸಿಕೊಟ್ಟಿರುವ ಕೀರ್ತಿ ಮಹದೇವ ಪ್ರಸಾದ್ ಅವರಿಗೆ ಸಲ್ಲಬೇಕು.

ರೈತರು ತಮ್ಮ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಬೇಕೆಂದು ಜಿಲ್ಲಾಧಿಕಾರಿಗಳ ಕಚೇರಿ ಎದುರು ಧರಣಿ ಕುಳಿತಿದ್ದಾರೆ. ಅವರ ಕಷ್ಟನಷ್ಟಗಳನ್ನು ವಿಚಾರಿಸುವುದಕ್ಕೆ, ಮಹದೇವ ಪ್ರಸಾದರಾಗಲೀ, ರಾಮೇಶ್ವರಪ್ಪನಾಗಲೀ ಹತ್ತಿರ ಸುಳಿದಿಲ್ಲ. ಹೋಗಲಿ, ಜಲಪಾತೋತ್ಸವಕ್ಕಾಗಿ ಇಷ್ಟು ಹಣವನ್ನು ಅನಗತ್ಯವಾಗಿ ಪೋಲು ಮಾಡುವ ಬದಲು ಬರದಿಂದ ತತ್ತರಿಸಿದ ರೈತರಿಗೆ ಪರಿಹಾರವನ್ನಾಗಿ ಕೊಟ್ಟಿದ್ದರೆ ಒಂದಿಷ್ಟು ರೈತಕುಟುಂಬಗಳಾದರೂ ನೆಮ್ಮದಿಯಿಂದ ಇರುತ್ತಿದ್ದವು. ಆದರೆ, ಅಷ್ಟೊಂದು ಮಾನವೀಯತೆ ಮರೆದರೆ ಈ ಮಹಾನುಭಾವರಿಗೆ ಮೇಯಲು ಸಿಗಬೇಕಲ್ಲ?

ಒಟ್ಟಿನಲ್ಲಿ ಡಿಸಿ ವಿಶ್ವನಾಥರೆಡ್ಡಿ ಮತ್ತು ರಾಮೇಶ್ವರಪ್ಪ ಎಂಬ ಹೆಗ್ಗಣಗಳು ಜಿಲ್ಲೆಯಿಂದ ಶಾಶ್ವತವಾಗಿ ಖಾಲಿಯಾಗುವತನಕ ಚಾಮರಾಜನಗರದ ಜನತೆ ಉದ್ಧಾರವಾಗುವುದು ಕನಸಿನ ಮಾತು. ಸುಶ್ಲೇಷವಾಗಿ ಮೇಯಲು ಹುಲುಸಾದ ಹುಲ್ಲುಗಾವಲು ಸಿಕ್ಕಿರುವುದರಿಂದ ಅವರಂತೂ ಇಲ್ಲಿಂದ ತೊಲಗುವುದಿಲ್ಲ. ಜನರೇ ಚಪ್ಪಲಿ ಸೇವೆ ಮಾಡಿ ತೊಲಗಿಸಬೇಕಷ್ಟೆ.

– ಕೊಳ್ಳೇಗಾಲ ಚಿಕ್ಕಮಾಳಿಗೆ



ದುರಹಂಕಾರಿ ಗೋವಿಂದು

ವಿಜಯ್ ನಿಷೇಧಕ್ಕೆ ಸಂಬಂಧಿಸಿದಂತೆ TV9 ನಲ್ಲಿ ನಡೆದ ಚರ್ಚೆಯಲ್ಲಿ ಭಾಗವಹಿಸಿದ್ದ ಸಾ.ರಾ. ಗೋವಿಂದು ಬಳಸಿದ ಭಾಷೆ, ತೋರಿಸಿದ ಠೇಂಕಾರ ಎಲ್ಲರನ್ನೂ ಬೆಚ್ಚಿಬೀಳಿಸಿದೆ.

ಕನ್ನಡ ಚಿತ್ರರಂಗದಲ್ಲಿ ಇವತ್ತು ನಿರ್ಮಾಪಕನೇ ಮುಖ್ಯ. ಎಲ್ಲರೂ ಅವರ ತಾಳಕ್ಕೆ ತಕ್ಕಂತೆ ಕುಣಿಯಬೇಕು ಎಂದೆಲ್ಲಾ ಫರ್ಮಾನು ಹೊರಡಿಸಿದ ಗೋವಿಂದು ನಟ ವಿಜಯ್ ಬಗ್ಗೆ ಬಳಸಿದ ಭಾಷೆ ಹೇಗಿತ್ತು ಗೊತ್ತೆ?

"ಆ ಹುಡುಗ ವಿಜಯ್" ಎಂದು ಶುರು ಮಾಡಿ ಅವನು, ಇವನು ಎಂಬಲ್ಲಿಗೆ ಹೋಗಿ ತಲುಪಿತು. ಇಲ್ಲಿ ಜನ ಕೇಳಬೇಕಾದ ಪ್ರಶ್ನೆ ಏನೆಂದರೆ 'ಏನು ಈ ಸಾ.ರಾ. ಗೋವಿಂದು ಚಿತ್ರರಂಗದ ಪಾಳೇಗಾರಾನಾ?' ಅಂತ.

ಇನ್ನೊಬ್ಬ ನಟನ ಬಗ್ಗೆ ಮಾತಾಡೋವಾಗ ಸಭ್ಯತೆ, ಸೌಜನ್ಯವಿರದೆ ಅವನು ಇವನು ಅನ್ನಲು ಈ ಗೋವಿಂದು ಯಾರು?

ಈಗ ನಿರ್ಮಾಪಕರ ವತಿಯಿಂದ ಚೇಂಬರ್ ಉಪಾಧ್ಯಕ್ಷರಾಗಿರುವ ಸಾ.ರಾ. ಗೋವಿಂದರಿಗೇ ಸಭ್ಯತೆ, ಶಿಷ್ಟಾಚಾರ ಗೊತ್ತಿಲ್ಲ ಅಂದರೆ ಬೇರೆಯವರಿಂದ ಇದನ್ನು ನಿರೀಕ್ಷಿಸಲು ಸಾಧ್ಯವೆ?

ಸಾ.ರಾ. ಗೋವಿಂದು ತನ್ನದೇ ಸ್ವಂತ ಸಿನಿಮಾ ಅಂತ ತೆಗೆದು ವರ್ಷಗಳೇ ಆಗಿಹೋಗಿವೆ. ದುರ್ಬಲರ ಎದುರು ಗುಟುರು ಹಾಕುವುದು, ರೌಡಿ ಥರದವರು ಎದುರು ಬಂದರೆ ಹೆಗಲ ಮೇಲೆ ಕೈಹಾಕಿ ಓಡಾಡುವುದು ಗೋವಿಂದನ ಚಾಳಿ.

ವಿಜಯ್ ಹೀರೋ ಆಗಿ ಹೊಸಬನಿರಬಹುದು. ಆದರೆ ಆರೆಂಟು ವರ್ಷಗಳಿಂದ ಆತನೂ ಚಿತ್ರರಂಗದಲ್ಲಿದ್ದಾನೆ. ಬಹಳ ಮುಖ್ಯವಾಗಿ ಕುರುಬ ಸಮುದಾಯದಿಂದ ಬಂದಿರುವ ಮೊಟ್ಟಮೊದಲ ಪ್ರತಿಭಾವಂತ ಹೀರೋ ಈ ವಿಜಯ್.

ಇನ್ನು ಮುಂದೆ ಸಹ ಕಲಾವಿದರ ಬಗ್ಗೆ ಮಾತನಾಡುವಾಗ ಸಾ.ರಾ. ಗೋವಿಂದು ನಾಲಿಗೆ ಹತೋಟಿಯಲ್ಲಿಟ್ಟುಕೊಳ್ಳದೇ ಹೋದರೆ ತೊಂದರೆ ತಂದುಕೊಳ್ಳಬಹುದೆಂಬ ಕಾರಣಕ್ಕೆ ಈ ಮಾತು ಹೇಳಬೇಕಾಗಿದೆ.



ಗೋವಿಂದುಗೆ ನಿರ್ಮಾಪಕರ ಹಿತಾಸಕ್ತಿ ಎಷ್ಟೇ ಮುಖ್ಯವಾದರೂ ಕಲಾವಿದರು ಅವರ ಗುಲಾಮರಲ್ಲ ಎಂಬ ಸತ್ಯವೂ ಗೊತ್ತಾಗಬೇಕಲ್ಲವೆ.

ಇದು ಬರೀ ವಿಜಯ್ ವಿಚಾರಕ್ಕೆ ಹೇಳಬೇಕಾದ ವಿಷಯ ಅಲ್ಲ. ಇನ್ನೊಬ್ಬ ಹೊಸ ನಟ ಗಣೇಶ್ ಮೇಲೆ ಕೆಲ ತಿಂಗಳ ಹಿಂದೆ ಹಲ್ಲೆಯಾಯಿತು. ಗಣೇಶ್ ಏಳ್ಗೆ ಸಹಿಸದ ಜನ ಅದರಲ್ಲೂ ಹೆಡ್ ಆಫೀಸಿನ ಜನ ಇದಕ್ಕೆ ಕುಮ್ಮಕ್ಕು ಕೊಟ್ಟಿದ್ದರೆಂಬ ಪುಕಾರು ಹಬ್ಬಿತ್ತು, ದರ್ಶನ್ ಕೂಡ ಹೀರೋ ಆಗಿ ನೆಲೆಗೊಳ್ಳುವ ಮೊದಲು ಒಂದು ಪ್ಲೇಟ್ ಬಿರಿಯಾನಿ, ನಾಲ್ಕು ಚಪಾತಿಗೋಸ್ಕರ ಕೇಳಿಕೊಂಡು ತಿಂದ ಘಟನೆಗಳೂ ಆಗಿಹೋಗಿವೆ. ಅಂತಹ್ದೇ ಪಾಳೆಗಾರಿಕೆ, ಅಹಂಕಾರಿ ಮನೋಭಾವದ ನಿರ್ಮಾಪಕರು ಈಗ ವಿಜಯ್‌ನನ್ನು ಬಲಿ ಹಾಕಲು ಹಂಚಿದ್ದಾರೆ.

ವಿಜಯ್ ಅಂಥವರ ಹಿಕ್ಮತ್‌ಗಳಿಗೆ ಬಲಿಯಾಗುವಂಥ 'ಕುರಿ' ಅಲ್ಲ ಎಂಬುದು ಗೋವಿಂದುಗೆ ಗೊತ್ತಿರಲಿ.

ವಿಜಯ್‌ಗೆ ನಿಷೇಧ
ದೊಡ್ಡವರ ಸಣ್ಣತನ

ಸಿನಿಮಾಗಳ ವಿವಾದಗಳು ಇಂದು ನಿನ್ನೆಯದೇನಲ್ಲ. ಈ ಹಿಂದೆ ಇಂಥ ವಿವಾದಗಳು ಡಜನ್‌ಗಟ್ಟಲೆ ನಡೆದುಹೋಗಿವೆ. ಆದರೂ ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ ಎಂಬಂತೆ ಚಿತ್ರೋದ್ಯಮದ ದೊಡ್ಡ ದೊಡ್ಡ ತಲೆಗಳೆಲ್ಲ ವಿಜಯ್‌ಗೆ ನಿಷೇಧ ಹೇರುವ ಮೂಲಕ ಉದಯೋನ್ಮುಖ ಹುಡುಗನೊಬ್ಬನ ಭವಿಷ್ಯದಲ್ಲಿ ಆಟವಾಡುತ್ತಿರುವುದು ದೊಡ್ಡವರ ಸಣ್ಣತನದಂತೆ ಕಾಣುತ್ತಿದೆ.



ಬಿಳಿದಾಳೆ ಈಶ

ಜನಸಾಮಾನ್ಯರ ಹೀರೋ ವಿಜಯ್‌ನ ಕುತ್ತಿಗೆ ಹಿಸುಕುವ ಸಂಚೊಂದು ಈಗ ಫೇಲ್ ಆಗಿದೆ.

ಈ ವಿಜಯ್ ಹಿಂದುಮುಂದಿಲ್ಲದ ಹಳ್ಳಿ ಹುಡುಗ. ಫಿಲ್ಮ್ ಫೀಲ್ಡ್‌ನಲ್ಲಿ ಯಾರೂ ಗಾಡ್‌ಫಾದರ್‌ಗಳಿಲ್ಲ ಅಂತ ಅವರು ಯೋಚಿಸಿದ್ದರೂಂತ ಕಾಣುತ್ತೆ, ಹಾಗಾಗಿ ಅವನು ಬೆಳೀತಿರೊವಾಗಲೇ ಕೈಕಾಲು ಮುರಿದು ಮೂಲೆಗೆಸೆದು ಬಿಡಬೇಕು ಅಂತ ಸ್ಕೆಚ್ ಹಾಕಿಕೊಂಡಿದ್ದವರೇ ಈಗ ವಿಜಯ್‌ಗೆ ಸಿಕ್ಕ ಜನ ಬೆಂಬಲ ಗಮನಿಸಿ ರಾಜಿ ಕಬೂಲಿಗೆ ಹೊರಟಿದ್ದಾರೆ.



'ದುನಿಯಾ' ಖ್ಯಾತಿಯ ಅಪ್ರತಿಮ ನಟ ವಿಜಯ್‌ಗೆ ಒಂದು ವರ್ಷ ನಿಷೇಧ ಹೇರಿದ್ದ ಸಿನಿಮಾ ರಂಗದ ಹೈಪವರ್ ಕಮಿಟಿಯವರೇ ಈ ಜನ.



ಮೂರ್ಖತನ, ದಬ್ಬಾಳಿಕೆ, ಅಹಂಕಾರ, ಸರ್ವಾಧಿಕಾರ ಮನೋಭಾವಗಳಷ್ಟೇ ಕಾಣುವ ಈ ಹೈಪವರ್ ಕಮಿಟಿಯಿಂದ ಚಿತ್ರರಂಗಕ್ಕಾಗಿರುವ ಉಪಕಾರ ಅಷ್ಟರಲ್ಲೇ ಇದೆ.

ಇಷ್ಟಕ್ಕೂ ವಿಜಯ್‌ಗೆ ನಿಷೇಧ ಹೇರುವಂತಹ ದೊಡ್ಡ ಅನಾಹುತವೇನೂ ಘಟಿಸಿರಲಿಲ್ಲ. ಎಸ್. ನಾರಾಯಣ್‌ನ 'ಚಂಡ' ಹಾಗೂ ಆನಂದರ 'ಯುಗ' ಸಿನಿಮಾಗಳ ವಿವಾದದ ತರದ್ದು ಈ ಹಿಂದೆ ಡಜನ್‌ಗಟ್ಟಲೆ ನಡೆದುಹೋಗಿವೆ. ಇವೆರಡೂ ಸಿನಿಮಾದಲ್ಲಿ ವಿಜಯ್ ಹೀರೋ ಆಗಿರುವುದರಿಂದ ಸಹಜವಾಗೇ ರಿಲಿಸ್ ಡೇಟ್ಸ್ ಇತ್ಯಾದಿ ಯೋಚಿಸಿದ್ದಾನೆ.

'ಚಂಡ' ಡಬ್ಬಿಂಗ್ ಮಾಡಿಕೊಡುವಂತೆ ಈ ಹೈಪವರ್ ಕಮಿಟಿ ನೀಡಿದ್ದ ಆದೇಶವನ್ನು ವಿಜಯ್ ಪಾಲಿಸಲಿಲ್ಲ ಎಂಬುದಕ್ಕೆ ಈ ನಿಷೇಧದ ಶಿಕ್ಷೆ ನೀಡಲಾಗಿತ್ತು, ಆದರೆ ಇದೇ ಕಮಿಟಿಯು ವಿಜಯ್‌ನನ್ನು ಬಿಟ್ಟು ನಾರಾಯಣ್ ಬೇರೆ ಕಲಾವಿದರಿಂದ ಈಗಾಗಲೇ ಡಬ್ಬಿಂಗ್ ಮಾಡಿಸಿ ಬಿಟ್ಟಿದ್ದ ಅದೂ ತಪ್ಪೇ ತಾನೆ ಅಂತ ಯೋಚಿಸಲೇ ಇಲ್ಲ ಯಾಕೆ?

ನಾರಾಯಣ್ ಅಥವಾ ಆನಂದ್ ಇಬ್ಬರೂ ನಿರ್ಮಾಪಕರೆ. ಕೋಟಿಗಟ್ಟಲೆ ಬಂಡವಾಳ ಹಾಕಿರುತ್ತಾರೆ. ಅವರಿಗೂ ಲಾಭ-ನಷ್ಟದ ಲೆಕ್ಕಾಚಾರಗಳಿರುತ್ತವೆ. ಇದು ಸಹಜ.

ಆದರೆ ಇಂಥ ಪ್ರಸಂಗ ಬಂದಾಗ ವಿವೇಚನೆ ತಾಳ್ಮೆಯಿಂದ ಯೋಚಿಸಬೇಕಿದ್ದ ಈ ಗಣ್ಯರು ವಿಶಾದಿಕ ನಿಷೇಧ ವಿಧಿಸಲು ಹೊರಟಿದ್ದು ಚಿತ್ರರಂಗದ ಹಿತಾಸಕ್ತಿಯಿಂದಲ್ಲ, ಬದಲಾಗಿ ಹೊಸಬರನ್ನು ತುಳಿದು, ಬೆದರಿಸಲು ಎಂಬುದು ಈಗ ಎಲ್ಲರಿಗೂ ಗೊತ್ತಾಗಿದೆ. ನಟ ಶಿವರಾಂ, ಸಾ.ರಾ. ಗೋವಿಂದು, ರಾಜೇಂದ್ರಸಿಂಗ್ ಬಾಬು, ಜೊಸೈಮನ್, ನಟ ಸುಂದರ್‌ರಾಜ್ ಮುಂತಾದವರು ಈ ಹೈಪರ್ ಕಮಿಟಿಯಲ್ಲಿ ಇದ್ದಾರೆ.

ನಟನೊಬ್ಬನ ಅಳಿವು-ಉಳಿವು ನಿರ್ಧರಿಸುವ ಮಟ್ಟದ ಅಧಿಕಾರ ಇಂಥ ಕಮಿಟಿಯ ಕೈಗೆ ಕೊಡುವುದು ಒಳ್ಳೆಯದಲ್ಲ ಎಂಬುದಂತೂ ವಿಜಯ್ ಪ್ರಕರಣದಿಂದ ಸಾಬೀತಾಗಿದೆ.

ಸ್ವಾರ್ಥಿಗಳ ಕಮಿಟಿ

ತಲೆ ಕೆಡಿಸಿಕೊಳ್ಳಬೇಕೆಂದರೆ ಕನ್ನಡ ಚಿತ್ರರಂಗದಲ್ಲಿ ಬಗೆಹರಿಸಬೇಕಾದ ನೂರಾರು ಸಮಸ್ಯೆಗಳಿವೆ. ಖಡಕ್ಕಾಗಿ ಜಾರಿ ಮಾಡಬೇಕೆಂದರೆ ಸಿನಿಮಾ ತಯಾರಿಕೆ, ರಿಮೇಕ್, ರಿಲೀಸ್‌ಗೆ ಸಂಬಂಧಿಸಿದಂತೆ ಹತ್ತಾರು ಕಾನೂನುಗಳೂ ಇವೆ. ಆದರೆ ಚೇಂಬರ್ ಹಾಗೂ ಈ ಕಮಿಟಿಯವರಿಗೆ ಇವೆಲ್ಲಾ ನೆನಪಾಗುವುದು ದುರ್ಬಲರಿಂದ ಈ ನಿಯಮಗಳ ಉಲ್ಲಂಘನೆಯಾದಾಗ ಮಾತ್ರ.





ಒಂದು ಉದಾಹರಣೆ ಮೂಲಕ ಹೇಳಬೇಕೆಂದರೆ ಒಂದು ವಾರದಲ್ಲಿ ಕೇವಲ ಎರಡು ಕನ್ನಡ ಸಿನಿಮಾಗಳನ್ನು ಮಾತ್ರ ರಿಲೀಸ್ ಮಾಡಬೇಕು ಎಂಬ ನಿಯಮ ಇದೆ. ಕನ್ನಡ ಚಿತ್ರಗಳೇ ಪರಸ್ಪರ ಪೈಪೋಟಿ ಮಾಡಿಕೊಂಡು ನಷ್ಟ ಮಾಡಿಕೊಳ್ಳಬಾರದು ಹಾಗೂ ಥಿಯೇಟರ್ ಸಮಸ್ಯೆ ಎದುರಾಗಬಾರದೆಂಬ ಕಾರಣಕ್ಕೆ ಈ ನಿಯಮ ರೂಪಿಸಿಕೊಳ್ಳಲಾಗಿದೆ.

ಇದಕ್ಕೆ ಯಾವನಾದರೂ ಬೆಲೆ ಕೊಡುತ್ತಿದ್ದಾನಾ?

ಕಳೆದ ಸೆಪ್ಟೆಂಬರ್‌ನಲ್ಲಿ ಅನಾಥರು, ಮಿಲನ, ಗಂಡನ ಮನೆ, ನಿನ್ನದೆ ನೆನಪು ಎಂಬ ನಾಲ್ಕು ಸಿನಿಮಾಗಳು ಒಂದೇ ದಿನ ರಿಲೀಸಾಗಿದ್ದವು.

ಚೇಂಬರ್ ಹಾಗೂ ಈ ಕಮಿಟಿ ಜನ ಆಗ ಪವರ್‌ಲೆಸ್ ಆಗಿದ್ದರಾ?

ಅದಕ್ಕೂ ಮೊದಲು 2006 ರ ಡಿಸೆಂಬರ್‌ನಲ್ಲಿ ಕ
ಲಂಕೇಶರ ತನನಂ ತನನಂ, ಲೀಲಾವತಿಯವರ ಕನ್ನ
ಕಂದ, ಫುಟ್‌ಪಾತ್ ಹಾಗೂ ಜೈಜಗ್ಗನ ಮದನ ಒ
ವಾರ ರೀಲಿಸಾಗಿದ್ದವು.

ರೂಲ್ಸ್ ರೆಗ್ಯುಲೇಷನ್ ಅಂತ ಇವತ್ತು ಕೂಗಾಡುತ್ತಿ
ಜನ ಅವತ್ತು ಪ್ರಜ್ಞೆ ತಪ್ಪಿ ಬಿದ್ದಿದ್ದರಾ?

ಈ ಚೇಂಬರಿನ ಸಾ.ರಾ. ಗೋವಿಂದು, ಗಂಗರಾ
ಥರದ ಊಸರವಳ್ಳಿಗಳಿಗೆ ಯಾವಾಗ ಎದ್ದು ಕಿರುಚಿ
ಬೇಕು, ಇನ್ಯಾವಾಗ ನಿದ್ದೆ ತರಹ ನಟಿಸಬೇಕು ಅ
ಚೆನ್ನಾಗಿ ಗೊತ್ತಾಗಿದೆ. ಹಾಗಾಗಿ ವಿಜಯ್ ಥರದ
ಪ್ರಕರಣ ಬಂದಾಗ ತೋಳೇರಿಸಿಕೊಂಡು ನುಗ್ಗಿ ಬರುತ
ಕನ್ನಡ ಸಿನಿಮಾದ ಈ ಗಣ್ಯರಿಗೆ ಯಾರ ಮೇಲೆ ದ
ಎತ್ತಬೇಕು. ಮತ್ಯಾರಿಗೆ ಬೆಣ್ಣೆ ಹಚ್ಚಬೇಕು ಎಂಬುದ
ಕರಗತವಾಗಿಬಿಟ್ಟಿದೆ. ಜೊತೆಗೆ ಸಮಯ ಸಂದ
ನೋಡಿಕೊಂಡು ಹಣ ಕೀಳುವುದೂ ಒಂದು ವ್ಯ
ದಂಧೆಯೂ ಆಗಿಬಿಟ್ಟಿದೆ.

ಉದಾಹರಣೆಗೆ ಇದೇ ಎಸ್. ನಾ
ಯಣ್ ಮತ್ತು ಜಗ್ಗೇಶ್ ಜೊತೆಯ
ನಟಿಸಿದ್ದ 'ಹನಿಮೂನ್ ಎಕ್ಸ್‌ಪ್ರೆ
ಗಲಾಟೆ.

ಇದೊಂದು ಮರಾಠಿ ಸಿನಿಮ
ನಕಲು. ಆದರೆ ನಿರ್ಮಾಪಕ ಎಸ್
ಬಾಬು ಈ ವಿಚಾರ ಮುಚ್ಚಿಟ್ಟಿದ
ಕೊನೆಗೆ ಮೂಲ ಮರಾಠಿ ಸಿನಿ
ದವರು ಬಂದು ಚೇಂಬರ್‌ನಲ್ಲಿ ದೂ
ಕೊಟ್ಟಾಗ ಚೇಂಬರ್ ಮಾಡಿದ್ದೇನು

ಬಾಬು ಹತ್ತಿರ ಒಂದು
ರೂಪಾಯಿ ತಗೊಂಡು ತ
ಸಾರಿಸಿಬಿಟ್ಟರು. ಮಾನಮರ್ಯಾ
ಇರೋರು ಮಾಡೋ ಕೆಲಸನಾ ಇ

ಈ ಒಂದು ಲಕ್ಷಾನ ಲಂಚ ಅಂ
ಕೊಳ್ಳಬೇಕೊ? ಇಲ್ಲಾ ಹಫ್ತಾ ವಸೂ
ಎಂದು ಭಾವಿಸಬೇಕೊ ಹೇಳಿ?

ತಮಿಳಿನ ಪಿತಾಮಗನ್‌ನ ನೇರ ರಿಮೇಕ್ ಆಗಿ
ಅನಾಥರು ರಿಮೇಕ್ ಅಲ್ಲಾ ಅಂತ ಇದೇ ಚೇಂಬ
ಜನ ಒಪ್ಪಿಕೊಂಡಿದ್ದರಲ್ಲ. ನೀತಿನಿಯಮ ಅಂ
ಹೀಗಿರುತ್ತಾ?

ಇವತ್ತು ಚಿತ್ರರಂಗದ ಗಣ್ಯ ಅನಿಸಿಕೊಂಡಿರ
ಎಚ್.ಡಿ. ಗಂಗರಾಜು ರಜನಿಯ ಶಿವಾಜಿ ವಿತ
ಹಕ್ಕು ತಗೊಂಡಿದ್ದಾಗ ಎಷ್ಟು ಪ್ರಿಂಟ್ ಹಾಕಿಸಿದ
ಸರಿಯೋ ತಪ್ಪೋ ತಮಿಳು, ತೆಲುಗುನಂತಹ ಅನ್ಯ ಭ

ಸಿನಿಮಾಗಳು ಕರ್ನಾಟಕದಲ್ಲಿ ರಿಲೀಸ್ ಆಗುವಾಗ ಇಷ್ಟೇ ಪ್ರಿಂಟ್ ಇರಬೇಕೆಂಬ ನಿಯಮ ಒಂದಿದೆ.

ತಮಿಳು ಸಿನಿಮಾ ವಿತರಕರಾದ ಗಂಗರಾಜು, ಸಾ.ರಾ. ಗೋವಿಂದು, ಎಸ್. ನಾರಾಯಣ್ ಯಾವತ್ತಾದರೂ ಈ ನಿಯಮ ಪಾಲಿಸಿದ್ದಾರಾ?

ಇನ್ನೂ ಡಬ್ಬಿಂಗ್ ಸಿನಿಮಾ ಬಗ್ಗೆ ಕನ್ನಡದವರ ನಿಲುವು ಎಲ್ಲರಿಗೂ ಗೊತ್ತಿದೆ.

'ಭಾರತ 2000' ಎಂಬ ತೆಲುಗು ಸಿನಿಮಾನ ಕನ್ನಡಕ್ಕೂ ಡಬ್ ಮಾಡಿ ಎಲ್ಲರಿಂದಲೂ ಛೀಮಾರಿ ಹಾಕಿಸಿಕೊಂಡಿದ್ದ ರಾಜೇಂದ್ರ ಸಿಂಗ್ ಬಾಬುನೇ ಈಗ ಹೈಪರ್ ಕಮಿಟಿಯಲ್ಲಿದ್ದಾರೆ.

ಇಂಥ ಸ್ವಾರ್ಥಿಗಳೂ, ನೈತಿಕತೆ ಇರದ ಜನ ನಟ ವಿಜಯ್‌ಗೆ ಈಗ ನಿಷೇಧ ವಿಧಿಸಿದ್ದು ಎಷ್ಟು ಸರಿ?

ಪರಸ್ಪರ ಸೌಹಾರ್ದತೆ, ನಂಬಿಕೆ, ಹಿತಾಸಕ್ತಿಗಳ ರಕ್ಷಣೆಯ ಚೌಕಟ್ಟಿನಲ್ಲಿ ಕೆಲಸ ಮಾಡುವುದನ್ನು ಇನ್ನೂ ಕಲಿಯಬೇಕಾದ ಸಿನಿಮಾ ಜನ ಹೀಗೆ ಕೆಲವೇ ಸ್ವಾರ್ಥಿಗಳ ಹತೋಟಿಗೆ ಸಿಕ್ಕಿರುವುದು ಅತ್ಯಂತ ಅಪಾಯಕಾರಿ ಬೆಳವಣಿಗೆಯಾಗಿದೆ.

ಉಪಕಾರ ಮಾಡಬೇಕೆಂದರೆ

ನಿರ್ಮಾಪಕರು, ನಿರ್ದೇಶಕರು, ವಿತರಕರು ಹಾಗೂ ಕಲಾವಿದರೆಲ್ಲ ಸೇರಿದಂತೆ ಫಿಲ್ಮ್ ಚೇಂಬರ್‌ಗೆ ಏನಾದರೂ ಒಳ್ಳೆ ಕೆಲಸ ಮಾಡಬೇಕೆಂದಿದ್ದರೆ ನೂರಾರು ಸವಾಲುಗಳಿವೆ.

ಥಿಯೇಟರ್ ಸಮಸ್ಯೆ ಅದರಲ್ಲೊಂದು. ಈಗಿರುವ ಥಿಯೇಟರ್‌ಗಳೆಲ್ಲಾ ಒಂದೊಂದಾಗಿ ಕಣ್ಮರೆಯಾಗಿ ಶಾಪಿಂಗ್ ಮಾಲ್‌ಗಳಾಗುತ್ತಿವೆ... ಮತ್ತೊಂದೆಡೆ ತಯಾರಾಗುತ್ತಿರುವ ಕನ್ನಡ ಸಿನಿಮಾಗಳ ಸಂಖ್ಯೆಯೂ ಬೆಳೆಯುತ್ತಿದೆ. ಈ ಅಗತ್ಯಕ್ಕೆ ತಕ್ಕಂತೆ ಹೊಸ ಬಡಾವಣೆಗಳಲ್ಲಿ ಹೊಸ ಥಿಯೇಟರ್‌ಗಳ ನಿರ್ಮಾಣಕ್ಕೆ ಸರ್ಕಾರದೊಂದಿಗೆ ವ್ಯವಹರಿಸಬಹುದಲ್ವಾ?

ಇನ್ನು ತೆರಿಗೆ ವಿನಾಯಿತಿ, ಸಬ್ಸಿಡಿ, ಥಿಯೇಟರ್ ಮೇಂಟೆನೆನ್ಸ್, ತಂತ್ರಜ್ಞರನ್ನು ಬೆಳೆಸುವ ಬಗ್ಗೆ ಚೇಂಬರ್ ಯಾವತ್ತಾದರೂ ಯೋಚಿಸಿದೆಯಾ?

ಒಂದು ನಿಯಮ ಅಂತ ಏನಾದರೂ ಮಾಡಿದರೆ ಪ್ರತಿಯೊಬ್ಬರೂ ಅದಕ್ಕೆ ತಲೆಬಾಗಿ ನಡೆದ ಉದಾಹರಣೆ ಕನ್ನಡ ಚಿತ್ರರಂಗದಲ್ಲಿದೆಯಾ?

ವಿಜಯ್ ಹೊಸ ನಟ ಆಗಿರಬಹುದು. ಅಂದಮಾತ್ರಕ್ಕೆ ಆತ ಪಟ್ಟಭದ್ರರ ಅಡಿಯಾಳಿನಂತಿರಬೇಕಿಲ್ಲ.

ಚೇಂಬರ್ ಹಾಗೂ ಈ ಹೈಪರ್ ಕಮಿಟಿಯವರು ಈಗಲಾದರೂ ತಮ್ಮ ದುರಹಂಕಾರ, ಸ್ವಾರ್ಥಗಳನ್ನು ಬಿಟ್ಟು ನ್ಯಾಯೋಚಿತವಾಗಿ, ಪ್ರಬುದ್ಧರಂತೆ ವರ್ತಿಸಬೇಕಿದೆ.

ಕನ್ನಡ ಪ್ರೇಕ್ಷಕ ಇವತ್ತು ವಿಜಯ್ ಜೊತೆಗಿದ್ದಾರೆಯೇ ವಿನಃ ಪಾಳೆಗಾರಿಕೆ ನಡೆಸುವ ಹೈಪವರ್ ಕಮಿಟಿಯೊಂದಿಗಲ್ಲ.

ಸುಂದರರಾಜ್-ನಾರಾಯಣನ ತಿಮಿರು

ವಿಜಯ ನಟ ಅಲ್ಲ, ಸಾಹಸ ಕಲಾವಿದ ಅಷ್ಟೆ.

ಇದು ಹಲ್ಲುಬ್ಬ ಸುಂದರ ರಾಜ್ ವಿಜಯ್ ಬಗ್ಗೆ ಮಾಡಿರುವ ಕಾಮೆಂಟ್.

ಕಲಾವಿದರ ಸಂಘದ ಮುಖಂಡನಾಗಿ ಎಲ್ಲಾ ವಿವಾದಗಳಲ್ಲೂ ಮೂಗು ತೂರಿಸುವ ಸುಂದರ ರಾಜ್ ನಟಿಸಿದ್ದಕ್ಕಿಂತ ಈ ತರದ ಕಿತಾಪತಿ ಕೆಲಸಗಳಲ್ಲೇ ಜೀವನ ಸಾರ್ಥಕ ಮಾಡಿಕೊಳ್ಳುತ್ತಿದ್ದಾರೆ.

ವಿಜಯ್‌ಗೆ ನಿಷೇಧ ಹೇರಿದ ಕಮಿಟಿಯಲ್ಲೂ ಇದ್ದ ಈ ಅವಿವೇಕಿ ಸುಂದರರಾಜ್‌ಗೆ ಕಲಾವಿದರ ಹಿತರಕ್ಷಣೆ ಎಂದೂ ಆದ್ಯತೆಯ ವಿಷಯವಾಗಿಲ್ಲ. ಸ್ವತಃ ನಟನಾಗಿರುವ ಈತ ವಿಜಯ್‌ನಂಥ ಪ್ರತಿಭಾವಂತನ ಬಗ್ಗೆ ಹೀಗೆ ಮಾತಾಡಿರುವುದು ಸಣ್ಣತನವಷ್ಟೇ.

ಎಸ್. ನಾರಾಯಣನೂ ಇದಕ್ಕೆ ಹೊರತಲ್ಲ. ಶನಿವಾರ TV 9ರ ಚರ್ಚೆಯಲ್ಲಿ ಮಾತಾಡುತ್ತಾ ಈ ನಾರಾಯಣ "ನಾನು ವಿಷ್ಣುವರ್ಧನ್‌ರಂಥ ದೊಡ್ಡ ಮಟ್ಟದ ಕಲಾವಿದರೊಂದಿಗೆ ಕೆಲಸ ಮಾಡಿದವನು. ಈಗ ವಿಜಯ್ ಥರದ ಕೆಳಮಟ್ಟದವರೊಂದಿಗೆ ಕೆಲಸ ಮಾಡಿದೆನಲ್ಲಾ ಅಂತ ನೋವಾಗಿದೆ" ಅಂದಿದ್ದಾನೆ.

ಈ ಕೆಳಮಟ್ಟ ಅಂದರೇನು?

ಕೆಳಜಾತಿ ಅಂತಲಾ? ಕೆಳ ವರ್ಗ ಅನ್ನೋ ಅರ್ಥನಾ?

ನಾರಾಯಣ್‌ನನ್ನು ಹಿಡಿದು ಸಿಲ್ಲಿ ಯಾರಾದರೂ ಈ ಪ್ರಶ್ನೆ ಕೇಳಿದರೆ ಒಳಿತು. ಬೇರೆ ಭಾಷೆ ಸಿನಿಮಾಗಳನ್ನು ಕದ್ದು ಕನ್ನಡ ಸಿನಿಮಾ ತಯಾರಿಸುವ ನಾರಾಯಣ್ [illegible] ಎಂದು ಕರೆದುಕೊಳ್ಳುತ್ತಾನೆ. ಸ್ವಂತ ಬುದ್ಧಿ, ಪರಿಶ್ರಮ ಎರಡೂ ಇರದ ಈ [illegible] ಕೆಳಮಟ್ಟದ ಬಗ್ಗೆ ಮಾತಾಡುತ್ತಿರುವುದರಿಂದ ಇವರ ತಿಮಿರು ಎಷ್ಟಿರಬೇಕು [illegible].

ನಿರಾಶ್ರಿತ ಯಡ್ಡಿ



ಗ್ರಾಮ ವಾಸ್ತವ್ಯ ಫುಟ್‌ಪಾತ್ ವಾಸ್ತವ್ಯ

ಮೊನ್ನೆ ಶನಿವಾರ ರಾತ್ರಿ ಎಂಜಿ ರಸ್ತೆಯ ಫುಟ್‌ಪಾತ್ ಮೇಲೆ ಕುಂತು ಚಿತ್ರಾನ್ನ ತಿನ್ನುತ್ತಿದ್ದ ಯಡ್ಡಿಯನ್ನು ನೋಡಿ ಅದೆಷ್ಟು ಜನ ಗೇಲಿ ಮಾಡಿಕೊಂಡು ನಕ್ಕರೋ ಏನೊ? ಕುಮಾರಸ್ವಾಮಿಯೇನೋ ಗ್ರಾಮವಾಸ್ತವ್ಯ ಮಾಡುತ್ತಾ ಒಂದಿಷ್ಟು ಪಾಪುಲಾರಿಟಿ ಗಳಿಸಿದ್ದರು. ಆದರೆ ಯಡ್ಡಿಯ ಈ ಫುಟ್‌ಪಾತ್ ವಾಸ್ತವ್ಯ ಯಾವ ಪುರುಷಾರ್ಥಕ್ಕೆ?


ಬಿಜೆಪಿಗಳು ಜನಾಂದೋಲನ ಅನ್ನುತ್ತಿದ್ದಾರಾದರೂ ಜನಸಾಮಾನ್ಯರೇನೂ ಅದರಲ್ಲಿ ಭಾಗವಹಿಸುತ್ತಿಲ್ಲ. ಗಾಂಧಿ ಪ್ರತಿಮೆ ಹತ್ತಿರ ಧರಣಿ ಕುಳಿತಾಗಲೂ ಜನ ಇರಲಿ, ಕನಿಷ್ಠ 50 ಬಿಜೆಪಿ ಶಾಸಕರೇ ಅಲ್ಲಿ ಕಾಣಿಸಿಕೊಳ್ಳಲಿಲ್ಲ. ಇನ್ನು ಜೆಡಿಎಸ್‌ನವರಂತೂ ಅತ್ತ ಸುಳಿಯಲೂ ಇಲ್ಲ.

ಬಿಜೆಪಿ ಹಾಗೂ ಯಡ್ಡಿಗೆ ಒಂದು ಸೂಕ್ಷ್ಮ ವಿಚಾರ ಗೊತ್ತಾಗಬೇಕಿದೆ.

ಹೊಸ ಸರ್ಕಾರ ರಚನೆಯ ಸಾಧ್ಯತೆ ಈಡೇರಬೇಕೆಂದರೆ ಅದಕ್ಕೆ ಕಾಂಗ್ರೆಸ್‌ನ ಅಡ್ಡಗಾಲು, ರಾಜ್ಯಪಾಲರ ಪಕ್ಷಪಾತ ಎಂದು ಚೀರಿಕೊಂಡರೆ ಜನ ನಂಬುವುದಿಲ್ಲ. ಆದರ ಬದಲು ದೇವೇಗೌಡ ಅಗತ್ಯ ರೀತಿಯಲ್ಲಿ ಪ್ರತಿಕ್ರಿಯಿಸಿದರೆ ಮಾತ್ರ ಅದು ಸಾಧ್ಯ.

ಇಲ್ಲದಿದ್ದರೆ ಯಡ್ಡಿಗೆ ಫುಟ್‌ಪಾತೇ ಖಾಯಂ ಅಷ್ಟೇ.

ಏನೇ ಹೆಸರು ಬದಲಾಯಿಸಿಕೊಂಡರೂನು, ಜ್ಯೋತಿಷಿಗಳು ಹೇಳಿದಂತೆ ನಾಳೆ ಹೊಸ ಮದುವೆಯಾದರೂ ಯಡಿಯೂರಪ್ಪ ಕರ್ನಾಟಕದ ಮುಖ್ಯಮಂತ್ರಿಯಾಗುವ ಸಾಧ್ಯತೆ ಇನ್ನಷ್ಟು ವಿಳಂಬವಾಗುವಂತೆ ಕಾಣುತ್ತಿದೆ. ಪರಿಸ್ಥಿತಿ ಸ್ವಲ್ಪ ಹೆಚ್ಚು ಕಡಿಮೆಯಾದರೂ ಆ ಸಾಧ್ಯತೆ ಹಾಗೇ ಕ್ಷೀಣಿಸಿ ಹೋದರೂ ಆಶ್ಚರ್ಯವಿಲ್ಲ.



ಕಳೆದ ವಾರದ ದಿಢೀರ್ ರಾಜಕೀಯ ಬೆಳವಣಿಗೆಗಳಿಗೆ ಹೋಲಿಸಿ ನೋಡಿದರೆ ಜೆಡಿಎಸ್-ಬಿಜೆಪಿಗಳ ಹೊಸ ಸರ್ಕಾರದ ಸಾಧ್ಯತೆ ಇನ್ನಷ್ಟು ಸಂಕೀರ್ಣವಾಗಿದೆ. 129 ಶಾಸಕರ ಬೆಂಬಲವಿದ್ದಾಗಲೂ ಯಡ್ಡಿ ಮೊದಲಿಗಿಂತ ಹೆಚ್ಚು ನಿರಾಶ್ರಿತನಂತೆ ಕಾಣುತ್ತಿದ್ದಾರೆ.

ಇದರಲ್ಲಿ ಕಾಂಗ್ರೆಸ್ ಹಿತೂರಿಗಿಂತ ದೇವೇಗೌಡರ ಲೆಕ್ಕಾಚಾರಗಳೇ ದಾಳಾಗಿ ಕಾಣುತ್ತಿವೆ. ಸಂವಿಧಾನಾತ್ಮಕ, ಪ್ರಜಾಸತ್ತಾತ್ಮಕವಾದ ಆಶಯಗಳಿಗಿಂತ ತಾಂತ್ರಿಕ ಸಮಸ್ಯೆಗಳೇ ಯಡ್ಡಿಗೆ ಅಡ್ಡಿಪಡಿಸುತ್ತಿವೆ. ಬಿಜೆಪಿಗಳು ಗಾಂಧಿ ಪ್ರತಿಮೆ ಎದುರು ಧರಣಿ ಮಾಡಲಿ ಅಥವಾ ರಾಜಭವನದ ಎದುರು ನಿಂತು ಬಾಯಿ ಬಡಿದುಕೊಳ್ಳಲಿ ಈ ತಾಂತ್ರಿಕ ಸಮಸ್ಯೆಗಳನ್ನು ಬಿಡಿಸಿಕೊಳ್ಳದೆ ಹೋದರೆ ಯಡ್ಡಿಗೆ ಸಿಎಂಗಿರಿ ತಿರುಕನ ಕನಸೇ!

ಜೆಡಿಎಸ್ ರಾಜ್ಯಾಧ್ಯಕ್ಷ ಯಾರು?

ಬಿಜೆಪಿಗೆ ಬೆಂಬಲ ನೀಡುವುದಾಗಿ ಜೆಡಿಎಸ್ ಶಾಸಕಾಂಗ ಪಕ್ಷ ನಿರ್ಣಯಿಸಿದೆ ಎಂದು ನಾಯಕ ಕುಮಾರಸ್ವಾಮಿಯೇನೊ ರಾಜ್ಯಪಾಲರಿಗೆ ಪತ್ರ ನೀಡಿದ್ದಾರೆ. ಆದರೆ ಈ ಸಭೆ ಅಸಿಂಧು, ನಿಯಮಾನುಸಾರ ನಡೆದಿಲ್ಲವೆಂದು ಪ್ರಕಾಶ್ ಸೇರಿದಂತೆ ಕೆಲ ಜೆಡಿಎಸ್ ಶಾಸಕರೇ ರಾಜ್ಯಪಾಲರಿಗೆ ಪತ್ರ ನೀಡಿದ್ದಾರೆ.



ಯಾವ ಕಾರಣಕ್ಕೂ ಈ ಪತ್ರವನ್ನು ರಾಜ್ಯಪಾಲರು ನಿರ್ಲಕ್ಷಿಸಲಾಗುವುದಿಲ್ಲ.

ಇದರೊಂದಿಗೆ ಮೆರಾಜುದ್ದೀನ್ ಪಟೇಲ್ ಪತ್ರದ ವಿಚಾರವೂ ಇದೆ. ಜೆಡಿಎಸ್ ಒಂದು ರಾಷ್ಟ್ರೀಯ ಪಕ್ಷವೆಂದು ಹೇಳಿಕೊಂಡರೂ ಚುನಾವಣಾ ಆಯೋಗ ಅದನ್ನು ಪ್ರಾದೇಶಿಕ ಪಕ್ಷವೆಂದೇ ಪರಿಗಣಿಸಿದೆ. ಆ ಪ್ರಕಾರ ಮೆರಾಜುದ್ದೀನ್ ನಾಮಕಾವಸ್ಥೆ ರಾಜ್ಯಾಧ್ಯಕ್ಷ. ದೇವೇಗೌಡರೇ ಅಸಲಿ ರಾಜ್ಯಾಧ್ಯಕ್ಷ. ಹಾಗಾಗಿ ಬಿಜೆಪಿ ಸರ್ಕಾರಕ್ಕೆ ಬೆಂಬಲಿಸುವ ಮೆರಾಜುದ್ದೀನ್ ಪತ್ರಕ್ಕೆ ಕಿಲುಬು ಕಾಸಿನ ಬೆಲೆಯೂ ಇಲ್ಲ. ಬದಲಾಗಿ ಗೌಡರೇ ಬೆಂಬಲ ಪತ್ರ ಕೊಡಬೇಕಾಗುತ್ತದೆ. ಅದಿನ್ನೂ ರಾಜ್ಯಪಾಲರ ಕೈಗೆ ತಲುಪಿಲ್ಲ.

ಸ್ಪೀಕರ್ ಕೃಷ್ಣರವರ ಮುಂದಿರುವ 39 ಶಾಸಕರ ಅನರ್ಹತೆ ಅರ್ಜಿ ವಿಚಾರಣೆ ನವೆಂಬರ್ 17 ರಂದು ನಡೆಯಲಿದೆ. ಅದು ಅಂತಿಮಗೊಳ್ಳದೆ ರಾಜ್ಯಪಾಲರು ಯಾವುದೇ ಖಚಿತ ನಿರ್ಧಾರ ಅಥವಾ ಶಿಫಾರಸ್ಸು ಮಾಡಲು ಅಸಾಧ್ಯ. ನಾಳೆ ಸ್ಪೀಕರ್ ತೀರ್ಪಿನಲ್ಲಿ ಕುಮಾರಸ್ವಾಮಿ ಬಣದಲ್ಲಿದ್ದ, ಈಗ ಬಿಜೆಪಿ ಜೊತೆ ಸೇರಿ ಸರ್ಕಾರ ರಚಿಸಿದ್ದ 39 ಶಾಸಕರು ಅನರ್ಹವೆಂದಾಗಿ ಬಿಟ್ಟರೆ ಯಡ್ಡಿಯ ಹೊಸ ಸರ್ಕಾರಕ್ಕೆ ಅಗತ್ಯ ಸಂಖ್ಯೆಯ ಶಾಸಕರೇ ಸಿಗುವುದಿಲ್ಲ.

ಈ ರೀತಿಯ ವಿಚಿತ್ರ ಸಂಕೀರ್ಣ ಪರಿಸ್ಥಿತಿ ಇರುವಾಗ ರಾಜ್ಯಪಾಲ ಠಾಕೂರ್ ಅದನ್ನು ಬಳಸಿಕೊಳ್ಳದೇ ಇರುತ್ತಾರಾ? ಹೇಳಿಕೇಳಿ ಈತ ಕಾಂಗ್ರೆಸ್ ಮನುಷ್ಯ ಬೇರೆ.

ಸುಪ್ರೀಂಕೋರ್ಟ್ ಅಥವಾ ಸಂಸತ್‌ಗೆ

ಮಂಗಳವಾರ ನಡೆಯಲಿರುವ ಕೇಂದ್ರ ರಾಜಕೀಯ ವ್ಯವಹಾರಗಳ ಸಂಪುಟ ಸಭೆಯಲ್ಲಿ ಕರ್ನಾಟಕದ ವಿಚಾರ ಚರ್ಚೆಯಾಗುವ ಸಾಧ್ಯತೆಯಂತೂ ಇದೆ. ತಾನಾಗೇ ಒದಗಿಬಂದಿರುವ ಈ ಗೋಜಲು ಪರಿಸ್ಥಿತಿಯನ್ನು ಕಾಂಗ್ರೆಸ್ ಬಳಸಿಕೊಳ್ಳದೆ ಬಿಡುವುದಿಲ್ಲ. ಹಾಗಾಗಿ ಈ ವಿಚಾರವನ್ನು ಯುಪಿಎ ಸರ್ಕಾರ ಸುಪ್ರೀಂಕೋರ್ಟಿಗೆ ಸಾಗಹಾಕಬಹುದು. ಇಲ್ಲಾ ಇದೇ ನವೆಂಬರ್ 16 ರಿಂದ ಶುರುವಾಗಲಿರುವ ಸಂಸತ್ ಅಧಿವೇಶನಕ್ಕೂ ತರಬಹುದು.

ಅಲ್ಲಿನ ಫಲಿತಾಂಶ ಏನೇ ಬರಲಿ, ಇನ್ನು ಕನಿಷ್ಠ 15 ದಿನವಾದರೂ ಯಡ್ಡಿಗೆ ವಿಧಾನಸೌಧದತ್ತ ತಿರುಗಿನೋಡುವ ಪ್ರಮೇಯ ಬರುವ ಸಾಧ್ಯತೆ ಕಡಿಮೆ ಇದೆ.

ಸಿಎಂಗಿರಿಯ ದುರಾಶೆಗೆ ಬಿದ್ದು ಒಂದು ಸಾರಿ ತುಮಕೂರಿನಿಂದ ಓಡಿಬಂದ ಯಡ್ಡಿ ಆಮೇಲೂ ಪಾಠ ಕಲಿಯಲಿಲ್ಲ. ಪದೇಪದೇ ಗೌಡ-ಕುಮಾರಸ್ವಾಮಿಯಿಂದ fool ಆಗುತ್ತಿರುವ ಯಡ್ಡಿ ಈ ರೀತಿ ಅಂಗಲಾಚಿ ಮುಖ್ಯಮಂತ್ರಿಯಾಗಲಾರೆ ಎಂದು ಗಟ್ಟಿ ತೀರ್ಮಾನ ಮಾಡಿಕೊಂಡಿದ್ದರೆ ಕನಿಷ್ಠ ಮುಂದಿನ ಎಲೆಕ್ಷನ್‌ನಲ್ಲಾದರೂ ಸಿಎಂ ಆಗುವ ಒಂದು ಅವಕಾಶವಿತ್ತೇನೊ!

ಆದರೆ [illegible]

ಹರ್ಷದ ಕೋಳಿನ ಅಡಿಗೆ ಬಿದ್ದು ವರ್ಷದ ಕೋಳಿ ಕಳೆದುಕೊಂಡಂತೆ ಯಡ್ಡಿಗೆ [illegible] ಬದಲಾಗುತ್ತಿಲ್ಲ.

ಒಟ್ಟಾರೆ ಪರಿಸ್ಥಿತಿ ಯಡ್ಡಿಗೆ [illegible] ಇಲ್ಲ.

ವೀರಭದ್ರನ ಬಾಬಾದಿತನವೂ, ಮರುಳಾದ ರಾಜಕಾರಣಿಗಳೂ

ಅಂಕಲಗಿ ಮಠದ ವೀರಭದ್ರಯ್ಯ ಹೇಳಿಕೇಳಿ ಜಂಗಮ. ಬಾಬಾದಿತನವಂತೂ ಹುಟ್ಟಿನಿಂದಲೇ ಬಂದಿದೆ. ತನ್ನ ಚಾಲಾಕಿ ನಡೆಗಳಿಂದ, ಗಮ್ಮವಾದ ಮಾತುಗಾರಿಕೆ, ವಿಚಿತ್ರವಾದ ನಗೆಯ ನಟನೆಯ ಮೂಲಕ ಜನತೆಯನ್ನು ಅಕ್ಷರಶಃ ಬುದ್ದೂ ಮಾಡಿದ್ದಾನೆ. ಈತನ ಬುಟ್ಟಿಗೆ ಜಿಲ್ಲೆಯ ರಾಜಕಾರಣಿಗಳಾದ ಬಸವರಾಜ ಪಾಟೀಲ ಅನ್ವರಿ, ಅಮರೇಗೌಡ ಬಯ್ಯಾಪುರ, ಅಮರೇಶ ನಾಯಕ, ವೆಂಕಟೇಶ ನಾಯಕ, ಸಿಂಧನೂರಿನ ಬಾದರ್ಲಿ ಹಂಪನಗೌಡ, ಹುನಗುಂದದ ದೊಡ್ಡನಗೌಡ ಎಂ.ಎಲ್.ಎ. ಮೊದಲಾದವರು ಸಿಕ್ಕಿಬಿದ್ದಿದ್ದಾರೆ. ಕನಗಿರಿಯ ಶಾಸಕ


ಬಯ್ಯಾಪುರ

ಮಾಜಿ ಮಂತ್ರಿ ಮಲ್ಲಿಕಾರ್ಜುನ ನಾಗಪ್ಪನಂತೂ ಮಂತ್ರಿಗಿರಿಯ ಪಟ್ಟ ದಕ್ಕುತ್ತಲೇ ಸ್ವಾಮಿಗೆ ಕಾಂಟೇಸ್ಸಾ ಕಾರನ್ನೇ ಉಡುಗೊರೆಯಾಗಿ ನೀಡಿದ್ದಾನೆ. ಇನ್ನೊಬ್ಬ ಪುಣ್ಯಾತ್ಮ ಭಕ್ತ ನೀಡಿದ ಸ್ಕಾರ್ಪಿಯೋ ಗಾಡಿಯಲ್ಲಿ ಕುಂತು ವೀರಭದ್ರ ಝುಮ್ ಅಂತ ಸವಾರಿ ಹೊರಡುತ್ತಾನೆ. "ಯಾರದೋ ರೊಕ್ಕ ಎಲ್ಲಮ್ಮನ ಜಾತ್ರೆ" ಎಂದು ತಿಳಿದುಕೊಂಡ ಈ ಮೂರ್ಖಶಿಖಾಮಣಿ ಮನಬಂದಂತೆ ಖರ್ಚು ಮಾಡುತ್ತಾನೆ.


ಈ ವೀರಭದ್ರಯ್ಯನ 'ಬುಕಾಟಿ' ಮಾತುಗಳಿಗೆ ಜನ ಮರುಳಾಗಿ ಈಗಾಗಲೇ ಡಂಕನಕಲ್, ಗೋನಾಳ, ಅಂಬಾಮಠ, ಹುಲಿಗುಡ್ಡ (ಯಲಬುರ್ಗ), ಸಿದ್ದಾಪುರ, ಚಿಕ್ಕಮನ್ನಾಪುರ, ದಿನ್ನಿ, ಕೈತನಾಳ (ಗೋಕಾಕ), ಚಿಕ್ಕೊಪ್ಪ (ಬೆಳಗಾವಿ ಜಿಲ್ಲೆಯ ರಾಮದುರ್ಗ), ಮುಂತಾದ 65 ಕಡೆಗೆ 'ಬ್ಲೇಡ್ ಬ್ರ್ಯಾಂಚ್'ಗಳನ್ನು ತೆರೆದಿದ್ದಾನೆ. ಕೆಲವೇ ಕೆಲವು ವರ್ಷಗಳಲ್ಲಿ 'ಬೋಂಗು ವ್ಯಾಪಾರ'ದಿಂದಾಗಿ 200 ಎಕರೆಗಿಂತಲೂ ಹೆಚ್ಚು ಜಮೀನನ್ನು ಸ್ವಲ್ಪವೂ ತ್ರಾಸವಿಲ್ಲದೆ ಗಳಿಸಿದ್ದಾನೆ. ಆಯಾ ಊರುಗಳಲ್ಲಿಯ ಹೊಲಗಳ ದೇಕರೇಕಿಯನ್ನು ಆಯಾ ಗ್ರಾಮಸ್ಥರೇ ಮಾಡಿ ರಾಶಿಯನ್ನು ತಂದು ಮಠಕ್ಕೆ ಅರ್ಪಿಸಿ ಹೋಗುತ್ತಾರೆ.

ಅಂಕಲಗಿ ಮಠದಲ್ಲಿ ದಾಂಢಿಗ ಜನಗಳನ್ನು ಸಾಕಿಕೊಂಡು ಗೂಂಡಾಗಿರಿಯನ್ನು ಹಿಂಬಾಗಿಲ ಮೂಲಕ ನಡೆಸುವ ವೀರಭದ್ರಯ್ಯನ ಖಯಾಲಿಗಳು ಹಲವಾರು. ಮೈಮೇಲೆ ದೆವ್ವ ಬಂದಂತೆ ಈತ ಜೀಪು, ಕಾರುಗಳನ್ನು ಓಡಿಸುವ ಪರಿ ನೋಡಿದರೆ ಯಾರಿಗಾದರೂ ಬೆವರು ಬಸಿಯುತ್ತದೆ. ಧಾರ್ಮಿಕ ಸ್ವಾಮಿಯೊಬ್ಬನಲ್ಲಿರಬಹುದಾದ ವಿದ್ವತ್ತು, ಸಚ್ಚಾರಿತ್ಯ ಜ್ಞಾನ ಯಾವುದೂ ಇಲ್ಲದ ಈತ ಹುಟ್ಟಾ ಮುಗ್ಗಲಾಸಗೇಡಿ. ಸದಾ ತೀರ್ಥ ಸೇವನೆಯನ್ನು


ಅನ್ವರಿ

ಯಥೇಚ್ಛವಾಗಿ ಮಾಡುವ ವೀರಭದ್ರನ ಕಚ್ಚೆ ಕಚಿಪಿಚಿಯಾಗಿ ಹೋಗಿರುವುದು ಎಲ್ಲರಿಗೂ ಗೊತ್ತಿರುವ ವಿಷಯ.

ಕೊಪ್ಪಳ ಜಿಲ್ಲೆ ಯಲಬುರ್ಗ ತಾಲೂಕಿನ ಮುರುಡಿ ಗ್ರಾಮದ ದೊಡ್ಡನಗೌಡ ಎಂಬ ಬುರುಡಿ ಆಸಾಮಿಯನ್ನು ಮಠದ ಕಾರ್ಯದರ್ಶಿಯನ್ನಾಗಿ ಮಾಡಿಕೊಂಡಿರುವ ಈ ಢೋಂಗಿ ಸ್ವಾಮಿ, ಅವನ ಮೂಲಕ ತಾನು ಮಾಡದೆ ಇದ್ದ ಪವಾಡ (ಬುರುಡೆ ಪುರಾಣ)ಗಳನ್ನು ಮಾಡಿದ್ದಾಗಿ ಗಳಪಿಸುತ್ತಾನೆ. ಚಿದಾನಂದ ಅವಧೂತರು ಬರೆದಿರುವ 'ದೇವಿ ಮಹಾತ್ಮೆ' ಎಂಬ ಪುರಾಣ ಪಾರಾಯಣ ಮಾಡುತ್ತ ತೀರ್ಥ (ಬೀರ್, ಬ್ರ್ಯಾಂದಿ, ರಮ್, ವಿಸ್ಕಿ) ಸೇವಿಸುವ ವೀರಭದ್ರ ಕುಡಿದ ಅಮಲಿನಲ್ಲಿ ತೇಲಿ ಬಿಟ್ಟ ಮಾತುಗಳನ್ನೇ ಪವಾಡವೆಂದು ತಿಳಿದು ದೌಡಾಯಿಸಿ ಬರುವ ಜನಗಳಿಗೆ ಬಯ್ಯಬೇಕೋ? ಮೋಸದಿಂದ ಸಮಾಜದಲ್ಲಿ ಮೂಢನಂಬಿಕೆಗಳನ್ನು ಬೆಳೆಸುತ್ತಿರುವ ಈ ಢೋಂಗಿ ಸ್ವಾಮಿಗೆ ಕೈಕೋಳ ಹಾಕಿ ಪಾಠ ಕಲಿಸಬೇಕೋ?



ರಾಯಚೂರು: ಅಂಕಲಗಿ ಮಠದಲ್ಲೊಬ್ಬ ಮಟ್ಕಾ ಸ್ವಾಮಿ


■ ವರದಿಗಾರ

ಕಲಬುರ್ಗಿ ಜಿಲ್ಲೆಯ ಲಫಂಗ ಸ್ವಾಮಿಗಳ ಚರಿತ್ರೆ ಇತ್ತೀಚೆಗೆ 'ಗೌರಿ ಲಂಕೇಶ್' ವಾರ ಪತ್ರಿಕೆಯಲ್ಲಿ ಬಯಲಾಗುತ್ತಲೇ "ರಾಯಚೂರು ಜಿಲ್ಲೆಯ ಇಂಥವೇ ಬನಾತಿ ಸ್ವಾಮಿಗಳ ಬಗ್ಗೆ ನೀವು ಯಾಕೆ ಬರೆಯುತ್ತಿಲ್ಲ?" ಎಂದು ಪತ್ರಿಕೆಯ ಜಾಗೃತ ಓದುಗರು ಕೇಳಲಾರಂಭಿಸಿದರು. ಆದರೆ ಅದಕ್ಕೆ ಸಮಯ ಕೂಡಿ ಬಂದಿರಲಿಲ್ಲ, ಕೊನೆಗೂ ಅದೊಂದು ಅಮಾವಾಸ್ಯೆಯ ರಾತ್ರಿಯೆ ಲಿಂಗಸೂಗೂರು ತಾಲೂಕಿನ ಮುದಗಲ್‌ದಿಂದ 12 ಕಿ.ಮೀ ದೂರ ಇರುವ ಅಂಕಲಗಿ ಮಠಕ್ಕೆ ಹೋಗುವೆಂದು ನಿರ್ಧರಿಸಲಾಯಿತು.

ಆದರೆ ಮುದಗಲ್‌ದಿಂದ ಅಂಕಲಗಿ ಮಠಕ್ಕೆ ಹೋಗುವ ಬಸ್ ಆಗಲೇ ಹೋಗಿ ಆಗಿತ್ತು, ಆದರೂ ಅಂಕಲಗಿ ಮಠಕ್ಕೆ ಹೋಗುವ ಭಕ್ತರು ಬಸ್ ನಿಲ್ದಾಣದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಇರುವುದು ಕಾಣಿಸಿತು. ಅಂಕಲಗಿ ಮಠದ ಸ್ವಾಮಿಗಳು ಬಹಳಷ್ಟು ಪವಾಡಗಳನ್ನು ಮಾಡಿದ್ದಾಗಿ ಹೇಳಿಕೊಳ್ಳುವ ಜನಗಳ ಎದುರಿಗೆ ನಾನು ಸಾವಕಾಶವಾಗಿ "ಇಷ್ಟೊಂದು ಜನ ಅಂಕಲಗಿ ಮಠಕ್ಕೆ ಹೋಗುವವರೆ ಇರುವಾಗ ಮಠದಲ್ಲಿರುವ ನಿಮ್ಮ ಸ್ವಾಮಿಗೆ ಇದು ಗೊತ್ತಾಗಿ, ಕೂಡಲೇ ನಮಗೊಂದು ಬಸ್ ವ್ಯವಸ್ಥೆ ಮಾಡಬಾರದೆ?" ಎಂದು ತಮಾಷೆ ಮಾಡಿದಾಗ ಅಲ್ಲಿದ್ದ ಒಬ್ಬ ನನ್ನನ್ನು ಕಣ್ಣಿನಿಂದಲೇ ಸುಟ್ಟು ಭಸ್ಮಮಾಡುವವನಂತೆ ನೋಡಿದ.

ಗಬ್ಬು ವಾಸನೆ ಹೊಡೆಯುತ್ತಿದ್ದ ಬಸ್ ನಿಲ್ದಾಣದಲ್ಲಿ ಕಾದು ಏನೂ ಪ್ರಯೋಜನವಿಲ್ಲವೆಂದು ಮುಖ್ಯರಸ್ತೆಗೆ ಬಂದು ಅಂಕಲಗಿ ಮಠಕ್ಕೆ ಹೋಗುವುದಕ್ಕೆ ಯಾವುದಾದರೂ ವಾಹನ ಸಿಗಬಹುದೆ? ಎಂದು ನೋಡಿದೆ. ಅಂದಂತೆ ಐದತ್ತು ನಿಮಿಷಗಳಲ್ಲಿಯೇ ಸಾಮಾನುಗಳನ್ನು ಹೊತ್ತೊಯ್ಯುವ ಸಣ್ಣ 'ಟಂಟಂ' (ಗೂಡ್ಸ್ ಗಾಡಿ) ಒಂದು ಅಂಕಲಗಿಗೆ ಹೋಗುತ್ತದೆಂದು ಗೊತ್ತಾಗುತ್ತಲೇ ಯಾವುದೇ ಮೀನಮೇಷ ಮಾಡದೆ ಆ ಗಾಡಿ ಹತ್ತಿದೆ. ರಾತ್ರಿ 10 ಗಂಟೆಯಾಗಿದ್ದರಿಂದ ಮುದಗಲ್ಲಿನ ಅಂಗಡಿ ಮುಂಗಟ್ಟುಗಳೆಲ್ಲ ಆಗಲೇ ಮುಚ್ಚಿಕೊಂಡಿದ್ದವು. ಜನರ ಓಡಾಟವೂ ತೀರಾ ಕಡಿಮೆ ಆಗಿತ್ತು, ಆ ನಿಶಾಚರ ಮೌನವನ್ನು ಭೇದಿಸಿ ಸದ್ದು ಮಾಡುತ್ತ ಹೊರಟ ಟಂಟಂ ಕತ್ತಲನ್ನು ಸೀಳಿ ಮುನ್ನಡೆದಿತ್ತು. ಟಂಟಂ ಮೇಲೇರಿ ನಿಂತ ನಾವು ಹತ್ತೆಂಟು ಜನ ಅಕ್ಷರಶಃ ಕುರಿಗಳೋಪಾದಿಯಲ್ಲೇ ನಿಂತಿದ್ದೆವು. ಜಾನತಾಪೂರ, ಬನ್ನಿಗೋಳ್ ಎಂಬೆರಡು ಊರುಗಳನ್ನು ದಾಟಿಕೊಂಡು ಅಂಕಲಗಿ ಮಠದ ಹತ್ತಿರಕ್ಕೆ ಬಂದು ನಿಂತಾಗ ರಾತ್ರಿ 11 ಗಂಟೆ.

ನನಗೆ ನಿಜಕ್ಕೂ ದಿಗ್ಭ್ರಮೆಯಾಯಿತು. ರಾತ್ರಿ 11 ಗಂಟೆಯ ಸಮಯದಲ್ಲೂ ಅಂಕಲಗಿಯ ಮಠದ ಅಂಗಳದ ತುಂಬೆಲ್ಲ ಜನವೇ ಜನ. ವೈಟ್ ಕಾಲರನ ಜನರಿಂದ ಹಿಡಿದು ಜನಸಾಮಾನ್ಯನವರೆಗೂ ಅಲ್ಲಿ ನೆರೆದಿದ್ದರು. ತರತರದ ಫೋರ್‌ವೀಲ್ಹರ್, ಟೂವೀಲ್ಹರ್‌ಗಳು ಸಾಕಷ್ಟು ಸಂಖ್ಯೆಯಲ್ಲಿ ಸೇರಿದ್ದವು. ಊದುಬತ್ತಿ ಕಾಯಿ - ಕರ್ಪೂರ, ಫೋಟೋಗಳ ನಾಲ್ಕಾರು ಅಂಗಡಿಯ ಮುಂದೆ ಜನ ಸಾಲುಗಟ್ಟಿ ನಿಂತು ಅವನ್ನು ಖರೀದಿಸುತ್ತಿದ್ದರು. ವ್ಯಾಪಾರ ಭರ್ಜರಿಯಾಗಿ ನಡೆದಿತ್ತು, ನಾನೊಂದು ಕಾಯಿ ಖರೀದಿಸುತ್ತ ಸಾವಕಾಶವಾಗಿ ಆ ಅಂಗಡಿಯವನಿಗೆ "ಈ ಮೂರ್ನಾಲ್ಕು ಅಂಗಡಿಗಳು ಯಾರಿಗೆ ಸೇರಿದವು?" ಎಂದು ಕೇಳಿದೆ. ಆತ ಸಹಜವಾಗಿ "ಎಲ್ಲಾ ಮುತ್ಯಾವ್ರರೀ. ಅವ್ರ ತಮ್ಮ ಸಣ್ಣವ್ರೋರು ನೋಡಿಕ್ಯಂಡ ಹೋಗತಾರ" ಅಂದ. "ಪ್ರತಿ ಅಮಾವಾಸ್ಯೆಗೂ ಎಷ್ಟು ಕಾಯಿ ಖರ್ಚಾಗುತ್ತವೆ?" ಎಂದೆ. ಆತ "10 ಸಾವಿರ ತನಕ ಆಗಬಹುದು" ಅಂದ.


ದೊಡ್ಡನಗೌಡ

ಅದನ್ನು ದಾಟಿ ಮಠದ ಮುಖ್ಯ ದ್ವಾರಕ್ಕೆ ಬಂದು ನೋಡಿದರೆ ಅಲ್ಲಿ ಸುಮಾರು 150 ರಿಂದ 200 ಚೀಲಗಳಷ್ಟು ಜೋಳದ ರಾಶಿ ಹರವಿ ಹಾಕಿದ್ದರು. "ಈ ಜೋಳದ ರಾಶಿ ಯಾರಿಗೆ ಸಂಬಂಧಿಸಿದವು?" ಎಂದು ಮತ್ತೊಬ್ಬನನ್ನು ಕೇಳಿದೆ. "ಇವು ಭಕ್ತರು ಮಠಕ್ಕೆ ಕೊಟ್ಟವು!" ಎಂದು ಸಲೀಸಾಗಿ ಹೇಳುತ್ತ ಮುನ್ನಡೆದ. 'ಅಪ್ಪೋರನ್ನು' ಹುಡುಕುತ್ತ ನಾನು ಅವನನ್ನು ಹಿಂಬಾಲಿಸಿದೆ.

ಮಠದ ಅಂಗಳದಲ್ಲಿ ಬಂದು ನಿಂತಾಗ ನಾನು ನಿಂತಿರುವುದು ದೊಡ್ಡ ಮನೆಯ ಮುಂದೆ ಎಂದು ಅನಿಸದೆ ಇರಲಿಲ್ಲ, ಏಕೆಂದರೆ ಮಠದ ಆವರಣದಂತೆ ಮುಂದುಗಡೆ ಕಾಣಿಸಿದರೂ, ಅದರ ಹಿಂದುಗಡೆ ಮನೆಯ ವಾತಾವರಣವೇ ಇತ್ತು, ಮನೆಯ ಬಲಗಡೆ ವೈಭವೋಪೇತವಾಗಿ ರಾರಾಜಿಸುತ್ತಿದ್ದ ರಾಜಮಹಾರಾಜರ ಕುರ್ಚಿಯೊಂದು ವಿರಾಜಮಾನವಾಗಿ ವಿಜೃಂಭಿಸುತ್ತಿತ್ತು, ಅದರ ಎರಡೂ ತೋಳುಗಳಲ್ಲಿ ಸಿಂಹದ ಆಕೃತಿಯ ಗೊಂಬೆಗಳಿದ್ದವು. ಕುರ್ಚಿಯ ಮೇಲ್ಗಡೆ ರೇಶ್ಮೆಯ ಛತ್ರಿ ಥಳ ಥಳ ಹೊಳೆಯುತ್ತಿತ್ತು, ಅದರ ಎಡಗಡೆ 'ನಿರುಪಾಧೀಶ್ವರರ ಗದ್ದುಗೆ' ಇದೆ. ಬಲಗಡೆ ದೇವಿಯ ಮಂದಿರವಿದೆ. ಹಿಂದುಗಡೆ ವಿಶಾಲವಾದ ಹೊಸ್ಕಪ್ಪನ ಕೆರೆ ಇದೆ.

ಇದೆಲ್ಲವನ್ನೂ ನನ್ನ ಕಣ್ಣ ಕ್ಯಾಮರಾದಲ್ಲಿ ಸೆರೆ ಹಿಡಿಯುತ್ತ ಮುನ್ನಡೆಯುತ್ತಿರುವಂತೆ ಒಮ್ಮಿದೊಮ್ಮೆ ಜಯಘೋಷಗಳು ಮೊಳಗಲಾರಂಭಿಸಿದವು. ಅಷ್ಟುಹೊತ್ತು ಸುತ್ತಮುತ್ತ ನೆರೆದಿದ್ದ ಭಕ್ತರೆಲ್ಲ ಆ ನಿರುಪಾಧೀಶ್ವರ ಗುಡಿಯ ಮುಂಭಾಗದ ಪ್ರಾಂಗಣದ ಎದುರಿಗೆ ಇರುವ ವಿಜೃಂಭಿತ ಕುರ್ಚಿಯ ಹತ್ತಿರ ಜಮಾಯಿಸ ತೊಡಗಿದರು. ಓಹೋ..... ಸ್ವಾಮಿಗಳು ಬಂದಿರಬೇಕು. ಅದಕ್ಕೆ ಜನ ಸೇರುತ್ತಿದ್ದಾರೆ ಅನ್ನಿಸಿ ನಾನೂ ಆ ಕಡೆ ಹೆಜ್ಜೆ ಹಾಕುತ್ತಾ ನಡೆದೆ. ಆದರೆ ದೂರದಿಂದಲೇ ಕಂಡ ದೃಶ್ಯದಿಂದ ಒಂದುಕ್ಷಣ ತಟಸ್ಥವಾಗಿ ನಿಂತು ಬಿಟ್ಟೆ!

ಕನ್ನಡದ ಹೆಮ್ಮೆಯ ನಟ, ತಮಿಳು ಮತ್ತು ತೆಲುಗು ಸಿನಿಮಾಗಳಲ್ಲಿ ಅಪಾರ ಜನಪ್ರಿಯತೆ ಗಳಿಸಿರುವ, ನಟನಾ ಕೌಶಲ್ಯವನ್ನು ಈಗಾಗಲೇ ಹಲವು ಚಿತ್ರಗಳ ಮೂಲಕ ಜಗಜ್ಜಾಹೀರುಪಡಿಸಿರುವ "ಪ್ರಕಾಶ್ ರೈ ಇಲ್ಲಿಗೇಕಪ್ಪ ಬಂದ್ರೂ?!" ಎಂದು ಆವಾಕ್ಕಾದೆ. "ಯಾವುದಾದರೂ ಫಿಲ್ಮ್ ಶೂಟಿಂಗ್ ಇರಬಹುದೆ?" ಎಂದು ನನ್ನಲ್ಲಿ ನಾನೇ ತರ್ಕಿಸಿದೆ. ತೀವ್ರ ಕುತೂಹಲದಿಂದ ಸಮೀಪಕ್ಕೂ ಹೋಗಿ ನೋಡಿದೆ. ನಾನು ನನ್ನ ಕಣ್ಣುಗಳನ್ನೆ ಕ್ಷಣ ನಂಬಲಾರದವನಾದೆ.

ಹೌದು ಥೇಟ್ ಪ್ರಕಾಶ್ ರೈಯಂತೆ ಕಂಡರೂ ಆತ ಪ್ರಕಾಶ ರೈ ಆಗಿರಲಿಲ್ಲ, ಬದಲಾಗಿ ಈ ಮಠದ ಸ್ವಾಮಿ ವೀರಭದ್ರಯ್ಯನಾಗಿದ್ದ! 40-45 ರ ವಯಸ್ಸಿನ ಕಟ್ಟುಮಸ್ತಾದ ಆಳು. ಮೈ- ಕೈ ತುಂಬಿಕೊಂಡು ಪೊಗದಸ್ತಾಗಿ ಬರಬರಸೆ ಬೆಳೆದ ಬಾಳೆದಿಂಡಿನಂತೆ ಕಾಣುತ್ತಿದ್ದ, ಬಿಳಿಯ ಧೋತ್ರ, ಅದೇ ಬಣ್ಣದ ತುಂಬು ತೋಳಿನ ಅಂಗಿತೊಟ್ಟಿದ್ದ ಸ್ವಾಮಿ, ತಲೆಗೆ ಮಾತ್ರ ಹಸಿರು ಬಣ್ಣದ ರುಮಾಲು ಸುತ್ತಿದ್ದ ಕಾಂಗ್ರೆಸ್ ಪಕ್ಷದ ನೇತಾರನಂತೆ ತನ್ನ ಬಲಗೈಯನ್ನು ಮೇಲಕ್ಕೆತ್ತಿ ಜನಗಳಿಗೆ ಆಶೀರ್ವದಿಸುತ್ತಲೇ ಇದ್ದ. ಜನಗಳಂತೂ ಆತನ ಆಶೀರ್ವಾದದಿಂದ ತಮ್ಮೆಲ್ಲ ಬವಣೆಗಳು - ಸಂಕಟಗಳು ಪರಿಹಾರಗೊಂಡವು ಎಂದು ಸಂಭ್ರಮಿಸುತ್ತ ಅಪ್ಪಾವರ ಜೋಳಿಗೆಗೆ ಭಕ್ಷೀಸು ಹಾಕುತ್ತ ಮುನ್ನಡೆದಿದ್ದರು. ಸ್ವಾಮಿಯ ಕಾಲುಗಳನ್ನು ಸಂಭ್ರಮದಿಂದ ಹಿಡಿಯುತ್ತಿದ್ದರು. ಕುರ್ಚಿಯ ಪಕ್ಕದಲ್ಲಿಯೇ ಇದ್ದ ಬೂದಿಯನ್ನು ಜನ ಭಯ, ಭಕ್ತಿಯಿಂದ ಹಣೆಗೆ ಹಚ್ಚಿಕೊಳ್ಳುತ್ತಿದ್ದರು, ಕಾಗದದ ಚೀಟುಗಳಲ್ಲಿ ಕಟ್ಟಿಕೊಳ್ಳುತ್ತಿದ್ದರು.

ಬಹುಶಃ ವೀರಭದ್ರಯ್ಯ ಸ್ವಲ್ಪ ತೀರ್ಥ (ಟ್ರಿಪಲ್ ಎಕ್ಸ್ ರಮ್) ಸೇವಿಸಿರಬೇಕು. ಕಣ್ಣು ಕೆಂಪಗಾಗಿದ್ದವು. ಮಾತು ತೊದಲುತ್ತಿದ್ದವು. ನಡವಳಿಕೆಗಳು ಚಿತ್ರವಿಚಿತ್ರವಾಗಿದ್ದವು. ಹರೆಯದ ಹೆಣ್ಣು ಮಕ್ಕಳು ಕಾಣುತ್ತಲೇ ವೀರಭದ್ರಯ್ಯನ ನಿಜರೂಪ ವ್ಯಕ್ತವಾಗುತ್ತಿತ್ತು, ಸ್ವಾಮಿಯ ಗತ್ತುಗಾರಿಕೆ ಮಾಯವಾಗಿ ಅಲ್ಲಿ ದೈನೇಸಿ ನಡವಳಿಕೆ ತೂರಿಕೊಳ್ಳುತ್ತಿತ್ತು, ಹೆಣ್ಣು ಮಕ್ಕಳು ಬಯಸದೇ ಇದ್ದರೂ ಅವರ ಬಗ್ಗೆ ಅತಿಯಾದ ಕಾಳಜಿ ವ್ಯಕ್ತವಾಗುತ್ತಿತ್ತು.

ಗಜೇಂದ್ರಗಡದಿಂದ ಬಂದಿದ್ದ ಸಿದ್ದಪ್ಪ ಎಂಬ ವ್ಯಕ್ತಿಯೋರ್ವ "ಅಜ್ಜೋರೆ ನೀವು ಹೇಳಿದ ಮಟ್ಕಾ ನಂಬರ್ ಹತ್ತಿದೆ, ಮಠಕ್ಕೆ ತನ್ನ ಕೈಲಾದ ಸೇವೆ ಸಲ್ಲಿಸಲು ಬಂದಿರುವೆ" ಎಂದ. ಇದೇ ಸಂದರ್ಭವೆಂದು ಬಗೆದು ದೂರದಲ್ಲಿ ನಿಂತಿದ್ದ ಹಿರೇಆಳ್ಳಳ್ಳಿಯ ಮತ್ತೊಬ್ಬ 'ತಾಮ್ರದ ಅಂಡ್ಯಾ'ವನ್ನು ಮೈಮೇಲೆ ಹೊತ್ತುಕೊಂಡು ತಂದು "ತಮ್ಮ ಆಶೀರ್ವಾದದ ಬಲದಿಂದ ನನಗೆ ನಂಬರ್ ಹತ್ತಿತ್ತು, ಇದು ತಮ್ಮ ದಾಸೋಹಕ್ಕೆ ಎಂದು ಅರ್ಪಿಸಿ" ಎಂದು ಕೃತಾರ್ಥನಾಗುವವನಂತೆ ನಿಂತಿದ್ದ.

ಈ ಪ್ರಕರಣಗಳಿಂದ ಬೀಗಿ ನಿಂತ ವೀರಭದ್ರಯ್ಯ ಮತ್ತಷ್ಟು ಠೇಂಕಾರದ ಧ್ವನಿಯಲ್ಲಿ ಯಾರನ್ನೋ ಉದ್ದೇಶಿಸಿ, ಮತ್ತಾರತ್ತಲೋ ನೋಡುವವನಂತೆ ನಟಿಸುತ್ತ "ಮುಂದಿನ ತಿಂಗಳು 28 ರಂದು ನಿಮ್ಮ ಮನೆಗೆ ಬರುತ್ತೇನೆ" ಎಂದು ಹೇಳುತ್ತಿದ್ದ. ಸುತ್ತಮುತ್ತ ನೆರೆದಿದ್ದ ಕೆಲವು ಕುರಿಗಳು '28'ರ ಸಂಖ್ಯೆಯನ್ನೆ 'ಮಟ್ಕಾ ನಂಬರ್' ಎಂದು ಪರಿಭಾವಿಸಿ ಸಂಭ್ರಮಿಸುತ್ತಿದ್ದವು. ಆ ಪೀಠದಲ್ಲಿ ಕುಳಿತಿರುವಷ್ಟು ಹೊತ್ತು ವೀರಭದ್ರಯ್ಯ ಇಂತಹ ಹಲವಾರು 'ಗಿಮಿಕ್'ಗಳಿಂದ ಜನರನ್ನು ಮೋಸಪಡಿಸಿದ್ದ. ಅಸ್ಪಷ್ಟ ಮಾತುಗಳ ಮೂಲಕ ಜನರನ್ನು 'ಗಲಿಬಿಲಿ' ಗೊಳಿಸಿದ್ದ. ಒಗಟಿನ ಉತ್ತರಗಳಿಂದ ಗೊಂದಲಕ್ಕೆ ಈಡುಮಾಡಿದ್ದ. ಮಾರ್ಮಿಕ ನಗೆಯಿಂದ ಕೆಲವರಿಗೆ ಮತ್ತೂ ಬರಿಸಿದ್ದ. ಒಟ್ಟಿನಲ್ಲಿ ತನ್ನ ವಿಚಿತ್ರವಾದ ನಡವಳಿಕೆಗಳ ಮೂಲಕ ಜನತೆಯನ್ನು ದಂಗುಬಡಿಸಿ, ಅವರನ್ನು ಪ್ರಭಾವಿಸಿದ್ದ.

ಇವನ ನಾಟಕ ನೋಡುತ್ತ ಕುಳಿತರೆ ಇದಕ್ಕೆ ಕೊನೆ ಮೊದಲೆ ಇರುವುದಿಲ್ಲ ಎಂದು ಭಾವಿಸಿ ಅರಮನೆಯಂತಿರುವ ಅವನ ಮನೆಯ ಒಳಹೊಕ್ಕು ನೋಡಲು

ಅಂಕಲಗಿ ಮಠ




ನಿರುಪದೀಶ್ವರರು

ಮುಂದಾದೆ. ಆಗ "ಅಪ್ಪಾವ್ರು ಇಲ್ಲೇ ಇರುವಾಗ ಅಲ್ಯಾಕ ನಡದಿರ್ರೀ...." ಎಂದು ಒಬ್ಬ ರಾಗ ಎಳೆದ. ನಾನವನ ಮಾತನ್ನು ಕಡೆಗಣಿಸಿ ಮುನ್ನಡೆದದ್ದು ಕಂಡು ಆವನೇ ಮತ್ತೆ "ಅಪ್ಪಾವ್ರಿಗೆ ಭೇಟಿ ಆಗ್ಗಿರೇನ್ರೀ...!? ಹೋಗ್ರಿ.... ಅವ್ರು ಅಲ್ಲೇ ಕುಂತಾರ ನೋಡ್ರಿ......" ಅಂದ. ನಾನು ಆ ಆಗಂತುಕನತ್ತ ನೋಡದೆ ಮುನ್ನಡೆದೆ.

ಮನೆಯ ಎಡ ಬಲದ ಜೇಲಿಂದ್ರದಲ್ಲಿ ನೂರಾರು ಬತ್ತದ ಚೀಲಗಳ ನೆಟ್ಟು ಒಟ್ಟಲಾಗಿತ್ತು. ಹತ್ತೆಂಟು ಜನ ಆ ರಾಶಿ ಅಕ್ಕಿಯನ್ನು ಹಸನು ಮಾಡುವುದು, ಕೇರುವುದು ನಡೆದೇ ಇತ್ತು. ಇವರೆಲ್ಲ ಯಾರಿರಬಹುದು? ಎಂದು ಕುತೂಹಲದಿಂದ ಕೇಳಲಾಗಿ, ಸುತ್ತ ಮುತ್ತಲ ಊರಿನ ಜನ ನಾನಾ ಭವಿಗಳಿಗೆ ಒಳಗಾಗಿ, ಪುಗಸಟ್ಟೆ ಸೇವೆಗೆ ಬಂದು ನಿಂತ ಆಭಾಗಿನಿಯರು ಎಂಬುದು ಅರಿವಾಯಿತು.

ಅವರ ಬಗ್ಗೆ ಕನಿಕರ ಪಡುತ್ತಾ ದಡದಡನೆ ಮಾಳಿಗೆ ಮೇಲೆ ಏರುವ ಪಾವಟಿಗೆಗಳನ್ನು ಹತ್ತಿದೆ. ಅಲ್ಲಿ ಮೂರ್ನಾಲ್ಕು ರೂಮ್‌ಗಳಿವೆ. ಈ ವೀರಭದ್ರಯ್ಯನ ಸುಮಾರು 13 ವರ್ಷದ ಮಗ ಬಸವರಾಜ ತನ್ನ ತಂದೆಯಂತೆ ಹಸಿರು ಪಟಗಾ ಸುತ್ತಿಕೊಂಡು ಮರೀ ಮುತ್ತ್ಯಾ ಆಗಿದ್ದ.


ಪಾರ್ವತಿ ಅಂಕಲಗಿ

ವೀರಭದ್ರಯ್ಯನ ತಮ್ಮ ಫಕೀರಸ್ವಾಮಿ, ಅಣ್ಣನ ಮಗ ಬಸವರಾಜ, ಆತನ ಹೆಂಡತಿ ಸುಗಂಧಮ್ಮ, ವೀರಭದ್ರಯ್ಯನ ಮಡದಿ ಪುಷ್ಪಲತಾ, ಸುವರ್ಣಮ್ಮ, ಶ್ರೀದೇವಿ, ನಿರುಪಾದ, ಗುಲಬರ್ಗಾದಿಂದ ಬಂದಿದ್ದ ಇವರ ಶಿಷ್ಯರು, ಬೀಗರು - ಬಿಜ್ಜರಿಂದ ತುಂಬಿದ ಮಾಳಿಗೆಯ ಅಟ್ಟ ಬರ್ತಿಯಾಗಿತ್ತು.

ಅವರೆಲ್ಲರೂ ಅದೇ ಆಗ ಟೀವಿಯಲ್ಲಿ ಬರುತ್ತಿದ್ದ 'ಮುಂಗಾರು ಮಳೆ'ಯ ಹಾಡು 'ಕುಣಿದು ಕುಣಿದು ಬಾರೆ...... ಜೀವಕೆ ಜೀವ ತಂದವಳೇ.......' ನೋಡುತ್ತಿದ್ದರು. ಅದೇ ಕ್ಷಣ ನನ್ನನ್ನು ನೋಡಿದ ಫಕೀರಸ್ವಾಮಿ "ಯಾರ್ರೀ ನೀವು.....? ಇಲ್ಲಿಗ್ಯಾಕ ಬಂದ್ರೀ... ತಿಳಿಯಾದಿಲ್ಲೇನು.....?" ಎಂದು ಭುಗಿಲು ಬಿದ್ದು ಒಂದೇ ಉಸುರಿಗೆ ಕೇಳುತ್ತ ಹೋದ.

ಪನ್ನ ವಿನಮ್ರ ಹೇಳದೆ ಮತ್ತೆ ಪಾವಟಿಗೆ ಇಳಿದುಬಂದೆ. ಕೆಳಗಡೆ ಗೊರಲುತ್ತ, ನರಳುತ್ತ ಮಲಗಿರುವ ಮುದುಕಿಯೊಬ್ಬಳು ಕಾಣಿಸಿದಳು. ಆಕೆಯೂ 'ದೈವಾಂಶ ಸಂಭೂತೆಯಂತೆ'! ಈಕೆ ವೀರಭದ್ರನ ಅತ್ತೆ, ಅಂದರೆ ಆತನ ತಂದೆಯ ಅಕ್ಕ, ಪಾರ್ವತಿ ಎಂದು ಗೊತ್ತಾಯಿತು. ವಯಸ್ಸಿನಿಂದ ಹಣ್ಣಾದ ದೇಹ ನಿತ್ರಾಣವಾಗಿತ್ತು, ವೈದ್ಯಕೀಯ ಉಪಚಾರಗಳು ನಡೆದಿದ್ದವು. ಅಳಿಯನ ಪವಾಡ, ಪಾರ್ವತಿಯ ದೈವಾಂಶ ಸಂಭೂತತನ ಯಾವುದೂ ಈಕೆಯ ದೇಹದ ಮೇಲೆ ಕೆಲಸ ಮಾಡಿರಲಿಲ್ಲ, ಆದರೆ ಜನ ಮಾತ್ರ ಜನಮರುಳೋ ಜಾತ್ರೆ ಮರುಳೋ ಎಂಬಂತೆ ವೀರಭದ್ರನ ಕಾಲಿಗೆ ಎರಗುತ್ತ, ಆಶೀರ್ವಾದ ಪಡೆಯುತ್ತ ಅವನ ಸುತ್ತಮುತ್ತ ಸುಳಿದಾಡುತ್ತಿದ್ದರು. ■

ಕಾಂಗ್ರೆಸ್ ಸಮಾಧಿ ಕಟ್ಟಿದಳು ಲಲಿತಾರಾಣಿ




ರಾಜ್ಯದಲ್ಲಿ ಮತ್ತೆ ಸಮ್ಮಿಶ್ರ ಸರ್ಕಾರ ರಚನೆಯ ಆಸೆ ದಿನೇದಿನೇ ಕರಗುತ್ತಿದೆ. ಕಾಂಗ್ರೆಸ್‌ನ ಇಕ್ಕಳದಲ್ಲಿ ಬಾಲ ಸಿಕ್ಕಿಸಿಕೊಂಡಿರುವ ಇಲಿಯಂತಾಗಿ ಬಿಟ್ಟಿದೆ ಜೆಡಿಎಸ್‌ನ ಸ್ಥಿತಿ. ದೇವೇಗೌಡರ ನಕಲಿ ಸೆಕ್ಯೂಲರ್ ಪಾರ್ಟಿಯ ಮೋಸಗಾರಿಕೆ ಬಯಲಾದಂತೆ ಕೊಪ್ಪಳ ಜಿಲ್ಲೆಯ ಜೆಡಿಎಸ್‌ನಲ್ಲಿ ಮಾತ್ರವಲ್ಲದೆ ಕಾಂಗ್ರೆಸ್, ಬಿಜೆಪಿಯಲ್ಲೂ ಪಕ್ಷಾಂತರವನ್ನು ಹುಟ್ಟು ಹಾಕುತ್ತಿದೆ.

ಇವತ್ತಿನ ಅತಂತ್ರ ರಾಜಕಾರಣ ಜಿಲ್ಲೆಯ ನಾಲ್ಕು ತಾಲ್ಲೂಕಿನ ಮೂರು ರಾಜಕೀಯ ಪಕ್ಷಗಳಲ್ಲಿ ಪಕ್ಷಾಂತರಿಗಳ ವೇದಿಕೆ ಸಿದ್ಧಗೊಳ್ಳುತ್ತಿದೆ. ಸಿದ್ಧಾಂತ, ತತ್ವ ಎಲ್ಲವನ್ನೂ ಯಾವತ್ತೋ ತಿಥಿ ಮಾಡಿರುವ ಬಸವರಾಜ ರಾಯರೆಡ್ಡಿ, ಸಂಗಣ್ಣ ಕರಡಿ, ದೊಡ್ಡನಗೌಡ ಪಾಟೀಲ್, ಲಲಿತಾರಾಣಿ, ಇಕ್ಬಾಲ್ ಅನ್ಸಾರಿಯಂಥವರು ತಮಗೆ ಜನರ ಹೆದರಿಕೆಯೇ ಇಲ್ಲ ಎಂಬಂತೆ ವರ್ತಿಸುತ್ತಿದ್ದಾರೆ. "ಐದು ವರ್ಷದ ಪೀರಿಯಡ್‌ನಲ್ಲಿ ಎರಡೆರಡು ಪಾರ್ಟಿ ಬದಲಾಯಿಸಿದರೆ, ನಾಳೆ ನಾವು ಓಟರ್ಸ್‌ಗೆ ಮುಖ ತೋರಿಸುವುದ್ಹೆಂಗೆ? ಓಟು ಕೇಳುವುದ್ಹೆಂಗೆ?" ಎಂಬ ಕಾರ್ಯಕರ್ತರ ಪ್ರಶ್ನೆಗೆ "ದುಡ್ಡು ಚೆಲ್ಲಿದರೆ ಓಟರ್ಸ್ ಜೊತೆ ಕಾರ್ಯಕರ್ತರನ್ನೂ ಖರೀದಿಸಬಹುದು" ಎನ್ನುವ ಅಹಂ ಇವರದು.

ರಾಯರೆಡ್ಡಿ ಕೈಲಿ ಕಮಲ?

ಯಲಬುರ್ಗಾದ ದುರಹಂಕಾರಿ ಶಾಸಕ ಬಸವರಾಜ ರಾಯರೆಡ್ಡಿ ಎಂದಿಗೂ ಕ್ಷೇತ್ರಕ್ಕೂ ತನಗೂ ಯಾವುದೇ ಸಂಬಂಧ ಇಲ್ಲವೆಂಬಂತೆ ಇದ್ದು ಬಿಟ್ಟಿದ್ದಾನೆ. ಜನತಾ ಪರಿವಾರದಿಂದ ಟೂರಿಸ್ಟ್ ತರಹ ಕಾಂಗ್ರೆಸ್‌ಗೆ ಬಂದ ರಾಯರೆಡ್ಡಿ ಜಿಲ್ಲಾ ಕಾಂಗ್ರೆಸ್ ಮೇಲೆ ಕಂಟ್ರೋಲ್ ಸಾಧಿಸಲು ಹೋಗಿ ಎಡವಿದ್ದಾನೆ. ಇವನಿಂದಾಗಿ ಇವತ್ತು ಕಾಂಗ್ರೆಸ್ಸಿಗೆ ನಾಯಕತ್ವವೇ ಇಲ್ಲದಂತಾಗಿದ್ದರೂ ಅಕ್ಟೋಬರ್ ಮೊದಲ ವಾರದಲ್ಲಿ ಕೆಪಿಸಿಸಿ ಲೆವೆಲ್ ರಾಜಕೀಯ ಆರಂಭಿಸಿಬಿಟ್ಟ ಈ ಭೂಪ.


ಸಂಗಣ್ಣ ಕರಡಿ

ಕುಕನೂರಿನಲ್ಲಿ ಬಿಜೆಪಿಯಿಂದ ನೀರಿಳಿಸಿಕೊಂಡ ರಾಯರೆಡ್ಡಿಗೆ ನಾಲ್ಕಾರು ದಿನ ಮುಖ ಮುಚ್ಚಿಕೊಂಡು ತಿರುಗುವ ಜರೂರತ್ತೂ ಇತ್ತು. ಹಾಗಾಗಿ ಆತ ಹಾಗೆ ಕಣ್ಮರೆಯಾಗಿರಬೇಕೆಂದೇ ಯಲಬುರ್ಗಾದ ಮಂದಿ ಭಾವಿಸಿದ್ದರು. ಆದರೆ ರಾಯರೆಡ್ಡಿ ಆಸೆ ಇಟ್ಟುಕೊಂಡಿದ್ದಂತೆ ಒಂದೆಡೆ ಕೆಪಿಸಿಸಿ ಪುನರ್ ರಚನೆಯೂ ಆಗಲಿಲ್ಲ, ಆತನಿಗೆ ಕಾಂಗ್ರೆಸ್ ಪಕ್ಷದಲ್ಲಿ ಯಾವ ಸ್ಥಾನಮಾನವೂ ದಕ್ಕಲಿಲ್ಲ, ಆದ್ದರಿಂದ ಈಗ ಈತ ಇನ್ನೊಂದು ಲೆಕ್ಕಾಚಾರದಲ್ಲಿ ತೊಡಗಿದ್ದಾನೆ. ದೇವೇಗೌಡರು ಬಿಜೆಪಿಗೆ ಅಧಿಕಾರ ಕೊಡದೇ ಇದ್ದದ್ದರಿಂದ ಬಿಜೆಪಿಗೆ ಅನುಕಂಪದ ಅಲೆ ಹುಟ್ಟಲಿದೆ ಎಂದು ಭ್ರಮಿಸಿರುವ ರಾಯರೆಡ್ಡಿ ಕಮಲದ ಸಂಗಕ್ಕೆ ಜೋತು ಬಿದ್ದಿರುವ ವಾರ್ತೆಗಳು ಬರುತ್ತಿವೆ.


ಜೆ.ಎಚ್. ಪಟೇಲರ ಕಾಲದಲ್ಲಿ ದೆಹಲಿಯಲ್ಲಿ ಕರ್ನಾಟಕದ ಪ್ರತಿನಿಧಿಯಾಗಿದ್ದ ರಾಯರೆಡ್ಡಿ ಎಲ್ಲ ಪಾರ್ಟಿಯವರ ಕಾಂಟ್ಯಾಕ್ಟ್ ಬೆಳೆಸಿಕೊಂಡು ಹಿಂದೊಮ್ಮೆ ಬಿಜೆಪಿ-ಸಂಯುಕ್ತ ದಳದ ಮೈತ್ರಿಪಕ್ಷದ ಅಭ್ಯರ್ಥಿಯಾಗಿ ಕೊಪ್ಪಳ ಎಂಪಿ ಕ್ಷೇತ್ರಕ್ಕೆ ಸ್ಪರ್ಧಿಸಿದ್ದ. ಅಷ್ಟೇ ಅಲ್ಲ, ಅಂದು ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷರಾಗಿದ್ದ ಕುಶಭಾವು ಠಾಕ್ರೆಯನ್ನು ಕರೆಸಿ ತನ್ನ ಪರ ಪ್ರಚಾರ ಮಾಡಿಸಿದ್ದ.

ಇತ್ತೀಚೆಗೆ ಇದೇ ಕ್ಷೇತ್ರದಲ್ಲಿ ಬಿಜೆಪಿ ಕೂಡ ಒಂದಷ್ಟು ಓಟುಗಳನ್ನು ಹೆಚ್ಚಿಸಿಕೊಂಡಿದೆ. ಆದರಲ್ಲೂ ರಾಯರೆಡ್ಡಿಗೆ ಈಗಿರುವ ಎದುರಾಳಿಯೆಂದರೆ ಬಿಜೆಪಿಯ ಈಶಣ್ಣ. ಹೇಗಿದ್ದರೂ ಈಗಾಗಲೇ ದಳ ಮತ್ತು ಕಾಂಗ್ರೆಸ್‌ನಲ್ಲಿ ತನ್ನ ಲೆವೆಲ್‌ನ ನಾಯಕತ್ವವನ್ನೇ ಮುಗಿಸಿ ಹಾಕಿರುವುದರಿಂದ, ಬಿಜೆಪಿ ಸೇರಿ ಅಲ್ಲಿಯ ವಿರೋಧಿ ಈಶಣ್ಣನನ್ನೂ ಮೂಲೆಗುಂಪುಮಾಡಿದರೆ, ತಾನೇ ಗೆದ್ದು ವಿರೋಧಿಗಳಿಲ್ಲದಂತೆ ಮೆರೆಯಬಹುದು ಎಂಬುದು ರಾಯರೆಡ್ಡಿಯ ಲೆಕ್ಕಾಚಾರ.

ಕೈ ಹಿಡಿಯುವ ಸಂಗಣ್ಣ

ತಿಂಗಳ ಹಿಂದೆ ಕೊಪ್ಪಳ ನಗರಸಭೆಯಲ್ಲಿ ಅಧಿಕಾರ ಹಿಡಿಯುವಷ್ಟು ಸ್ಥಾನ ಗೆದ್ದಿರುವ ಜೆಡಿಎಸ್‌ನ ಜಿಲ್ಲಾಧ್ಯಕ್ಷ ಸಂಗಣ್ಣ ಕರಡಿ ಕೂಡ ದೇವೇಗೌಡರು ಬಿಜೆಪಿಗೆ ಕೈ ಕೊಟ್ಟದ್ದನ್ನು ನೋಡಿ ಹೌಹಾರಿಬಿಟ್ಟಿದ್ದ. "ಮುಂದಿನ ಬಾರಿ ಮತ್ತೆ ನಾನೇ ಶಾಸಕ" ಎನ್ನುವಂತಿದ್ದ ಸಂಗಣ್ಣನಿಗೆ ಬಿಜೆಪಿಯ ಧರ್ಮಯಾತ್ರೆ ನೋಡಿ ದಿಗಿಲಾಗಿತ್ತು. ಹಿಂದೊಮ್ಮೆ ತಾನು ಬಿಜೆಪಿ ಸೇರಿ ಅಲ್ಪಸಂಖ್ಯಾತರ ವಿಶ್ವಾಸ ಕಳೆದು ಕೊಂಡಿದ್ದು, ಇತ್ತ ಸಿದ್ದರಾಮಯ್ಯ ಪ್ರಕರಣದಿಂದ ಕುರುಬರು ಜೆಡಿಎಸ್ ಮೇಲೆ ಸಿಟ್ಟಾಗಿರುವುದು, ಈಗ ವಚನ ಭ್ರಷ್ಟತೆಯ ನೆಪದಲ್ಲಿ ವೀರಶೈವರ ಮತಗಳಿಗೂ ಕೊಕ್ಕೆಬಿದ್ದದ್ದು ಎಲ್ಲವೂ ಸೇರಿ ತನ್ನ ಕೈಗೆ ಖಾಲಿ ಪುಟ್ಟಿಯೇ ಗತಿ ಎಂದು ಬಿಜೆಪಿ ಸೇರಲು ರೆಡಿಯಾಗಿದ್ದ ಸಂಗಣ್ಣ.

ಆದರೆ ಈಗ ಬಿಜೆಪಿ-ಜೆಡಿಎಸ್ ಸಮ್ಮಿಶ್ರ ಸರಕಾರ ಅಸ್ತಿತ್ವಕ್ಕೆ ಬರುವುದು ದೂರದ ಮಾತು ಎಂದು ಭಾವಿಸಿ ಮಾಜಿ ಸಂಸದ ರಾಮುಲು ಜೊತೆ ಮಾತುಕತೆ ನಡೆಸಿ ಮತ್ತೆ ಕಾಂಗ್ರೆಸ್‌ನತ್ತ ಸಂಗಣ್ಣನ ಚಿತ್ತ ಹೊರಳುವ ನಿರೀಕ್ಷೆ ಇದೆ. ಆದರೆ ಕೊಪ್ಪಳ ಕಾಂಗ್ರೆಸ್ ಎಂಬುದು ಈಗಾಗಲೇ ಸೀಟು ಸಿಗದ ಬಸ್ಸಿನಂತಾಗಿದೆ. ಆದರೆ ಕಾಂಗ್ರೆಸ್‌ನಲ್ಲಿರುವ ಜಗಳಗಂಟತನವೇ ಸಂಗಣ್ಣನಿಗೆ ವರವಾಗುವ ಲಕ್ಷಣಗಳಿವೆ. ಕೊನೇ ಘಳಿಗೆಯಲ್ಲಿ ಸಂಗಣ್ಣ ಪಕ್ಷೇತರವಾದರೂ ಆಶ್ಚರ್ಯವಿಲ್ಲ.


ರಾಯರೆಡ್ಡಿ

ಸಮಾಧಿ ಕಟ್ಟಿದ ರಾಣಿ

ಯಾವಾಗ ಇಕ್ಬಾಲ್ ಅನ್ಸಾರಿ ಕಾಂಗ್ರೆಸ್ ತೊರೆದು, ಜೆಡಿಎಸ್ ಎಂಎಲ್ಎ ಅಲ್ಲದೇ ಮಂತ್ರಿಯೂ ಆಗಿಬಿಟ್ಟನೋ ಅಂದಿನಿಂದ ಕಾಂಗ್ರೆಸ್ ಅಧ್ಯಕ್ಷೆ ಲಲಿತಾರಾಣಿ ಮನಸ್ಸಿನೊಳಗೆ ಉಮಾ ಭಾರತಿಯಂತಾಗಿಬಿಟ್ಟಳು. ಕಾಂಗ್ರೆಸ್‌ನ ಸಮಾಧಿಯನ್ನು ಕಟ್ಟಿಯೇ ತೀರುತ್ತೇನೆಂದು ಕಚ್ಚೆ ಹಾಕಿ ನಿಂತ ರಾಣಿ ಮೊನ್ನೆ ಅದನ್ನು ಯಶಸ್ವಿಯಾಗಿ ಮುಗಿಸಿ ಈಗ ಬಿಜೆಪಿ ಸೇರಲು ತುದಿಗಾಲಲ್ಲಿ ನಿಂತಿದ್ದಾಳೆ. ಬಹುಮತವಿದ್ದರೂ ಆನಮ್ಮ ಎಪಿಎಂಸಿ, ಮೊನ್ನೆ ನಗರಸಭೆ, ನಿನ್ನೆ ಜಿಲ್ಲಾ ಪಂಚಾಯತ್‌ನಲ್ಲಿ ಕಾಂಗ್ರೆಸ್‌ಗೆ ಅಧಿಕಾರ ತಪ್ಪಿದ್ದನ್ನು ನೋಡಿ ಒಳಗೊಳಗೆ ಖುಷ್ ಆಗಿದ್ದಳು ರಾಣಿ. ಈಗ ಗಂಗಾವತಿಯಿಂದ ಕಣಕ್ಕಿಳಿಯಲಿರುವ ಬಿಜೆಪಿಯ ಕರುಣಾಕರ ರೆಡ್ಡಿಯ ಫ್ಯಾನ್ ಆಗಿಬಿಟ್ಟಿದ್ದಾಳೆ. ಜಿ.ಪಂ.ನ ಅಧ್ಯಕ್ಷ-ಉಪಾಧ್ಯಕ್ಷರ ಆಯ್ಕೆ ಸಂದರ್ಭದಲ್ಲಿ ತಾನು ನೀಡಿದ್ದ ವಿಪ್‌ನ್ನು ಇತರರು ಉಲ್ಲಂಘಿಸಿದ್ದನ್ನು ಕಂಡು ಸುಳ್ಳೇ ಅಳು ಮುಖ ಮಾಡಿಕೊಂಡ ರಾಣಿ ಬೆಂಗಳೂರಿಗೆ ಹೋಗಿ ಅಲ್ಲಿ ಡಿಸಿಸಿ ಅಧ್ಯಕ್ಷಗಿರಿಗೆ ರಾಜೀನಾಮೆ ಕೊಟ್ಟಿದ್ದಾಳೆ. ಮೊನ್ನೆವರೆಗೂ ಗಂಗಾವತಿ ಕಾಂಗ್ರೆಸ್ ಅಂದ್ರೆ ವಿಜಯನಗರ ವೈಭವದಂತಿತ್ತು, ಆದರೆ ಇವತ್ತು ಹಾಳು ಹಂಪೆಯಂತಾಗಿದೆ. ಇದರಿಂದ ರೋಸತ್ತ ಕಾರ್ಯಕರ್ತರು "ನಾವು ಜೆಡಿಎಸ್ ಸೇರ್‍ತಿವಿ" ಅಂದ್ರೆ, "ಸೇರ್‍ರೋ ಹೋಗಿ. ನಿಮಗಿಂತ ಮುಂಚೆ ನಾವೇ ಬಿಜೆಪಿ ಸೇರ್‍ತೀವಿ" ಎನ್ನೋದು ಲಲಿತಾ ರಾಣಿ ಗ್ಯಾಂಗ್‌ನ ವಾದ ಎಂಬಂತಾಗಿದೆ.

ಕೊಪ್ಪಳ


ಕಾಂಗ್ರೆಸ್‌ನತ್ತ ದೊಡ್ಡನಗೌಡ

ಸದ್ಯ ಬಿಜೆಪಿಯಿಂದ ಕುಷ್ಟಗಿ ಶಾಸಕನಾಗಿರುವ ದೊಡ್ಡನಗೌಡ ಗೆದ್ದಿದ್ದೇ ಕುರುಬರ, ದಲಿತರ, ಭಜರಂಗದಳದ ಮತಗಳಿಂದ. ಆದರೆ ಗೆದ್ದ ನಂತರ ಈತ ಭಜರಂಗದಳವನ್ನೇ ವ್ಯವಸ್ಥಿತವಾಗಿ ಮುಗಿಸಿದ್ದಾನೆ. ಸ್ವಗ್ರಾಮದಲ್ಲಿ ನಡೆದ ಯುವತಿಯ ರೇಪು ಕೇಸಿನಲ್ಲಿ ಆರೋಪಿಗಳ ಪರ ವಾಲಬಿಡಿದಿದ್ದಕ್ಕೆ ಮತ್ತು ಕುಷ್ಟಗಿ ಗಲಭೆಯಿಂದ ಇನ್ನಷ್ಟು ಗೊಂದಲ ಸೃಷ್ಟಿಸಿಕೊಂಡಿರುವ ಈತ ಈಗ ಸಿದ್ದು ಹಿಂದೆ ಹೋಗಿ ಕಾಂಗ್ರೆಸ್ ಸೇರಿದರೂ ಆಶ್ಚರ್ಯವಿಲ್ಲ.

ಇದಕ್ಕೆ ಪೂರ್ವ ಸಿದ್ಧತೆ ಎಂಬಂತೆ ತನ್ನ ಬೆಂಬಲಿಗರನ್ನು ತಾ.ಪಂ.-ಜಿ.ಪಂ.ನಲ್ಲಿ ಪಕ್ಷೇತರರನ್ನಾಗಿ ಗೆಲ್ಲಿಸಿಕೊಂಡು, ಈಗ ಪುರಸಭೆಯಲ್ಲಿಯೂ ಬಿಜೆಪಿ ಅಭ್ಯರ್ಥಿಗಳ ಬಗ್ಗೆ ನಿರ್ಲಕ್ಷ್ಯ ವಹಿಸಿ ಸೋಲುವಂತೆ ಮಾಡಿದ್ದಾನೆ. ತಾನು ಹೋಗುವ ಪಾರ್ಟಿಗೆ ಹಿಂಬಾಲಿಸಿ ಬರುವಂತಹ ವಾತಾವರಣವನ್ನು ಸೃಷ್ಟಿಸಿಕೊಂಡಿದ್ದಾನೆ.

ಒಟ್ಟಿನಲ್ಲಿ ರಾಜ್ಯ ಮಟ್ಟದಲ್ಲಿ ಪುನರ್ ಮೈತ್ರಿ ಸರ್ಕಾರ ರಚನೆಯ ಆಸೆ ಕರಗುತ್ತಿದ್ದಂತೆಯೇ ಎಲ್ಲ ಪಾರ್ಟಿಗಳ ಕಾರ್ಯಕರ್ತರು ತಮ್ಮ ನಾಯಕರ ನಿಲುವಿನಿಂದ ಕಂಗಾಲಾಗಿದ್ದಾರೆ. ತಿಂಗಳಲ್ಲಿ ಜಿಲ್ಲೆ ರಾಜಕಾರಣದ ಸ್ಥಿತಿ ರೋಚಕಮಯವಾಗುವುದಂತೂ ನಿಜ. ಕಾರ್ಯಕರ್ತರ ಪರಿಸ್ಥಿತಿ ಭೀಕರವಾಗುವುದೂ ಅಷ್ಟೇ ನಿಜ.

■ ವರದಿಗಾರ




ವೆಂಕಟೇಶ ನಾಯಕರಿಗೊಂದು ಸಲಹೆ

ಕಳೆದ ವಾರ 'ಲಂಕೇಶ್'ನಲ್ಲಿ ಪ್ರಕಟವಾದ 'ರಾಯಚೂರು ಸಂಸದನ ಕೀಚಕ ಮತ್ತರು' ವರದಿಯನ್ನು ಗಮನಿಸುತ್ತಲೇ ಸಂಸದ ವೆಂಕಟೇಶನಾಯಕನ ಸುಪುತ್ರರಾದ ಭಗವಂತರಾಯ ಹಾಗೂ ರಾಜಶೇಖರ ಜಾಗೃತರಾದರು. ಅವರಿಬ್ಬರ ಆಣತಿಯಂತೆ ಅವರ ಚೇಲಾಗಳು ಬಹುತೇಕ ಬುಕ್‌ಸ್ಟಾಲ್‌ಗಳಿಂದ ಪತ್ರಿಕೆಯ ಪ್ರತಿಗಳನ್ನು ಖರೀದಿಸಿ ಸುಟ್ಟು ಹಾಕಿದರು. ಆದರೂ ರಾಯಚೂರು, ಲಿಂಗಸೂಗೂರು, ಮಾನ್ವಿ, ದೇವದುರ್ಗದ ಜನತೆ ಪತ್ರಿಕೆಯ ವರದಿಯನ್ನು ಜೆರಾಕ್ಸ್ ಮಾಡಿಕೊಂಡು ಓದಿದ್ದಾರೆ. ಕೆಲವು ಆಸಕ್ತ ಓದುಗರು ದೂರದ ಗುಲ್ಬರ್ಗಾದಿಂದಲೂ ಪತ್ರಿಕೆ ತರಿಸಿಕೊಂಡು ನೋಡಿದ್ದಾರೆ.

ಪತ್ರಿಕೆಯನ್ನು ಸುಟ್ಟು ಹಾಕಿದ ಮಾತ್ರಕ್ಕೆ ಸತ್ಯವನ್ನು ಸುಟ್ಟುಹಾಕಿದಂತೆ ಆಗುವುದಿಲ್ಲ ಎಂಬ ಸಂಗತಿ ಈ ಅವಿವೇಕಿ ಪುತ್ರರತ್ನರಿಗೆ ತಿಳಿಯುವುದಾದರೂ ಹೇಗೆ? ಯಾವುದೇ ವಿಷಯವಿರಲಿ ಅದನ್ನು ಯಾರಿಗೂ ಕಾಣದಂತೆ ಜಾಗ್ರತವಾಗಿ ಮುಚ್ಚಿಡಬೇಕೆಂದು ಬಯಸುತ್ತೇವೋ, ಅದು ಯಾವುದೋ ಮೂಲದಿಂದ ಪುಟಿದುಕೊಂಡು ಬಯಲಾಗುತ್ತದೆ. ಆದರಲ್ಲೂ ಕಳವು ಮತ್ತು ಹಾದರವನ್ನಂತೂ ಮುಚ್ಚಿ ಹಾಕುವುದಕ್ಕೆ ಸಾಧ್ಯವೇ ಇಲ್ಲ ಎನ್ನುವ ಸಂಗತಿ ಈ ಮಂದಿಗೆ ತಿಳಿದಿರುವಂತಿಲ್ಲ. ಪ್ರಜಾತಂತ್ರವ ಚೌಕಟ್ಟಿನಲ್ಲಿ ಅತ್ಯಂತ ಪ್ರಮುಖ ಅಂಗವಾಗಿರುವ ಪತ್ರಿಕೆಯನ್ನು ಸುಟ್ಟು ಹಾಕುವುದು ಅಂದರೆ ಪ್ರಜಾಪ್ರಭುತ್ವವನ್ನು ವಿರೋಧಿಸಿದಂತೆಯೇ. ಇಂಥ ಪ್ರಜಾಪ್ರಭುತ್ವ ವಿರೋಧಿ ನಡವಳಿಕೆ, ಹುಂಬತನ ಮತ್ತು ಹಣದ ಮದದಿಂದ ತಾವೇನು ಮಾಡಿದರೂ ದಕ್ಕಿಸಿಕೊಳ್ಳಬಹುದೆಂದು ಭಾವಿಸಿರುವ ಸಂಸದರ ಪುತ್ರರು ಇನ್ನಾದರೂ ವಿವೇಕವಂತರಾಗಲಿ.

ತಾವು ಮಾಡಿದ ತಪ್ಪುಗಳನ್ನು ಒಪ್ಪಿಕೊಳ್ಳುವ ಮೂಲಕ, ಸಮಾಜ ಕೊಡಮಾಡುವ ಶಿಕ್ಷೆಯನ್ನು ಅನುಭವಿಸಿ ಮನುಷ್ಯರಂತೆ ವರ್ತಿಸಲಿ. ಕೊಂಚ ವಿವೇಕ ಉಳ್ಳವರಂತೆ ಕಾಣುವ ವೆಂಕಟೇಶನಾಯಕ ತಮ್ಮ ಮಕ್ಕಳನ್ನು ಹದಬದಿಗೆ ತರಬೇಕು. ಇಲ್ಲದೆ ಹೋದರೆ ಜನತೆಯೇ ಪ್ರಭುತ್ವ ವಿರೋಧಿಯಾದ, ಕಾಮುಕಿಪಾಸುಗಳಾದ ಅವರ ಮಕ್ಕಳ ಜೊತೆಗೆ ಸಂಸದ ನಾಯಕನನ್ನು ಮನೆಗೆ ಅಟ್ಟುವ ದಿನಗಳು ದೂರವಿಲ್ಲ.

ಸಾಮಾನ್ಯವಾಗಿ ಪತ್ರಿಕೆಯ 14 ಮತ್ತು 15ನೇ ಪುಟಗಳಲ್ಲಿ ನಮ್ಮ ಸಮಾಜಕ್ಕೆ ತಾಕಿರುವ ಸಾಮಾಜಿಕ 'ರೋಗ'ಗಳ ಬಗೆಗಿನ ವಿಶೇಷ ಲೇಖನಗಳನ್ನು ಪ್ರಕಟಿಸುವುದು ನಿಮ್ಮೆಲ್ಲರಿಗೆ ಗೊತ್ತಿರುವ ವಿಷಯ. ಆದರೆ ನಮ್ಮ ರಾಜ್ಯದಲ್ಲಿ ಇವತ್ತು ಹಿಮೋಫಿಲಿಯಾ ಮತ್ತು ತಲಸ್ಸೇಮಿಯಾದಂತಹ ಮಾರಣಾಂತಿಕ ಕಾಯಿಲೆಗಳಿಂದ ಸಾವಿರಾರು ಜನ ನರಳುತ್ತಿರುವಾಗ, ಆ ಕಾಯಿಲೆಗಳ ಬಗ್ಗೆ ಅರಿವು, ಎಚ್ಚರ ಮತ್ತು ಸರಕಾರದ ನಿರ್ಲಕ್ಷ್ಯಗಳನ್ನೂ ಜನರಿಗೆ ತಿಳಿಸುವುದು ನಮ್ಮ ಕರ್ತವ್ಯ ಎಂದುಕೊಂಡಿದ್ದೇವೆ. ಜನರ ಪ್ರಜ್ಞೆ ಮತ್ತು ಸರಕಾರದ ಕಾಳಜಿಯನ್ನು ಹೆಚ್ಚಿಸುವ ನಿಟ್ಟಿನಿಂದ ಮೂರು ಕಂತುಗಳಲ್ಲಿ ಈ ರೋಗಗಳನ್ನು ಕುರಿತು ಲೇಖನಗಳನ್ನು ಪ್ರಕಟಿಸುತ್ತಿದ್ದೇವೆ. ನಮ್ಮ ಸಮಾಜದ ಒಟ್ಟಾರೆ ಆರೋಗ್ಯದ ಬಗೆಗೆ ನಮ್ಮ ಸಣ್ಣ ಕೊಡುಗೆ ಇದು.



ಹಿಮೋಫಿಲಿಯಾ ಮತ್ತು ತಲಸ್ಸೇಮಿಯಾಗಳೆಂಬ ಮಾರಣಾಂತಿಕ ರೋಗಗಳು

ವಿಶೇಷ ಲೇಖನ

■ ಚಂದ್ರಶೇಖರ ತೋರಣಘಟ್ಟ

ಹಾಸನ ತಾಲ್ಲೂಕು ಬಸವಾಪಟ್ಟಣದ ಬಸವರಾಜು (ಹೆಸರು ಬದಲಿಸಿದೆ) ಮತ್ತು ಅರಸಿಕೆರೆಯ ರವಿಕುಮಾರ್ (ಹೆಸರು ಬದಲಿಸಿದೆ) ಅಕ್ಕತಂಗಿಯ ಮಕ್ಕಳು, ಅಂದರೆ ಅವರಿಬ್ಬರು ಅಣ್ಣ-ತಮ್ಮಂದಿರು. ಓದಿನಲ್ಲಿ ಇಬ್ಬರೂ ಉನ್ನತ ರ್‍ಯಾಂಕುಗಳನ್ನು ಗಳಿಸಿ ಅತ್ಯಂತ ಬುದ್ಧಿವಂತರೆನಿಸಿಕೊಂಡಿದ್ದವರು.

ಆದರೆ ಬಸವರಾಜುವಿನ ಕೈಕಾಲು ಕೀಲುಗಳಲ್ಲಿನ ನಿರಂತರ ರಕ್ತಸ್ರಾವದಿಂದ ಅವು ಸಂಪೂರ್ಣ ಹದಗೆಟ್ಟು ಸ್ವಾಧೀನ ಕಳೆದುಕೊಂಡಿವೆ. 10 ವರ್ಷಗಳಿಂದ ಈತ ಹಾಸಿಗೆ ಹಿಡಿದು ಮಲಗಿದ್ದಾನೆ, ಹಾಸಿಗೆ ಹಿಡಿದಿದ್ದರೂ ಮನೆಪಾಠ ಮಾಡಿಕೊಂಡು ಬದುಕು ಸವೆಸಿದ್ದ ಬಸವರಾಜು "ನನ್ನ ತಾಯಿಗೆ ತುಂಬ ವಯಸ್ಸಾಗಿದೆ, ಆಕೆಗೆ ನನ್ನನ್ನು ನೋಡಿಕೊಳ್ಳಲಾಗುತ್ತಿಲ್ಲ ನನಗೆ ದಯಾಮರಣವನ್ನು ಕಲ್ಪಿಸಿ" ಎಂದು ವೈದ್ಯರನ್ನು ಬೇಡಿಕೊಂಡಿದ್ದಾನೆ.

ಸರ್ಕಾರಿ ಉದ್ಯೋಗದಲ್ಲಿದ್ದ ರವಿಕುಮಾರ್ ಕೂಡಾ ಬಸವರಾಜುವಿನಂತಹದ್ದೇ ಸಮಸ್ಯೆಗೆ ಗುರಿಯಾಗಿ ಸ್ವಯಂ ನಿವೃತ್ತಿ ಪಡೆದುಕೊಂಡು ಶಾಶ್ವತವಾಗಿ ವ್ಹೀಲ್ ಚೇರಿನ ಆಶ್ರಯ ಪಡೆದು ತನ್ನ ದಯನೀಯ ಪರಿಸ್ಥಿತಿಯ ಬಗ್ಗೆ ಡಾ. ಸುರೇಶ್ ಹನಗವಾಡಿಯವರಿಗೆ ದೀರ್ಘ ಪತ್ರವೊಂದನ್ನು ಇತ್ತೀಚೆಗೆ ಬರೆದಿದ್ದಾನೆ.

ಮೇಲಿನ ಇಬ್ಬರಿಗೆ ಬಂದ ಕಾಯಿಲೆ ತನ್ನ ಮಗನಿಗೂ ಬಂದಿದ್ದರಿಂದ ಹತಾಶೆಗೊಂಡ ತಂದೆಯೊಬ್ಬ (ಚನ್ನಗಿರಿ ತಾಲ್ಲೂಕು), ತಾನು ಭರಿಸಲಾಗದ ಖರ್ಚು ಹಾಗೂ ನೋವಿನಿಂದ "ಎಂತಹ ಮಗ ಹುಟ್ಟಿದೆ" ಎಂದು ತಲೆಯ ಕೂದಲು ಹಿಡಿದು ಗೋಡೆಗೆ ಜಜ್ಜಿದ್ದರಿಂದ ಮಗುವಿನ ಕಣ್ಣುಗಳಿಂದ ರಕ್ತಸ್ರಾವವಾಗಿ ಅದು ಶಾಶ್ವತವಾಗಿ ಕುರುಡಾಗಿದೆ!

ಇಂತಹದೇ ಕಾಯಿಲೆಯ ಎರಡು ಗಂಡು ಮಕ್ಕಳನ್ನು ಹೆತ್ತ ಮಂಡ್ಯದ ತಾಯಿಯೊಬ್ಬರು ತನ್ನ ಮಕ್ಕಳ ಬದುಕೇ ನರಕವಾಗಿ ಹೋದಾಗ ಆಕೆ ಒಬ್ಬ ಮಗನನ್ನು ನೇಣುಹಾಕಿ, ಇನ್ನೊಬ್ಬ ಮಗನಿಗೆ ನಿದ್ರೆ ಮಾತ್ರೆ ತಿನ್ನಿಸಿ ತಾನು ನೇಣು ಹಾಕಿಕೊಂಡು ಸತ್ತಿದ್ದಾಳೆ (ಕ್ರೈಂ ಸ್ಟೋರಿಯಲ್ಲಿ ಈ ಬಗ್ಗೆ ವರದಿಯಾಗಿದೆ).

ಇವರಷ್ಟೇ ಅಲ್ಲ ಕರ್ನಾಟಕದಲ್ಲಿ ಇಂತಹದೇ ನಾಲ್ಕು ಸಾವಿರ ಮಂದಿಗೆ ಮುಳುವಾಗಿರುವುದು 'ರಕ್ತ ಹೆಪ್ಪುಗಟ್ಟುವಿಕೆಯ ಕ್ರಿಯೆಯಲ್ಲಿನ ಕೊರತೆ'ಯಿಂದಾಗಿ ಬರುವ ಹಿಮೋಫಿಲಿಯಾ (Hemophilia) ಎಂಬ ಕ್ರೂರ ರೋಗ! ಇದನ್ನು ಕುಸುಮರೋಗವೆಂದೂ ಕರೆಯುತ್ತಾರೆ.

ಮಕ್ಕಳ ಬಾಲ್ಯವನ್ನು ಕೊಲ್ಲುವ ಹಿಮೋಫಿಲಿಯಾ ರೋಗ

ಅನುವಂಶೀಯವಾಗಿ ಬರುವ ಈ ರೋಗವು ಒಂದು ಕಡೆ ಮಕ್ಕಳ ಬಾಲ್ಯದ ಚೆಲ್ಲಾಟ ಮತ್ತು ಸ್ವಾತಂತ್ರ್ಯವನ್ನು ಕಟ್ಟಿಹಾಕಿ, ಹಿರಿಯರ ಸಹಜ ಬದುಕನ್ನು ಧ್ವಂಸಗೊಳಿಸಿ ಕೊಲ್ಲುತ್ತಿದ್ದರೆ ಇನ್ನೊಂದು ಕಡೆ ತಮಗರಿವಿಲ್ಲದೇ ವಾಹಕಿಯರಾಗುವ (Carriers) ತಾಯಂದಿರನ್ನು ದುಃಖದ ಕಡಲಲ್ಲಿ ಅದ್ದುವುದಲ್ಲದೆ ಇಡೀ ಕುಟುಂಬವನ್ನು ಹತಾಶೆಯ ಅಂಚಿಗೆ ನೂಕುತ್ತಿದೆ. ಸಮಾಜದ ಅರಿವಿಗೆ ಬಾರದೆ, ಸರ್ಕಾರವೂ ಈ ಕಾಯಿಲೆಯನ್ನು ಗಂಭೀರವಾಗಿ ಪರಿಗಣಿಸದೇ ಇರುವುದರಿಂದ ಕರ್ನಾಟಕದಲ್ಲಿ ಇದುವರೆಗೆ ಈ ರೋಗಕ್ಕೆ ತುತ್ತಾದವರ ಸಂಖ್ಯೆ ನಾಲ್ಕು ಸಾವಿರ ಮುಟ್ಟಿದೆ ಎನ್ನಲಾಗುತ್ತಿದೆ. ಆದರೆ ಚಿಕಿತ್ಸೆ ಪಡೆದುಕೊಳ್ಳುತ್ತಿರುವುದು 935 ರೋಗಿಗಳು ಮಾತ್ರ. ಉಳಿದವರು ಎಲ್ಲಿ? ಹೇಗಿದ್ದಾರೆಂಬುದು ತಿಳಿಯುತ್ತಿಲ್ಲವಾದರೂ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳದೇ ಅವರು ಸಂತಾನೋತ್ಪತ್ತಿಯ ಮೂಲಕ ತಮಗೆ ಹುಟ್ಟುವ ಮಕ್ಕಳಿಗೂ ಈ ರೋಗವನ್ನು ಹರಡುತ್ತಿದ್ದಾರೆಂಬುದು ಮಾತ್ರ ಆತಂಕಕಾರಿ ಸತ್ಯ! ವಿಷಾದವೆಂದರೆ: ಬಂದಿರುವ ಕಾಯಿಲೆ ಯಾವುದೆಂದು ತಿಳಿಯದೆ ಸಹಸ್ರಾರು ರೋಗಿಗಳ ಬದುಕು ನರಕಯಾತನೆಯಲ್ಲೇ ಕೊನೆಯಾಗುತ್ತಿದೆ.

ಈ ಕಾಯಿಲೆಯ ಬಗೆಗಿನ ತಿಳಿವಳಿಕೆಯ ಕೊರತೆಯಿಂದಾಗಿ ಹೆಸರಾಂತ ವೈದ್ಯರೆನಿಸಿಕೊಂಡವರೂ ಸಹ ರಕ್ತಸ್ರಾವಗೊಂಡ ರೋಗಿಗಳ ಕೈಕಾಲುಗಳನ್ನೇ ಕತ್ತರಿಸಿ ಹಾಕುತ್ತಿದ್ದಾರೆ. ಹಿಮೋಫಿಲಿಯಾ ರೋಗಿಗಳು ಲಾಭದಾಯಕವಲ್ಲವಾದ್ದರಿಂದ ಖಾಸಗಿ ಆಸ್ಪತ್ರೆಯವರು ಇವರನ್ನು ಬಹಳ ಅಲಕ್ಷ್ಯದಿಂದ ಕಾಣುತ್ತಾರೆ. ಜೀವವಿಮಾ ನಿಗಮದವರಂತೂ ಈ ರೋಗಿಗಳನ್ನು ಹತ್ತಿರ ಕೂಡಾ ಬಿಟ್ಟುಕೊಳ್ಳುವುದಿಲ್ಲ! ಭಾರತದಾದ್ಯಂತ ಈ ರೋಗದಿಂದ ನರಳುತ್ತಿರುವವರು ಒಂದು ಲಕ್ಷ ಮಂದಿ ಇದ್ದಾರೆ. ಈವರೆಗೆ ತಪಾಸಣೆಗೊಂಡು ಚಿಕಿತ್ಸೆ ಪಡೆಯುತ್ತಿರುವವರು ಕೇವಲ 12,500 ಮಂದಿ ಮಾತ್ರ! 20 ವರ್ಷದೊಳಗಿನವರೇ ಶೇ. 56 ರಷ್ಟು ಈ ಕಾಯಿಲೆಗೆ ಬಲಿಯಾಗಿದ್ದಾರೆ, ಹೆಚ್ಚಿನಂಶ ಕಡುಬಡವರೇ ಈ ರೋಗಕ್ಕೆ ತುತ್ತಾಗಿರುವುದನ್ನು ಅಂಕಿ-ಅಂಶಗಳು ಸೂಚಿಸುತ್ತವೆ.

ಇಂಗ್ಲೆಂಡಿನ ರಾಣಿ ಎಲಿಜಬೆತ್‌ಗೆ ಅಂಟಿಕೊಂಡಿದ್ದ ಈ ರೋಗವು ಈಕೆಯ ನಂತರದ ತಲೆಮಾರಿಗೂ ಹರಡಿ 'ರಾಯಲ್ ಫ್ಯಾಮಿಲಿ ಡಿಸೀಜ್' ಎಂಬ ಖ್ಯಾತಿಯನ್ನು ಆಗ ಗಳಿಸಿತ್ತು. ದುರಂತವೆಂದರೆ ಈಗ ಅದು ತಲೆಕೆಳಗಾಗಿ ಹೆಚ್ಚು ಬಡಕುಟುಂಬಗಳಿಗೇ ತಗುಲಿಕೊಂಡು ಶಾಪವಾಗಿ ಪರಿಣಮಿಸಿದೆ. ಪ್ರತಿದಿನ ನಾಲ್ಕು ಹಿಮೋಫಿಲಿಯಾ ಮಕ್ಕಳು ಭಾರತದಲ್ಲಿ ಹುಟ್ಟುತ್ತಿವೆ.

ಹಿಮೋಫಿಲಿಯಾ ರೋಗವೆಂದರೆ 'ಗಾಯವಾದಾಗ ರಕ್ತಸ್ರಾವ ನಿಲ್ಲುವುದಿಲ್ಲ' ಎನ್ನುವ ಸೀಮಿತ ವಿಷಯ ಕೆಲವರಿಗೆ ಗೊತ್ತಿರಬಹುದಾದರೂ ಗಾಯಗಳೇ ಆಗದಿದ್ದರೂ ಹಿಮೋಫಿಲಿಯಾ ರೋಗಿಗಳ ಕೈ ಮತ್ತು ಕಾಲು ಜಾಯಿಂಟುಗಳ ಭಾಗದಲ್ಲಿ ಮತ್ತು ಕುತ್ತಿಗೆ, ಮೀನಖಂಡಗಳ ಒಳಗಡೆ, ಕೆಲವೊಮ್ಮೆ ತುಟಿಗಳಿಂದಲೂ ಆಂತರಿಕ ರಕ್ತಸ್ರಾವ (Internal Bleeding)ವಾಗುವ ವಿಷಯ ಬಹುತೇಕರಿಗೆ ತಿಳಿದೇ ಇಲ್ಲ. ಅದರಲ್ಲೂ ಶೇ. 75 ರಷ್ಟು ವೈದ್ಯರುಗಳಿಗೇ ಈ ವಿಷಯದ ಬಗೆಗೆ ತಿಳಿವಳಿಕೆಯ ಕೊರತೆ ಇದೆ! ಹಾಗಾಗಿಯೇ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿನ ಒಬ್ಬ ವೈದ್ಯ ರಕ್ತಸ್ರಾವಗೊಂಡು ಊದಿಕೊಂಡಿದ್ದ ಹಿಮೋಫಿಲಿಯಾ ರೋಗಿಯೊಬ್ಬನ ಮೊಣಕೈಯ ಭಾಗವನ್ನು ಕೊಳೆತುಹೋಗಿದೆ ಎಂದು ಕೊಯ್ದು ಹಾಕಿದ್ದರೆ, ದಾವಣಗೆರೆಯಲ್ಲಿನ ಖ್ಯಾತ ಆರ್ಥೋಪೆಡಿಕ್ ಡಾಕ್ಟರೊಬ್ಬ ಹಿಮೋಫಿಲಿಯಾ ರೋಗಿಯ ಕಾಲನ್ನೇ ಕತ್ತರಿಸಿಬಿಟ್ಟಿದ್ದಾನೆ.

ಈ ರೋಗಕ್ಕೆ ತುತ್ತಾದ ಮಕ್ಕಳು ಹೊರಗಡೆ ಹೋಗಿ ಆಟವಾಡುವಂತೆಯೇ ಇಲ್ಲ, ಈ ಮಕ್ಕಳನ್ನು ಶಾಲೆಗೆ ಕೂಡಾ ಕಳಿಸಲಾಗುವುದಿಲ್ಲ. ಆಟವಾಡುವಾಗ ಬಿದ್ದು ಗಾಯಗೊಂಡರೆ ಉಂಟಾಗುವ ರಕ್ತಸ್ರಾವ ನಿಲ್ಲುವುದಿಲ್ಲವೆಂಬ ಭಯದಿಂದ ತಂದೆ-ತಾಯಂದಿರು ಮಕ್ಕಳನ್ನು ಮನೆಯೊಳಗೇ ಬಂಧಿಸಿಡುವ ನಿರ್ಬಂಧಕ್ಕೊಳಗಾಗಿದ್ದಾರೆ. ಮಕ್ಕಳು ಆಟವಾಡುವ ಕನಸುಗಳನ್ನು ಅದುಮಿಟ್ಟುಕೊಂಡು ಇತರೆ ಮಕ್ಕಳ ಚೆಲ್ಲಾಟಗಳನ್ನು ದೂರದಿಂದಲೇ ನೋಡಿ ಮಾನಸಿಕ ಹಿಂಸೆಗೆ ಗುರಿಯಾಗುತ್ತಾರೆ. ಹಿಮೋಫಿಲಿಯಾ ರೋಗವಿರುವ ಹಿರಿಯರೂ ಕೂಡಾ ಇತರರಂತೆ ಸಹಜವಾದ ಬದುಕನ್ನು ಬದುಕಲು ಸಾಧ್ಯವಾಗದೇ ಸೂಕ್ಷ್ಮತೆಯನ್ನೇ ಪ್ರತಿ ನಿಮಿಷದ ಕಡ್ಡಾಯ ವೇಳಾಪಟ್ಟಿಯನ್ನಾಗಿಸಿಕೊಂಡು ಬದುಕಬೇಕಾಗಿದೆ.

ಹಿಮೋಫಿಲಿಯಾ ರೋಗಿಗಳಿಗೆ ರಕ್ತಸ್ರಾವವಾದರೆ ತಕ್ಷಣ ಹಿಮೋಫಿಲಿಯಾ ನಿರೋಧಕ ಔಷಧ (Anti Hemophilia Factor) ವನ್ನು ಕೊಡಬೇಕು. ಇದಕ್ಕೆ ತಗಲುವ ಖರ್ಚು 4 ರಿಂದ 6 ಸಾವಿರ ರೂ.ಗಳು! ಕೈತುಂಬ ಸಂಬಳ ಪಡೆಯುವ ಹಣವಿರುವ ರೋಗಿಗಳಿಗೂ ತಿಂಗಳಿಗೊಮ್ಮೆ ರಕ್ತಸ್ರಾವವಾದರೆ ಅದರ ಚಿಕಿತ್ಸೆಗೆಂದು ಇಷ್ಟೊಂದು ಹಣ ಖರ್ಚು ಮಾಡಲು ಕಷ್ಟವಾಗುತ್ತದೆ. ಅಕಸ್ಮಾತ್ ಅವರಿಗೆ ತಿಂಗಳಿಗೆ ಎರಡು ಬಾರಿ ರಕ್ತಸ್ರಾವವಾದರೆ ಅವರ ಪರಿಸ್ಥಿತಿಯೇ ದುಸ್ತರವಾಗುತ್ತದೆ. ಹೀಗಿರುವಾಗ ಕೂಲಿ ಕುಟುಂಬಗಳ ಹಿಮೋಫಿಲಿಯಾ ರೋಗಿಗಳಿಗೆ ಪದೇಪದೇ ರಕ್ತಸ್ರಾವವಾಗಿಬಿಟ್ಟರೆ? ಅವರ ಪರಿಸ್ಥಿತಿಯಂತೂ ಕಠೋರವಾಗುತ್ತದೆ! ಇಷ್ಟು ದೊಡ್ಡ ಮೊತ್ತದ ಹಣ ತುಂಬಿ ಫ್ಯಾಕ್ಟರ್ ಇಂಜಕ್ಷನ್ ತೆಗೆದುಕೊಳ್ಳಲಾಗದೇ ಒಂದೊ ಅಂಗವಿಕಲರಾಗುತ್ತಾರೆ, ಇಲ್ಲವೇ ಅನಾಥರಂತೆ ಸಾವಿಗೆ ಶರಣಾಗುತ್ತಾರೆ.

ತಲಸ್ಸೇಮಿಯಾ (Thalassemia) ಎಂಬ ಮತ್ತೊಂದು ಮಾರಣಾಂತಿಕ ರೋಗ

ಹಿಮೋಫಿಲಿಯಾ ಕಾಯಿಲೆಗಿಂತಲೂ ಮಾರಣಾಂತಿಕವಾದುದು ತಲಸ್ಸೇಮಿಯಾ. ಈ ಕಾಯಿಲೆ ಇರುವ ರೋಗಿಗಳ ರಕ್ತದಲ್ಲಿ ಹಿಮೋಗ್ಲೋಬಿನ್ ಅಂಶ ಉತ್ಪತ್ತಿಯಾಗುವುದಿಲ್ಲ ಮತ್ತು ಬಹಳ ಬೇಗ ಅದು ನಾಶ ಹೊಂದುತ್ತದೆ. ಮಗು ಹುಟ್ಟಿದ ಕೆಲ ತಿಂಗಳು ಅಥವಾ ಒಂದೆರಡು ವರ್ಷಗಳ ನಂತರ ಬಿಳಿಚಿಕೊಳ್ಳುವ ಮತ್ತು ನಿರಂತರ ಅಳುವ ಹಾಗೂ ನಿತ್ರಾಣಗೊಳ್ಳುವ ಮೂಲಕ ಈ ಕಾಯಿಲೆ ಕಾಣಿಸಿಕೊಳ್ಳುತ್ತದೆ. ಹೀಗಾದಾಗ ಮಗುವಿಗೆ ಮನುಷ್ಯ ರಕ್ತದಲ್ಲಿನ ಹಿಮೋಗ್ಲೋಬಿನ್ ಅಂಶವನ್ನು ಕೊಡಬೇಕು ಇಲ್ಲದಿದ್ದರೆ ಮಗು ಸಾಯುತ್ತದೆ. ಹೀಗೆ ತಲಸ್ಸೇಮಿಯಾ ಇರುವ ವ್ಯಕ್ತಿಗೆ ತಿಂಗಳು, ಮೂರು ತಿಂಗಳಿಗೊಮ್ಮೆ ಸರದಿಯಂತೆ ಜೀವನಪೂರ್ತಿ ಹಿಮೋಗ್ಲೋಬಿನ್ ಅಂಶವನ್ನು ಕೊಡುತ್ತಲೇ ಇರಬೇಕು. ಇಲ್ಲದಿದ್ದರೆ ಆ ವ್ಯಕ್ತಿ ಉಳಿಯುವುದಿಲ್ಲ, ಅನುವಂಶೀಯತೆಯೊಂದಿಗೆ ಇತರೆ ಕಾರಣಗಳು ಈ ರೋಗಕ್ಕೆ ಕಾರಣವಾಗುತ್ತವೆ.

ತಲಸ್ಸೇಮಿಯಾ ಕಾಯಿಲೆಯಿಂದ ಬಳಲುತ್ತಿದ್ದ ತನ್ನ ಮೊಮ್ಮಗನನ್ನು 8 ವರ್ಷಗಳ ಕಾಲ ಹೆಗಲ ಮೇಲೆ ಹೊತ್ತು ತಂದು ಚಿಕಿತ್ಸೆ ಕೊಡಿಸಿದ್ದ ಬಳ್ಳಾರಿ ಜಿಲ್ಲೆಯ ಕೊಟ್ಟೂರು ತಾಲ್ಲೂಕಿನ ಪರಸಜ್ಜ "ಎಂಟು ವರ್ಷದ ಕೆಳಗೆ ಸತ್ತಿದ್ರೆ ಮರಿತಿದ್ವಿ ನೀವ್ ರಕ್ತ ಕೊಟ್ಟು ಇಷ್ಟು ದಿನ ಬದುಕ್ಸಿ ತೆಪ್ ಮಾಡಿದ್ರಿ" ಎಂದು ಡಾ. ಸುರೇಶ್ ಹನಗವಾಡಿಯವರ ಮುಂದೆ ಗೋಳಾಡಿದ್ದ. ಇತ್ತೀಚೆಗೆ ಕಾಯಿಲೆಯ ಖರ್ಚನ್ನು ಭರಿಸಲಾಗದೇ ಪರಸಜ್ಜ ತನ್ನ ಮೊಮ್ಮಗನನ್ನು ಕಳೆದುಕೊಂಡಿದ್ದಾನೆ. ದಾವಣಗೆರೆಯ ಮೆಕಾನಿಕ್ ನಾಗರಾಜು ಪ್ರತಿ ಮೂರು ತಿಂಗಳಿಗೊಮ್ಮೆ ತಮ್ಮ ಮಗನ ಜೀವ ಉಳಿಸಿಕೊಳ್ಳಲು ರಕ್ತಕ್ಕಾಗಿ ಕಂಡಕಂಡವರ ಕೈ ಕಾಲಿಡಿದು ಪಡಬಾರದ ಬಾಧೆಪಡುತ್ತಾರೆ. ಕರ್ನಾಟಕದಾದ್ಯಂತ ಈ ಕಾಯಿಲೆ ಇರುವ ಸಾವಿರಕ್ಕೂ ಹೆಚ್ಚು ಮಂದಿ ಮಕ್ಕಳ ತಾಯಂದಿರು ತಾವು ಹೆತ್ತ ಮಕ್ಕಳನ್ನು ಉಳಿಸಿಕೊಳ್ಳುವುದಕ್ಕಾಗಿ ಪ್ರತಿ ತಿಂಗಳು - ಮೂರು ತಿಂಗಳಿಗೊಮ್ಮೆ ನಾಗರಾಜು ಪಡುತ್ತಿರುವ ಬಾಧೆಯನ್ನು ಪಡುತ್ತಿದ್ದಾರೆ.

ಈ ಎರಡು ಕಾಯಿಲೆಗಳಿಗೆ ಗುರಿಯಾದ ಮಕ್ಕಳನ್ನು ಹೊರ ರಾಜ್ಯ ಹಾಗೂ ದೂರದ ಊರುಗಳಿಂದ ದಾವಣಗೆರೆಗೆ ಕರೆದುಕೊಂಡು ಬರುವ ತಂದೆ-ತಾಯಂದಿರಿಗೆ ಚಿಕಿತ್ಸೆ ಕೊಡಿಸುವುದು ದುಸ್ತರವಾಗಿ, ತಾವು ಹೆತ್ತ ಮಕ್ಕಳು ತಮ್ಮ ಕಣ್ಣ ಮುಂದೆಯೇ ಸಾವಿನಂಚಿಗೆ ಹೋಗುತ್ತಿರುವುದನ್ನು ಕಂಡು ದಿನನಿತ್ಯ ಕಣ್ಣೀರಿನಲ್ಲಿ ಕೈ ತೊಳೆಯುತ್ತಿದ್ದಾರೆ.




ರೋಗಿಯೇ ರೋಗಿಗಳಿಗೆ ದಿಕ್ಕು

ಹಿಮೋಫಿಲಿಯಾ ಹಾಗೂ ತಲಸ್ಸೇಮಿಯಾ ರೋಗಿಗಳ ಮತ್ತವರ ಬಂಧುಗಳ ಆಕ್ರಂದನವು ಮುಗಿಲು ಮುಟ್ಟುತ್ತಿದ್ದರೂ ಸರ್ಕಾರದ ಕಿವಿಗೆ ಮಾತ್ರ ಇದು ತಟ್ಟುತ್ತಲೇ ಇಲ್ಲ! ಈ ರೋಗಿಗಳಿಗಾಗಿ ಯಾವುದೇ ವಿಶೇಷ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಂಡಿಲ್ಲ ಮತ್ತು ಈ ಬಗ್ಗೆ ಯಾವುದೇ ರೀತಿಯ ಸಂಶೋಧನಾ ಕಾರ್ಯಕ್ರಮಗಳನ್ನಾಗಲೀ, ಈ ಕಾಯಿಲೆಗಳಿಗೆ ಬೇಕಾದ ಔಷಧಿಗಳನ್ನು ತಯಾರಿಸುವುದನ್ನಾಗಲೀ ಮಾಡುತ್ತಿಲ್ಲ, ಈ ರೋಗಗಳಿಂದ ಯಾತನೆ ಪಡುತ್ತಿರುವ ರೋಗಿಗಳು ತಾವೇ ತಮ್ಮನ್ನು ಮತ್ತು ತಮ್ಮಂತೆಯೇ ಇರುವ ಇತರರನ್ನು ಉಳಿಸಿಕೊಳ್ಳುವ ಪ್ರಯತ್ನಗಳನ್ನು ಮಾಡಬೇಕಾದ ಪರಿಸ್ಥಿತಿ ಎದುರಾಗಿದೆ.

ದಾವಣಗೆರೆಯ ಎ.ಎ.ಓ. ಮೆಡಿಕಲ್ ಕಾಲೇಜಿನಲ್ಲಿ ಫೆಥಾಲಜಿ ಪ್ರೊಫೆಸರ್ ಆಗಿರುವ ಡಾ. ಸುರೇಶ್ ಹನಗವಾಡಿಯವರು ಸ್ವತಃ ಹಿಮೋಫಿಲಿಯಾ ಕಾಯಿಲೆಯಿಂದ ನರಳುತ್ತಿದ್ದು ಅಲಕ್ಷ್ಯಕ್ಕೊಳಗಾದ ಹಿಮೋಫಿಲಿಯಾ ಹಾಗು ತಲಸ್ಸೇಮಿಯಾ ರೋಗಿಗಳ ಒಳಿತಿಗಾಗಿ ಕರ್ನಾಟಕದಲ್ಲಿ ಮೊಟ್ಟ ಮೊದಲ ಬಾರಿಗೆ ಹಿಮೋಫಿಲಿಯಾ ಸೊಸೈಟಿಯನ್ನು ಪ್ರಾರಂಭಿಸಿ, ರಾಜ್ಯದ ನಾಲ್ಕಾರು ಕಡೆ ಹಿಮೋಫಿಲಿಯಾ ಸೊಸೈಟಿಯ ಸ್ವತಂತ್ರ ಘಟಕಗಳು

ಘೋಷಣೆಯಾಗಲು ತಮಿಸುತ್ತಿದ್ದಾರೆ. ಜೊತೆಗೆ ತಲಸ್ಸೇಮಿಯಾ ರೋಗಿಗಳನ್ನು ನೋಂದಾಯಿಸಿಕೊಂಡು ನಾಲ್ಕು-ನಾಲ್ಕು ಮಂದಿ ರಕ್ತ ದಾನಿಗಳ ಗುಂಪುಗಳನ್ನು ಮಾಡಿ ಅವರಿಂದ ತಲಸ್ಸೇಮಿಯಾ ರೋಗಿಗಳಿಗೆ ರಕ್ತವನ್ನು ಕೊಡಿಸಿ ತಲಸ್ಸೇಮಿಯಾ ರೋಗಿಗಳಿಗೂ ಬೆಳಕಾಗಿದ್ದಾರೆ.

ಇವರು ನಮ್ಮ ಪತ್ರಿಕೆಯ ಮುಂದಿನ ಎರಡು ಸಂಚಿಕೆಗಳಲ್ಲಿ ಹಿಮೋಫಿಲಿಯಾ ಹಾಗೂ ತಲಸ್ಸೇಮಿಯಾ ಕಾಯಿಲೆಗಳ ಕುರಿತು ಬರೆಯುತ್ತಾರಾದ್ದರಿಂದ 'He moph ilia is not a disease but it is a disorder' ಎಂಬ ಘೋಷಣೆಯ ಮೂಲಕ ಡಾ. ಸುರೇಶ್ ಹನಗವಾಡಿ ಮತ್ತು ಸ್ನೇಹಿತರು ಹೆಣಗುತ್ತಿರುವ ಬಗ್ಗೆ ಮತ್ತು ಸರ್ಕಾರ ಹಾಗೂ ಸಮಾಜ ಈ ರೋಗಿಗಳ ಬಗ್ಗೆ ವಹಿಸಲೇಬೇಕಾದ ಜವಾಬ್ದಾರಿಯ ಕುರಿತು ಮಾತ್ರ ಸಂಕ್ಷಿಪ್ತ ವಾಗಿ ಗಮನ ಸೆಳೆಯುವುದು ಸೂಕ್ತವೆನಿ ಸುತ್ತದೆ.



ಡಾ. ಸುರೇಶ್ ಅನಗವಾಡ

ಹಿಮೋಫಿಲಿಯಾ ಸೊಸೈಟಿ - ಕರ್ನಾಟಕ

ಹಿಮೋಫಿಲಿಯಾ ರೋಗದ ಕುರಿತು ಒಂದು ವಿಚಾರ ಸಂಕಿರಣದಲ್ಲಿ ದಾವಣಗೆರೆಯ ಖ್ಯಾತ ಮಕ್ಕಳ ತಜ್ಞೆ ಡಾ. ನಿರ್ಮಲಾ ಕೇಸರಿಯವರು "ಡಾ. ಸುರೇಶ್ ಹನಗವಾಡಿಯವರನ್ನು ಹಿಮೋಫಿಲಿಯಾ ರೋಗಿಯನ್ನಾಗಿಸಿದ್ದಕ್ಕೆ ದೇವರಿಗೆ ಸಾವಿರಾರು ನಮನಗಳು" ಎಂದು ಹೇಳಿ ಅಲ್ಲಿದ್ದವರನ್ನೆಲ್ಲ ಬೆಚ್ಚಿಬೀಳಿಸಿದ್ದರು. ಡಾ. ನಿರ್ಮಲಾ ಕೇಸರಿಯವರ ಪದ ಬಳಕೆಯನ್ನು ಸೀಮಿತ ದೃಷ್ಟಿಕೋನ ದಿಂದಲೇ ನೋಡಬೇಕಾಗಿಲ್ಲ, ಏಕೆಂದರೆ ಅಲ್ಲಿಯವರೆಗೂ ಕರ್ನಾಟಕದ ಯಾರೂ ಹಿಮೋಫಿಲಿಯಾ ಮತ್ತು ತಲಸ್ಸೇಮಿಯಾ ರೋಗಿಗಳ ಬಗ್ಗೆ ತಲೆಯನ್ನೇ ಕೆಡಿಸಿಕೊಂಡಿರದ ಸಂದರ್ಭದಲ್ಲಿ ಸ್ವತಃ ಹಿಮೋಫಿಲಿಯಾ ರೋಗಿಯಾಗಿ, ಈ ರೋಗಿಗಳ ಬಗ್ಗೆ ಡಾ. ಸುರೇಶ್ ಹನಗವಾಡಿಯವರು ವಹಿಸುತ್ತಿರುವ ಅಪಾರ ಶ್ರಮದ ಕುರಿತ ಪ್ರಶಂಸೆಯೇ ಈ ರೀತಿಯ ಹೇಳಿಕೆಗೆ ಕಾರಣವಾಗಿತ್ತು.

ಡಾ. ಸುರೇಶ್ ಹನಗವಾಡಿಯವರ ತಮ್ಮನಿಗೂ ಈ ಕಾಯಿಲೆ ಇದೆ. ಇವರ ಮಾವನವರು ಇದೇ ಕಾಯಿಲೆಯಿಂದ ತೀರಿಹೋಗಿದ್ದಾರೆ. 1986 ರಲ್ಲಿ ಇದೇ ಕಾಯಿಲೆಯಿಂದ ಪ್ರಾಣ ಕಳೆದುಕೊಂಡಿದ್ದ ಬೆಂಗಳೂರಿನ ಜಗನ್ನಾಥ ಮತ್ತು ರಾಮಕೃಷ್ಣ ಎಂಬ ಸಹೋದರರಿಬ್ಬರ ತಂದೆಯಿಂದ 'ಹಿಮೋಫಿಲಿಯಾ ಫೆಡರೇಶನ್ ಇಂಡಿಯಾ' ಮತ್ತು 'ವರ್ಲ್ಡ್ ಹಿಮೋಫಿಲಿಯಾ ಫೆಡರೇಶನ್' ಕುರಿತು ಮಾಹಿತಿಗಳನ್ನು ಪಡೆದ ಡಾ. ಸುರೇಶ್ ಹನಗವಾಡಿಯವರು ದೆಹಲಿಯ ಅಶೋಕ್ ಬಿ. ವರ್ಮ (N.o.n. ಸ್ಥಾಪಕ) ಮತ್ತು ಡಾ. ಮನೋಚಿ (ಇಟಲಿ, .N.o. ಉಪಾಧ್ಯಕ್ಷ) ಯವರನ್ನು ಭೇಟಿಯಾಗಿ ಅವರ ಸಲಹೆಯಂತೆ ದಾವಣಗೆರೆ, ಹುಬ್ಬಳ್ಳಿ, ಬಳ್ಳಾರಿ ಆಸ್ಪತ್ರೆಗಳ ಫೈಲುಗಳನ್ನು ತಡಕಾಡಿ ಪ್ರಾರಂಭದಲ್ಲಿ 9 ಮಂದಿ ಹಿಮೋಫಿಲಿಯಾ ರೋಗಿ ಗಳೊಂದಿಗೆ 'ಹಿಮೋಫಿಲಿಯಾ ಸೊಸೈಟಿ-ಕರ್ನಾಟಕ'ವನ್ನು 1988 ರಲ್ಲಿ ಸ್ಥಾಪಿಸಿದರು. N.o.n. ಸ್ಥಾಪಕ ಅಶೋಕ್ ಬಿ. ವರ್ಮ ಹಿಮೋಫಿಲಿಯಾದಿಂದಲೇ ತೀರಿ ಹೋದ ನಂತರ 2004 ರಿಂದ ಡಾ. ಸುರೇಶ್ ಹನಗವಾಡಿಯವರೇ ಈಗ N.o.n. ಅಧ್ಯಕ್ಷರಾಗಿದ್ದಾರೆ.

ಹಣಕಾಸಿನ ಬಿಕ್ಕಟ್ಟು

'ಹಿಮೋಫಿಲಿಯಾ ಸೊಸೈಟಿ-ಕರ್ನಾಟಕ'ವನ್ನು ಸ್ಥಾಪಿಸಿದ ನಂತರ ನೋಂದಣಿಯಾಗುವ ಹಿಮೋಫಿಲಿಯಾ ಹಾಗೂ ತಲಸ್ಸೇಮಿಯಾ ರೋಗಿಗಳ, ಅದರಲ್ಲೂ ಕಡುಬಡವ ರೋಗಿಗಳ ಸಂಖ್ಯೆಯೇ ಅಧಿಕಗೊಂಡು ಅವರಿಗೆ 'ಹಿಮೋಫಿಲಿಯಾ ನಿರೋಧಕ ಔಷಧಿ' (Anti Hemophilia Factor) ಮುಂತಾದವನ್ನು (ಇವನ್ನು ಭಾರತದಲ್ಲಿ ತಯಾರಿಸಲಾಗುತ್ತಿಲ್ಲ, ವಿದೇಶಗಳಿಂದಲೇ ತರಿಸಿಕೊಳ್ಳಬೇಕು) ಕೊಡಲು ತೀವ್ರ ಹಣಕಾಸಿನ ಬಿಕ್ಕಟ್ಟುಗಳಿಂದಾಗಿ ಡಾ. ಸುರೇಶ್ ಹನಗವಾಡಿಯವರ ವಿದ್ಯಾರ್ಥಿಗಳಾದ ಡಾ. ಭಂಡಾರಿ, ಡಾ. ಶಿರೀಶ್‌ರ ಸಲಹೆಯ ಮೇರೆಗೆ ಅವರಿಗೆ ಪರಿಚಯವಿದ್ದ ಶೀತಲ್‌ಶೆಟ್ಟಿ (ಮಿಸ್ ಇಂಡಿಯಾ [illegible])ರನ್ನು 1996 ರಲ್ಲಿ ಕರೆಸಿ ದಾವಣಗೆರೆಯಲ್ಲಿ ಫ್ಯಾಷನ್ ಶೋ ನಡೆಸಿ 2.5 ಲಕ್ಷ ರೂ.ಗಳನ್ನು, 1998 ಏಪ್ರಿಲ್ 17 (ವಿಶ್ವ ಹಿಮೋಫಿಲಿಯಾ ದಿನ) ರಂದು ಎಸ್.ಪಿ. ಬಾಲಸುಬ್ರಮಣ್ಯಂ [illegible] ಮೂಲಕ ಕಾರ್ಯಕ್ರಮ ಕೊಡಿಸಿ 6.30 ಲಕ್ಷ ರೂ. ಗಳನ್ನು ಹಿಮೋಫಿಲಿಯಾ ಮತ್ತು ತಲಸ್ಸೇಮಿಯಾ ರೋಗಿಗಳ ಉಳಿವಿಗಾಗಿ ಸಂಗ್ರಹಿಸಲಾಯಿತು. ವಿಶೇಷವೆಂದರೆ ಚೆನ್ನೈನಿಂದ 100 ಕೆ.ಜಿ.ಯಷ್ಟು ಕಾಸ್ಮೆಟಿಕ್ಸ್ ತಂದು ವೈದ್ಯಕೀಯ ವಿದ್ಯಾರ್ಥಿಗಳನ್ನು ಹುರಿದುಂಬಿಸಿ, ತರಬೇತುಗೊಳಿಸಿ ಕಾರ್ಯಕ್ರಮ ನೀಡಿದ ಶೀತಲ್‌ಶೆಟ್ಟಿ ಮತ್ತು ಖ್ಯಾತ ಗಾಯಕ ಎಸ್.ಪಿ. ಬಾಲಸುಬ್ರಮಣ್ಯಂ ಇಬ್ಬರೂ ಕೂಡ ಯಾವುದೇ ಸಂಭಾವನೆಯನ್ನು ತಿರಸ್ಕರಿಸಿದ್ದರಲ್ಲದೆ ಬಂದು ಹೋಗುವ ಪ್ರಯಾಣದ ಖರ್ಚನ್ನೂ ತೆಗೆದುಕೊಳ್ಳಲಿಲ್ಲ! ಆನಂತರದಲ್ಲಿ ಹಣದ ಖರ್ಚು ವೆಚ್ಚದ ಬ್ಯಾಲೆನ್ಸ್ ಶೀಟನ್ನು ಕರ್ನಾಟಕ ಹಿಮೋಫಿಲಿಯಾ ಸೊಸೈಟಿಯಿಂದ ಪತ್ರಿಕೆಗಳಿಗೂ ಬಿಡುಗಡೆ ಮಾಡಲಾಯಿತು.

ಇತರೆ ಬಿಕ್ಕಟ್ಟುಗಳು

'ಹಿಮೋಫಿಲಿಯಾ ಸೊಸೈಟಿ' ಪ್ರಾರಂಭಗೊಂಡ ನಂತರ 500 ಮಂದಿ ಹಿಮೋಫಿಲಿಯಾ ಮತ್ತು 25 ಕ್ಕೂ ಹೆಚ್ಚು ತಲಸ್ಸೇಮಿಯಾ ರೋಗಿಗಳು ದಾವಣಗೆರೆಯೊಂದರಲ್ಲೇ ನೋಂದಾಯಿತರಾಗಿದ್ದಾರೆ. ಸಂಗ್ರಹಗೊಂಡ ಹಣದಿಂದ ಸೀಮಿತ ಮಟ್ಟದ ಔಷಧಿಯನ್ನು ತರಿಸಲಾಗುತ್ತದೆಯಾದರೂ ಸ್ಥಳೀಯವಾಗಿ ದಾನಿಗಳಿಂದ ರಕ್ತವನ್ನು ಪಡೆದು ಅದನ್ನು ರೋಗಿಗಳ ರಕ್ತ ಸಂಬಂಧಿ ಕಾಯಿಲೆಗಳಿಗನುಗುಣವಾಗಿ ವಿಂಗಡಿಸಿ, ಪರೀಕ್ಷಿಸಲು ಮತ್ತು ರೋಗಿಗಳಿಗೆ ಮನೆಯ ವಾತಾವರಣವನ್ನು ನಿರ್ಮಿಸಿ ಅವರಿಗೆ ನೈತಿಕ ಸ್ಥೈರ್ಯ ತುಂಬಿ ಚಿಕಿತ್ಸೆ ನೀಡಲು ಸ್ವಂತ ಪ್ರಯೋಗಾಲಯ ಮತ್ತು ಚಿಕಿತ್ಸಾ ಕೇಂದ್ರ ಅತ್ಯವಶ್ಯಕವಾಗಿ ಬೇಕು. ಕಿರುವಾಡಿ ಗಿರಿಜಮ್ಮನವರು (ಬಾಪೂಜಿ ಸಂಸ್ಥೆಯ ಸಂಸ್ಥಾಪಕ ಸದಸ್ಯೆ) ಹಿಮೋಫಿಲಿಯಾ ಚಿಕಿತ್ಸಾ ಕೇಂದ್ರದ ನಿವೇಶನಕ್ಕಾಗಿ 3 ಲಕ್ಷ ರೂ. ಕೊಟ್ಟಾಗ 2001 ರಿಂದಲೇ ಕಟ್ಟಡದ ಕೆಲಸ ಪ್ರಾರಂಭವಾಗಿದ್ದರೂ ಅದು ಇಲ್ಲಿಯತನಕ ಪೂರ್ಣಗೊಂಡಿಲ್ಲ, "ಫಂಡ್ ರೈಸಿಂಗ್‌ನಿಂದಲೇ ಇದನ್ನು ಪೂರ್ಣಗೊಳಿಸಲು ಸಾಧ್ಯವಿಲ್ಲ, ನಾವೇ ಸ್ನೇಹಿತರು ಸೇರಿ ಲೋನ್ ತೆಗೆದುಕೊಂಡು ಇದನ್ನು ಪೂರ್ಣಗೊಳಿಸುತ್ತೇವೆ" ಎಂದು ಡಾ. ಸುರೇಶ್ ಹನಗವಾಡಿಯವರು ಹೇಳುತ್ತಾರಾದರೂ ಸುತ್ತಲಿನ ಸಮಾಜ ಮತ್ತು ಸರ್ಕಾರ ಈ ಬಗ್ಗೆ ಯೋಚಿಸದೇ ಇದ್ದರೆ ಎಲ್ಲಾ ಅವಶ್ಯಕತೆಗಳನ್ನು ಇವರೇ ಪೂರೈಸಿಕೊಳ್ಳಲು ಸಾಧ್ಯವೇ?


ಸಮಾಜ ಮತ್ತು ಸರ್ಕಾರದ ಜವಾಬ್ದಾರಿ ಏನು?

ತಾವೊಬ್ಬರೇ ಬದುಕುವುದು ಮುಖ್ಯವಲ್ಲ, ತಮ್ಮೊಂದಿಗೆ ಇತರರನ್ನು ಬದುಕಿಸಬೇಕೆಂಬ ಜನಪರ ಸ್ಫೂರ್ತಿಯೊಂದಿಗೆ ಬಯಂಕರ ಕಾಯಿಲೆಗಳಿಗೆ ಒಳಗಾದ ಸಮೂಹಗಳನ್ನು ಆಯ್ದುಕೊಳ್ಳುವ ಜವಾಬ್ದಾರಿಯನ್ನು ಸಮಾಜದಲ್ಲಿ ಮನುಷ್ಯರೆಂದು ಬದುಕುವ ಎಲ್ಲರೂ ಹೊರಲು ಮುಂದಾದರೆ ಮಾನಸಿಕವಾಗಿ ಕುಗ್ಗಿ ಹೋಗುತ್ತಿರುವ ಈ ವಿಶೇಷ ಕಾಯಿಲೆಯ ರೋಗಿಗಳಿಗೆ ಕನಿಷ್ಠ ಸಾಂತ್ವನ ನೀಡಿದಂತಾಗುತ್ತದೆ.


ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕ ಸರ್ಕಾರ ಸ್ವಲ್ಪ ಉತ್ತಮ ಎನ್ನಬಹುದು. ಏಕೆಂದರೆ ಹಿಮೋಫಿಲಿಯಾ ರೋಗಿಗಳಿಗಾಗಿ ಫ್ಯಾಕ್ಟರ್ VIII ಮತ್ತು IXರ ಔಷಧಿಗಳನ್ನು ತರಿಸಲು ಒಂದು ಕೋಟಿ ರೂ.ಗಳನ್ನು ಬಿಡುಗಡೆ ಮಾಡಿ ರೋಗಿಗಳಿಗೆ ಉಚಿತವಾಗಿ ನೀಡಲು ಸರ್ಕಾರಿ ಆಸ್ಪತ್ರೆಗಳಲ್ಲಿ ಈ ಔಷಧಿಗಳನ್ನು ಶೇಖರಿಸಿ ಇಟ್ಟುಕೊಂಡಿದೆ. ತಲಸ್ಸೇಮಿಯಾ ರೋಗಿಗಳಿಗೂ ಉಚಿತವಾಗಿ ರಕ್ತವನ್ನು ನೀಡಲು ಮುಂದಾಗಿದೆ. ಆದರೆ ಶೇ. 5 ರೋಗಿಗಳಿಗೂ ಈ ಸೌಲಭ್ಯ ದೊರೆಯುತ್ತಿಲ್ಲ! ಸರ್ಕಾರಿ ಆಸ್ಪತ್ರೆಯವರು ಈ ಔಷಧಿಗಳನ್ನು ನಿರಂತರವಾಗಿ ವಾಪಾಸ್ಸು ಕಳಿಸುತ್ತಿದ್ದಾರೆ! ಕಾರಣವೇನೆಂದರೆ 'ಬಿ.ಪಿ.ಎಲ್. ಕಾರ್ಡ್ ಹೊಂದಿದವರಿಗೆ ಮಾತ್ರ' ಈ ಸೌಲಭ್ಯ ನೀಡಲು ಸರ್ಕಾರ ಷರತ್ತು ವಿಧಿಸಿರುವುದು!

ಒಂದುಕಡೆ ಈ ವಿಷಯ ರೋಗಿಗಳಿಗೆ ಗೊತ್ತಿಲ್ಲದೆ ಬಹುತೇಕ ರೋಗಿಗಳು ಬಿ.ಪಿ.ಎಲ್. ಕಾರ್ಡ್‌ಗಳನ್ನು ಪಡೆದುಕೊಳ್ಳದೇ ಇರುವುದರಿಂದ ಡಾಕ್ಟರ್‌ಗಳು ಈ ರೋಗಿಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳುತ್ತಿಲ್ಲ, ಇನ್ನೊಂದು ಕಡೆ ಬಿ.ಪಿ.ಎಲ್. ಕಾರ್ಡ್‌ಗಳನ್ನು ರೋಗಿಗಳು ಹೊಂದಿದ್ದರೂ ಇಲ್ಲಸಲ್ಲದ ತಾಂತ್ರಿಕ ಕಾರಣಗಳನ್ನೊಡ್ಡಿ ಮಾತನಾಡಲು ಅವಕಾಶ ನೀಡದೇ ಹಿಮೋಫಿಲಿಯಾ ಮತ್ತು ತಲಸ್ಸೇಮಿಯಾ ರೋಗಿಗಳನ್ನು ದಬಾಯಿಸಿ ಹೊರದಬ್ಬುತ್ತಿದ್ದಾರೆ. ಕಮಾಯಿ ಇಲ್ಲದೆ ಪುಕ್ಕಟೆ ಯಾಕೆ ಔಷಧಿ ಕೊಡಬೇಕೆಂಬ ಹೊಟ್ಟೆಯುರಿಯಿಂದಾಗಿ ಡಾಕ್ಟರುಗಳು ಈ ರೀತಿ ಮಾಡುತ್ತಿದ್ದಾರೆ. ಸಾಮಾನ್ಯ ರೋಗಗಳ ಚಿಕಿತ್ಸೆಗಾಗಿ ಬಿ.ಪಿ.ಎಲ್. ಕಾರ್ಡ್‌ಗಳ ಷರತ್ತನ್ನು ವಿಧಿಸಿದರೆ ಅದೊಂದು ರೀತಿ ಸರಿ ಎನ್ನಬಹುದು. ಆದರೆ ಹಿಮೋಫಿಲಿಯಾ ಮತ್ತು ತಲಸ್ಸೇಮಿಯಾದಂತಹ ಭೀಕರ ಕಾಯಿಲೆಗಳು ಎಂತಹ ಶ್ರೀಮಂತರಿಗೂ ಬರಬಾರದ, ದೈನಂದಿನ ಚಟುವಟಿಕೆಯಿಂದ ಮೊದಲಾಗಿ ರೋಗಿಗಳ ಇಡೀ ಜೀವಮಾನವನ್ನೇ ನರಕಗೊಳಿಸುವ ವಿಶೇಷ ಕಾಯಿಲೆಗಳು - ಸಾಮಾನ್ಯ ರೋಗಗಳಂತೆ ಇವನ್ನು ಪರಿಗಣಿಸಿ ಸರ್ಕಾರ ಬಿ.ಪಿ.ಎಲ್. ಕಾರ್ಡ್‌ಗಳ ಷರತ್ತು ಹೇರಿರುವುದರಿಂದ ಹೊಣೆಗೇಡಿ ಡಾಕ್ಟರುಗಳಿಗೆ ಹಾಸಿಗೆ ಹಾಸಿಕೊಟ್ಟಂತಾಗಿದೆ.

ಸರ್ಕಾರವು ಈ ಷರತ್ತನ್ನು ಮೊದಲು ತೊಲಗಿಸಿ, ಹಿಮೋಫಿಲಿಯಾ ಮತ್ತು ತಲಸ್ಸೇಮಿಯಾ ರೋಗಿಯೆಂದು ನಿರ್ಧಾರಗೊಂಡವರಿಗೆ ಹಿಮೋಫಿಲಿಯಾ ನಿರೋಧಕ ಔಷಧಿ ಮತ್ತು ಮನುಷ್ಯನ ರಕ್ತದ ಹಿಮೋಗ್ಲೋಬಿನ್‌ನನ್ನು ಉಚಿತವಾಗಿ ನೀಡುವ ವ್ಯವಸ್ಥೆಯನ್ನು ತಕ್ಷಣ ಮಾಡಬೇಕು. ಜೊತೆಗೆ ಹಿಮೋಫಿಲಿಯಾ ಮತ್ತು ತಲಸ್ಸೇಮಿಯಾ ಕಾಯಿಲೆಗಳ ಬಗ್ಗೆ ಡಾಕ್ಟರುಗಳಿಗೆ ಸರಿಯಾದ ತಿಳಿವಳಿಕೆ ನೀಡುವ ವ್ಯವಸ್ಥೆಯನ್ನು ಮಾಡಬೇಕು. ಇದಾಗದಿದ್ದರೆ ಈಗಾಗಲೇ ಈ ಕಾಯಿಲೆಗಳ ಬಗ್ಗೆ ವಿಶೇಷ ಗಮನ ಹರಿಸಿ, ಇಂತಹ ರೋಗಿಗಳಿಗೆ ನಿರಂತರ ಆಶ್ರಯದ ಭರವಸೆಯನ್ನು ಕೊಡುತ್ತಿರುವ ಹಿಮೋಫಿಲಿಯಾ ಸೊಸೈಟಿಗಳಿಗೆ ಎಲ್ಲಾ ರೀತಿಯ ನೆರವನ್ನಾದರೂ ನೀಡಬೇಕು. ಸಮಾಜದ ಎಲ್ಲಾ ವರ್ಗದ ಜನರ ಆರೋಗ್ಯವನ್ನು ಕಾಪಾಡುವ ಜವಾಬ್ದಾರಿ ನಮ್ಮದೆಂದು ಬೊಗಳೆ ಬಿಡುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೊನೆಪಕ್ಷ ಹಿಮೋಫಿಲಿಯಾ ಮತ್ತು ತಲಸ್ಸೇಮಿಯಾಗಳಂತಹ ಮಾರಣಾಂತಿಕ ರೋಗಗಳನ್ನು ಹೊಂದಿರುವವರನ್ನು ಆಯ್ದುಕೊಳ್ಳದಿದ್ದರೆ ಇವರು ಘೋರವಾದ ಅಪಾಯಕ್ಕೊಳಗಾಗುತ್ತಾರೆ. ■



None of the sons will have haemophilia.
All of the daughters will carry the haemophilia gene.



There is a 50% chance at each birth that a son will have haeomophilia.
There is a 50% chance at each birth that a daughter will carry the haemophilia gene.



ಕೆಲ ಲಾವೋತ್ಸೆ ಕತೆಗಳು

ಒಂದು ಪ್ರಶ್ನೆ

ಲಾವೋತ್ಸೆ ಹೇಳಿದ ಮಾತು, ಎಂದು ಯಾರೋ ಹೇಳಿದ್ದು:

"ಮಾತಾಡುವವರಿಗೆ ಏನೂ ಗೊತ್ತಿರುವುದಿಲ್ಲ.

ಗೊತ್ತಿದ್ದವರು ಸುಮ್ಮನಿರುತ್ತಾರೆ."

ಲಾವೋತ್ಸೆ ಜ್ಞಾನಿ ಎಂಬುದಾದರೆ

ಐದು ಸಾವಿರ ಪದಗಳ ಗ್ರಂಥವನ್ನಾದರೂ

ಏಕೆ ಬರೆದ?

ಒಳ್ಳೇ ಅಡುಗೆ

ಬಂದ ಅತಿಥಿಗೆ ಒಮ್ಮೆ ನೀರೇ ಹೆಚ್ಚಾಗಿದ್ದ ದ್ರಾಕ್ಷಾರಸವನ್ನು ನೀಡಲಾಯಿತು. ಅತಿಥಿ ಒಂದೇ ಸಮನೆ ಆತಿಥೇಯನ ಮನೆ ಅಡುಗೆಯವನನ್ನು ಹೊಗಳಲಾರಂಭಿಸಿದ. ಆತಿಥೇಯ ಕೇಳಿದ: 'ಇನ್ನೂ ನೀನು ಏನೂ ತಿಂದೇ ಇಲ್ಲ. ಆಗಲೇ ನಮ್ಮ ಅಡುಗೆಯವನು ಒಳ್ಳೆ ಭಟ್ಟ ಎಂದು ಹೇಗೆ ಹೇಳಿದೆ?"

ಅತಿಥಿ ಹೇಳಿದ: "ಅಡುಗೆಯವನನ್ನು ನೋಡುವ ಅಗತ್ಯ ಏನಿದೆ? ತಣ್ಣೀರೇ ಇಷ್ಟು ರುಚಿಯಾಗಿದೆ ಎಂದಮೇಲೆ?"

ನಾನು ಎಲ್ಲಿ?

ಒಮ್ಮೆ ಒಬ್ಬ ಬೌದ್ಧ ಭಿಕ್ಕುವನ್ನು ಯಾವುದೋ ಅಪರಾಧಕ್ಕಾಗಿ ಪೊಲೀಸ್‌ನವನು ಹಿಡಿದುಕೊಂಡು ಹೋಗುತ್ತಿದ್ದ. ಭಿಕ್ಕು ಪ್ರಚಂಡ. ಏನೋ ಮಾಡಿ ಪೊಲೀಸ್‌ನವನಿಗೆ ಚೆನ್ನಾಗಿ ಕುಡಿಸಿದ. ಒಳ್ಳೇ ಅಮಲೇರಿದ ಮೇಲೆ ಅವನ ತಲೆ ಬೋಳಿಸಿ, ಹಗ್ಗದಿಂದ ಅವನನ್ನು ಕಟ್ಟಿಹಾಕಿ ಓಡಿಹೋದ.

ನಿಶೆ ಇಳಿದು ಎಚ್ಚರವಾದ ಮೇಲೆ ಪೊಲೀಸ್‌ನವನು ಭಿಕ್ಕುಗಾಗಿ ಹುಡುಕುತ್ತಾ ತಲೆ ಮೇಲೆ ಕೈ ಹೊತ್ತು ಕುಳಿತ. ಅರೆ, ನನ್ನ ತಲೆ ಬೋಳಾಗಿದೆಯಲ್ಲ ಎಂದುಕೊಳ್ಳುವ ಹೊತ್ತಿಗೆ, ತಾನು ಭಿಕ್ಕುವಿನ ಧಿರಿಸನ್ನು ಧರಿಸಿರುವುದನ್ನು ಅಚ್ಚರಿಯಿಂದ ಗಮನಿಸಿದ. ನೋಡುತ್ತಾನೆ, ಹಗ್ಗ ತನ್ನ ಸುತ್ತಲೂ ಕಟ್ಟಲ್ಪಟ್ಟದೆ! ಅರೆ, ಭಿಕ್ಕುವೇನೋ ಇಲ್ಲೇ ಇದ್ದಾನೆ, ಆದರೆ ನಾನು ಎಲ್ಲಿ ಹೋದೆ? ಎಂಬ ಚಿಂತನೆಯಲ್ಲಿ ಮುಳುಗಿದ.

ಅನ್ಯಾಯ

ಜಿಪುಣಾಗ್ರೇಸರನೊಬ್ಬನನ್ನು ಹುಲಿಯೊಂದು ಎತ್ತಿಕೊಂಡು ಓಡಿಹೋಯಿತು. ಅದನ್ನು ಬೆನ್ನಟ್ಟಿದ ಜಿಪುಣನ ಮಗ ಇನ್ನೇನು ಹುಲಿಗೆ ಗುಂಡು ಹಾರಿಸಬೇಕು ಅನ್ನುವಷ್ಟರಲ್ಲಿ, ಹುಲಿಯ ಬಾಯಲ್ಲಿ ನೇತಾಡುತ್ತಿದ್ದ ಜಿಪುಣ ಕಿರುಚಿಕೊಂಡ, 'ಕಾಲಿಗೆ ಗುರಿಯಿಡು ಮಗನೇ, ಸುಮ್ಮನೇ ಹುಲಿಯ ಚರ್ಮವನ್ನು ಹಾಳುಮಾಡಬೇಡ!'

ಗುರಿ ಮತ್ತು ಸೋಲು

ಸೈನಿಕನೊಬ್ಬ ಯುದ್ಧದಲ್ಲಿ ಇನ್ನೇನು ಸೋತು ಶರಣಾಗಬೇಕು ಎನ್ನುವಷ್ಟರಲ್ಲಿ, ಅಲ್ಲಿಗೆ ಅದೃಶ್ಯದಿಂದ ಇನ್ನೊಬ್ಬ ಸೈನಿಕನ ಪ್ರೇತ ನೆರವಿಗೆ ಬಂತು. 'ಯಾವ ದೇವತೆ ನೀನು?' ಎಂದು ನಮ್ಮ ಸೈನಿಕ ದೈನ್ಯದಿಂದ ಕೇಳಿದ. 'ನನ್ನ ಹೆಸರು ಗುರಿದೇವ' ಎಂಬ ಉತ್ತರ ಬಂತು. [illegible]

ದ್ಯಾವೇಗೌಡನ ಸೂತ್ರ ಅಂದ್ರೆ, ದಾರ ಅವುನ ಕೈಲಿರಬೇಕು ಅಷ್ಟೆ



ಕರ್ನಾಟಕದ ಗಬ್ಬು ರಾಜಕಾರಣವನ್ನು ಅಳೆದು ಸುರಿದು ಸುಸ್ತಾಗಿ ಕುಳಿತಿದ್ದಾಗ ಕಾಳಮಾವ,

"ಪುಕಾಸ ಯಾಕೆ ಹಿಂಜರುದುಬುಟ್ಟಾ?" ಎಂದು ರಾಗ ಎಳೆದ.

"ಯಾಕಿಂಜರದ ಅಂದ್ರೆ ಇಂತ ಯಮ್ಮೆಲ್ಲೆಗಳ ಕಟುಗಂದು ಯಾವನಾರ ವಿಗಕ್ಯಾದತೇನೊ ಮಾವ?" ಎಂದ ಉಗ್ರಿ.

"ಮತ್ತವುರೆ ಅವುನತ್ತಕೆ ಬಂದು ಹಿಜಮಾಡತಿದ್ರು ಅಂದೆ?"

"ಮಾಡತಿದ್ರು ಸರಿ. ಆ ಮಾತಿನಲ್ಲಿ ಗೋಗರತನೂ ಇತ್ತು."

"ಅದೇನು ಗೋಗರತನ್ನ?" ಎಂದಳು ಜುಮ್ಮಿ.

ಬಯಲುಸೀಮೆಯ ಕಟ್ಟೆಪುರಾಣ

ಬಿ. ಚಂದ್ರೇಗೌಡ

"ನೋಡೆ, ಕುಮಾರಸ್ವಾಮಿ ನಮಿಗಿಷ್ಟು ಕೊಟ್ಟಿದ್ದ ತಿಂಗಳಿಗಿಷ್ಟು ಕೊಡತಿದ್ದ. ನೀನೇನು ಕೊಡ್ತಿಯಪ್ಪ ಅನ್ನೋ ಸುವಾರತಂದ ಮಾತು ಅವರ ಬಾಯಲಿ ಬಂದಾಗ, ಇಂತ ಯಮ್ಮೆಲ್ಲೆಗಳ ಯಾವನಾರ ಮಡಿಕಂಡು ಬಕ್ಕಾದತೇನೆ?" ಎಂದು ಉಗ್ರಿ ಹೇಳುವಾಗ ಎಮ್ಮೆಲ್ಲೆಗಳ ಬಗ್ಗೆ ಗೌರವ ಕಳೆದುಕೊಂಡ ಜುಮ್ಮಿ,

"ಥೂ ಅವುರ ಮನಿಯಾಳಾಗ. ಪಂಚಾತಿ ಮೆಂಬ್ರೆ ಪರವಾಗಿಲ್ಲ ಕಂಡ್ಳ" ಎಂದು ನೆಲಕ್ಕೆ ಉಗಿದಳು.

"ಮುನ್ಸಿಪಾಲ್ಟಿ ಮೆಂಬ್ರು ಇವುರಿಗಿಂತ ವಾಸಿ ಕಣೆ. ರೀಡ್ರು ಕಷ್ಟ ಸುಖ ಕೇಳ್ತರೆ. ಈ ನನಮಕ್ಕಳು ಅವುರಿಗಿಂತ ಕಡಿಯಾಗೋದ್ರು."

"ಅದೇನಾರ ಆಗ್ಲಿ ಎಡೂರಪ್ಪ ಮುಖ್ಯಮಂತ್ರಿ ಆಗಲಿಲ್ಲ ಅಂದ್ರೆ ಗಾಳ್ಯಾಗಿ ಯಾರ್ನಾರ ಮುರಕತ್ತನೆ?" ಎಂದು ಸೀರ ನಕ್ಕ.

"ಇನ್ಯಾರ್ನ ಮುರದನಯ್ಯ. ದ್ಯಾವೇಗೌಡುನ್ನ ಮುರಿಯದವುನು" ಎಂದ ಉಗ್ರಿ.

"ಪಾಪ ಇನ್ನುಮ್ಯಾಲೆ ಮಾತ್ನೆ ಆಡದಿಲ್ಲ ಅಂತ ಸುಮ್ಮನಾಗಿಬುಟ್ನಂತೆ" ಎಂದು ಜುಮ್ಮಿ ಲೊಚಗರಿದಳು.

"ಅವುನು ಮರಿಯಾದಿ ಇಲ್ದೋನು ಕಣೆ. ದ್ಯಾವೇಗೌಡ ತಿರಗ ಕರದಾಗ ಅನುಮಾನ ಪಡದು ಬ್ಯಾಡವೆ?" ಎಂದ ಉಗ್ರಿ.

"ನಿಜ ಕಂಡ್ಳ ಉಗ್ರಿ ಯರಡು ಸತಿ ಕರದು ಕೊಡಕುಲ್ಲ ಅನ್ನಿಸಿಗಂಡು ತಿರಗ ಮೂರನೆ ಸತಿ ಹೋಗಿ ಮನೆತ್ರ ನಿಂತಗತ್ತರೆ ಅಂದ್ರೆ ಅದಿನ್ನೆಷ್ಟುರ ಮಟ್ಟಿಗೆ ಗತಿಗೆಟ್ಟದ್ದರಿವುರು, ಲ್ಯಕ್ಕ ಹಾಕು" ಎಂದ ಸೀರ.

"ನೀನೆ ನೋಡಪ್ಪ ನಿನಿಗನ್ನಿಸಿದ್ದು ಅವುರಿಗನ್ನಿಸಿಲ್ಲವಲ್ಲಾ?"

"ಅಂಗರೀಗ ಅಧಿಕಾರ ಕೊಡದಿಲವೇನ್ನ?" ಎಂದಳು ಜುಮ್ಮಿ.

"ನೋಡೆ, ಏನ್ನು ಹೇಳಕ್ಕೆ ಬರದಂತೆ ಕತೆ ನ್ಯಡದೋಗ್ಯದೆ. ಅಕಸ್ಮಾತ್ ರಾಜ್ಯಪಾಲ ಬಜೆಪಿ ಕರದು ಅಧಿಕಾರ ಕೊಟ್ರೆ ಅಂತ ಯಾವತ್ತು ದ್ಯಾವೇಗೌಡನಿಗೆ ವಳಿತೊ ಅವತ್ತೆ ಹನ್ನೆರಡು ಕಂಡಿಷನ್ನು ಬರದು ಇದಕೆ ಒಪ್ಪಿಗಳದಾದ್ರೆ ಅಂದವುನಂತೆ, ಹೇಳ್ತಿ ನೀನು."

"ನೋಡು ಮತ್ತೆ?" ಎಂದುಕೊಂಡು ವಾಟಿಸ್ಸೆ ಹಾಜರಾದ.

"ಅದೇನು ಕಂಡಿಸನ್ನ?" ಎಂದಳು ಜುಮ್ಮಿ.

"ವಾಟಿಸ್ಸೆ ಬಂದನಲ್ಲ ಅವುನ್ನೆ ಕೇಳು" ಎಂದ ಉಗ್ರಿ.

"ಲೇ ವಾಟಿಸ್ಸೆ ಅದೇನ್ಲ ದ್ಯಾವೇಗೌಡನ ಕಂಡಿಸನ್ನು?"

"ಕುಮಾರಸ್ವಾಮಿ ಪುಕಾರ ಅವು ಕಂಡಿಷನ್ನಲ್ಲ ಕಣಕ್ಕ, ಒಂಥರಾ ಯರಡು ಪಾರ್ಟಿಯವರು ಫಾಲೊ ಮಾಡಬೇಕಾದ ಪ್ರಮಾಣವಚನ ಇದ್ದಂಗೆ. ಅಂದ್ರೆ ಕಾಮನ್ ಮಿನಿಮಮ್ ಪ್ರೊಗ್ರಾಂ ಕಣಕ್ಕ."

"ಅದೇನು ಸರಿಯಾಗೇಳ್ಳ."

"ದ್ಯಾವೇಗೌಡನ ಕಂಡಿಸನ್ನು ಅಂದ್ರೆ ಇನ್ನೇನಿರತವಕ್ಕ? ಮೊದಲ್ನೆದಾಗಿ ಏನು ಡಿಮ್ಯಾಂಡಿಟ್ಟವುನಪ್ಪಾ ಅಂದ್ರೆ, ಕುಮಾರಸ್ವಾಮಿಯ ಲೀಡ್ರು ಅಂತ ಬಜೆಪಿಯವರೂ ಒಪ್ಪಿಗಬೇಕು."

"ಇವುನು ಪಾರ್ಟಿಯೋನು, ಅವುರಿಗ್ಯಂಗೆ ಲೀಡ್ರಾದನ್ನ?" ಎಂದ ಸೀರ.

"ಅದೇ ಚಿಗಪ್ಪ ಪಾಯಿಂಟು. ಇನ್ನು ಯರಡ್ನೆ ಲೀಡ್ರಾಗಿ ರೇವಣ್ಣನನ್ನ ಒಪ್ಪಿಗಂಡು ಉಪಮುಖ್ಯಮಂತ್ರಿ ಮಾಡಬೇಕು."

"ಯಾಕೆ ಪ್ರಕಾಸಿಲವೆ?"

"ಪ್ರಕಾಸನ್ನ ಉಪಮುಖ್ಯಮಂತ್ರಿ ಮಾಡಬೇಕಾಯ್ತದೆ ಅಂತ್ಲೆಯ ಯರಡು ತಿಂಗಳಿಂದೆ ಅವುರನ್ನ ತಗುದು ಮಿರಾಜುದ್ದೀನ್ ಪಟೇಲ ಅನ್ನೋ ತಲೆಕೆಟ್ಟ ಸಾಬಿಯ ಜೆಡಿಎಸ್ ಪಾರ್ಟಿ ಅಧ್ಯಕ್ಷನ್ನ ಮಾಡಿಲವೇನಕ್ಕಾ?"

"ಓಹೊಹೊ ಅದಕೆ ಅನ್ನು ಪ್ರಕಾಸನ್ನ ಬದ್ನಾಸಿರದು?"

"ಇನ್ಯಾತಕೆ ಅಂತಿ. ದ್ಯಾವೇಗೌಡನ ಲ್ಯಕ್ಕಚಾರ ಲ್ಯಕ್ಕ ಹಾಕಿ ಟೋಟ್ಲು ಮಾಡಿ ಹೇಳಕ್ಕೆ ದೊಡ್ಡದೊಡ್ಡ ವಿದ್ವಾಂಸರಿಗೆ ಆಯ್ತಯಿಲವಂತೆ?"

"ಅದಿರ್ಲಿ, ಬಹುಮತಯಿದ್ರು ಸರಕಾರ ಯಾಕ್ಲ ಮಾಡ್ತಯಿಲ್ಲ?" ಎಂದ ಸೀರ.

"ಇರು ಚಿಗಪ್ಪ, ದ್ಯಾವೇಗೌಡನ ಮಿನಿಮಮ್ ಕಾಮನ್ ಮಾತ್ರ ಹೇಳ್ತಯಿದ್ದಿನಿ."

"ಹೇಳತ್ಲಗೆ."

"ಸರಕಾರ ಏನಾರ ಮಾಡದಿದ್ರೆ ಕುಮಾರಸ್ವಾಮಿ ಕುಂದ್ರಿಸಿಗಂಡು ಹೇಳಬೇಕು, ಅವುನ ಒಪ್ಪಿಗೆ ತಗಬೇಕು."

"ಅದು ಸರಕಾರ ಆದಮೇಲಲವೇನ್ನ?"

"ಅದೇ ಚಿಗಪ್ಪ ಇರೋ ಪಾಯಿಂಟು. ಈಗ ರಾಜ್ಯಪಾಲರತ್ರ ಇರೊ ಸಾಮಗ್ರಿ ನೋಡಿದ್ರೆ ಅಂತೂ ಇಂತೂ ಕುಂತಿ ಕೊಡಕುಲುಕು ರಾಜ್ಯಂ ಲೇದು ಅನ್ನಂಗಾಯ್ತದೆ."

"ಅಂಗಂದ್ರೇನ್ನ?"

"ಅಂತೂ ಇಂತು ಕುಂತಿ ಮಕ್ಕಳಿಗೆ ರಾಜ್ಯಲ್ಲ ಅಂತ ಕಣಕ್ಕ."

ದೇವರುಗಳ ಪರಿಪಾಟಲು



ಬಯಲುಸೀಮೆಹಳ್ಳಿಗಳಲ್ಲಿ ಇವತ್ತಿಗೂ ಒಂದು ಪದ್ಧತಿ ಇದೆ. ಹಳ್ಳಿ ಸುತ್ತಮುತ್ತ ಹಸಿರು ಮಾಯವಾದಾಗ, ಕುರಿ ಮಂದೆ ಅಟ್ಟಿಕೊಂಡು ಮೇವು ಇರುವ ಕಡೆಗೆ ಹೋಗೋದು ಮಾಮೂಲು. ಕುರಿಗಳು ಮೈ ತುಂಬಿಕೊಂಡು ಕಣ್ಣಿಗೆ ಸೊಂಪು, ಬಾಯಿಗೆ ಇಂಪು ಅಂತ ಕಂಡಮೇಲೆ ಊರಿನ ಕಡೆ ಮುಖ ಹಾಕ್ತಾರೆ. ಜಾತ್ಯತೀತ ಜನತಾದಳದ ಶಾಸಕರನ್ನು ಕುರಿಹಿಂಡಿನಂಗೆ ಬಸ್ಸಲ್ಲಿ ತುಂಬಿಕೊಂಡು ಈ ರೆಸಾರ್ಟ್‌ಗೆ ಅಂತ ಹೋಗೋದು; ಅಲ್ಲಿ ಏನೋ ಬಿಬು ಕಂಡು ಬೇರೆ ರೆಸಾರ್ಟ್‌ಗೆ ಅಟ್ಟಿಕೊಂಡು ಹೋಗೋದು; ಒಂದೇ ದಿನ ಎರಡು ಮೂರು ರೆಸಾರ್ಟಿಗೆ ಶಟಾಯ್ಸೋದು ನೋಡಿದಾಗ ಕುರಿ ಕೊಬ್ಬಿಸಿ ಕುರುಬ ಜೇಬು ತುಂಬಿಸಿಕೊಳ್ಳೋಕೆ ಅಂತ ಮುಂದೆ ಅಟ್ಟಿಕೊಂಡು ಊರೂರು ಅಲೆಯೋದು ನೆನಪಾಯ್ತು. ಇಂತಹ ಊರೂರು ಯಾತ್ರೆಯಿಂದ ಕುರಿಗಳಿಗೇನು ಅಂತಹ ಲಾಭ ಇಲ್ಲ ಅಂತ ಇಟ್ಕಳಿ. ಹಂಗೆ ನೋಡಿದ್ರೆ ಕೊಬ್ಬಿದ ಕುರಿ ಮೇಲೆ ಬಾಯಿ ರುಚಿ ಕಂಡಿರೋರ ಕಣ್ಣು ಇರುವುದರಿಂದ ಬೇಗನೆ ಅವರ ಬಾಯಿಗೆ ಆಹಾರ ಆಗಬೇಕಾಗ್ತದೆ. ಆದರೆ ಕುರುಬನಿಗಂತೂ ಲಾಭವೋ! ಹಂಗೆ ಈ 'ರೆಸಾರ್ಟ್ ದರ್ಶನ' ಯಾತ್ರೆಯಿಂದ ಶಾಸಕ ಮಹನೀಯರು ಕೊಬ್ಬದರೂ ಮೆಣಗಾರಿಕೆ ಮಾಡ್ತ ಮೆರೆಯೋದು ಮಾತ್ರ ಮುಖಂಡರುಗಳೇನೇ!

ಅಲ್ಲ ಹೆಂಡತಿ, ಗಂಡ, ಮಕ್ಕಳುಮರಿ, ಮನೆ ಮಠ ಬಿಡಿಸಿ ಯಾಕೆ ಹಿಂಗೆ ಕೂಡಾಕಿಕೊಂಡಿದಾರೆ ಅಂದರೆ.... ಕಾಂಗ್ರೆಸ್ಸಿನೋರು ಕೊಂಡುಕೊಂಡು ಬಿಟ್ಟಾರು ಅನ್ನೋ ಭಯ ಅಂತೆ! ಅಂದರೆ ಇವರು ಕೊಂಡಿರೋ ಬೆಲೆಗಿಂತ ಅವರು ಹೆಚ್ಚಿಗೆ ಬಿಡ್ಡು ಮಾಡಿದರೆ.... ಹಣದ ಆಮಿಷ ನೋಡಿ, ಕುರಿಗಳು ಈ ಮಂದೆ ಬಿಟ್ಟು ಆಮಂದೆಗೆ ಅಗಚಿಕೊಂಡಾವು ಅಂತ! ಹಾಗೆ ನೋಡಿದರೆ ಕೊಂಡ ಕುರಿಗಳ ಜೋಪಾನ ಮಾಡೋದು ಯಜಮಾನನ ಕರ್ತವ್ಯವೇ ಸರಿ! ಶಾಸಕ ಮಹಾಶಯರುಗಳು 'ನಾವಿರಬೇಕಾದ್ದು ಜನಗಳ ಮಧ್ಯೆ. ಇಲ್ಲಿ ಕೂಡಿ ಹಾಕಿರಲಾಗಿ ಅವರ ಸಂಪರ್ಕವೇ ಇಲ್ಲದೆ ಬೇಸರ ಬಂದಿದೆ' ಎಂಬುದಾಗಿ ಬೊಂಬ್ಬಬಜಾಯಿಸಿದರೂ ಅವು ಅಗಚಿಹೋಗದಂತೆ ಭಾರೀ ಬಂದೋಬಸ್ತ್ ಮಾಡಿದಾರೆ.

ನಡೆದಾಡುವ ದೇವರುಗಳಾದ ಮಠಾಧೀಶರುಗಳು ಜಾತ್ಯತೀತ ಜನತಾದಳದ 'ಕುರಿಮಂದೆ ಕೂಡಾ ಕುಲಿಕೆ'ಯ ಕಾರ್ಯದಿಂದ ಆತ್ಮತೃಪ್ತಿ ಅನುಭವಿಸುತ್ತಿರಬಹುದು. ಆದರೂ ಯಡ್ಯೂರಪ್ಪ 'ನನಗೆ ವಚನಭ್ರಷ್ಟತೆ ಮಾಡಿದರೋ' ಅಂತ ಗೊಳೋ ಅಂದಾಗ ನೊಂದು ಧರ್ಮಯುದ್ಧ ಸಾರಲು ರಣವೀಳ್ಯ ನೀಡಿದೆವು; ಈಗ ನೋಡಿದರೆ ಯಾರ ವಿರುದ್ಧ ಯುದ್ಧ ಹೂಡಬೇಕಿತ್ತೋ ಅವರಿಗೆ ಶರಣಾಗಿವೆ; ರಣವೀಳ್ಯ ನೀಡಿ ಆಶೀರ್ವದಿಸಬೇಕೆಂದು ಕೋರಿ ತಮ್ಮ ಪಾದಪದ್ಮಂಗಳಿಗೆರಗಿದ ಆ ಪಾಪಿಗಳು ಯುದ್ಧದ ಬದಲು ಸಂಧಾನಕ್ಕೆ ತೆರಳಿದಾಗ ತಮ್ಮ ಕಡೆ ತಿರುಗಿಯೂ ನೋಡಲಿಲ್ಲ; ಇಂತಹ ರಣಹೇಡಿಗಳಿಗೆ ಧರ್ಮಯುದ್ಧ ಮಾಡಲು ಆಶೀರ್ವದಿಸಿದೆವಲ್ಲ; ಒಳ್ಳೇರ ಮಾನ ಸಂತೇಲಿ ಹೋಯ್ತು ಅಂದಂಗೆ ತಮ್ಮ ಮಾನ ಯಡ್ಯೂರಪ್ಪನ ನಡೆಯದ ಯುದ್ಧದಲ್ಲಿ ಹೋಯಿತಲ್ಲ ಎಂದು ಬಗೆಬಗೆಯಾಗಿ ಚಿಂತಿಸಿ ಪರಿತಪಿಸುತ್ತಲೂ ಇರಬಹುದು.

ದೇವಮಾನವರ ಪರಿಪಾಟಲು ಈ ರೀತಿಯದ್ದಾದರೆ ಆ ದಯಾಮಯನಾದ ಪರಮಾತ್ಮ, ಪರಮಾತ್ಮೆಯರ ಮಂದಬುದ್ಧಿಗೆ ಈ ರಾಜಕೀಯ ದೊಂಬರಾಟ ಅರ್ಥವೇ ಆಗುತ್ತಿಲ್ಲವಂತೆ. ಎಂತೆಂತಹ ವರಗಳನ್ನೋ ನೀಡಿ ಪಡಬಾರದ ಪಾಡುಪಟ್ಟಿದ್ದರೂ ಕಂಗೆಡದ ರಾಕ್ಷಸೀ ಮನಸ್ಸಿನವರ ದಮನಕ್ಕೆ ಯಾವುದಾದರೂ ಉಪಾಯ ಹೂಡುತ್ತಿದ್ದರೂ ಈ ರಾಜಕೀಯ ರಾಕ್ಷಸರ ಉದ್ದ ಆಳ ಅಗಲ ಒಂದೂ ಅಳೆಯಲಾಗದೆ ಕಂಗಾಲಾಗಿದ್ದಾರಂತೆ.

ಈ ದೇವಾನುದೇವತೆಗಳಿಗೇ ಚಳ್ಳೆಹಣ್ಣು ತಿನ್ನಿಸಿದ ವಿಷಯ ಯಾವುದಪ ಅಂದರೆ... ವಚನಭ್ರಷ್ಟ ಕುಮಾರಸ್ವಾಮಿ, ನೀಚ ದೇವೇಗೌಡ ಅವರ ವಂಶ ನಿರ್ವಂಶ ಆಗಲಿ ಎಂದು ತಾಯಂದಿರಾ ನೀವು ದೇವರಲ್ಲಿ ಹಗಲೂರಾತ್ರಿ ಪ್ರಾರ್ಥನೆ ಮಾಡಿ ಎಂದು

ಅಣಕ

ಎಚ್.ಎಲ್. ಕೇಶವಮೂರ್ತಿ

ಯಡ್ಯೂರಪ್ಪನವರು ಹೋದಹೋದ ಕಡೆ ಎಲ್ಲ ಅಳುಮುಂಜಿ ತರಹ ಮುಖ ಮಾಡಿ ತಮ್ಮ ಮನಸ್ಸಿನ ಆಳದಲ್ಲಿರುವುದನ್ನು ಹೊರಹಾಕಿದರಲ್ಲಾ... ಕರ್ನಾಟಕದ ತಾಯಂದಿರು ಅವರ ಮಾತುಗಳನ್ನು ಕೇಳಿಯೂ ಸುಮ್ಮನಿರಲು ಅವರ ಕರುಳು ಚುರುಕ್ ಎನ್ನಲಾಗಿ ದೇವೇಗೌಡರ ವಂಶ ನಿರ್ವಂಶ ಆಗಲಿ; ಕುಮಾರಸ್ವಾಮಿ ನಿರ್ವಂಶ ಆಗಲಿ ಅಂತ ತಮ್ಮ ತಮ್ಮ ದೇವತೆಗಳಲ್ಲಿ ಅಲವತ್ತುಕೊಂಡಿದ್ದು.... ಅದಾವ ಅಂತರ್ಜಾಲದ ಪ್ರಭಾವವೋ ಎಲ್ಲಾ ದೇವತೆಗಳಿಗೂ ಏಕ್‌ದಂ ತಲುಪಲಾಗಿ... ಭಕ್ತೆಯರ ಅಹವಾಲು ಪರಿಶೀಲಿಸಲು ದೇವ-ದೇವಿಯರ ಸಭೆ ಸೇರಿದಂತೆ. ಆ ದೇವ ಸಭೆಯಲ್ಲಿ ಯಾಕೋ ಏನೋ ಕ್ಷುದ್ರ ದೇವತೆಗಳು ಕಂಡುಬರಲಿಲ್ಲ. ಪ್ರಾಯಶಃ ಅವರಿಗೆ ಯಡ್ಯೂರಿ ಡಿಮಾಂಡು ತಲುಪಿಲ್ಲದಿರಬಹುದು. ಅದು ಹೇಗಾದರೂ ಇರಲಿ. ಶಿಷ್ಟ ದೇವ-ದೇವತೆಯರೆಲ್ಲರೂ ಸಕಲ ವಸ್ತ್ರಭೂಷಣರಾಗಿ ನೆರೆದಿದ್ದರು. ತಮ್ಮ ಭಕ್ತರ ಕೋರಿಕೆಯಂತೆ ದೇವೇಗೌಡ-

"ಅಂಗರೆ ಬಜೆಪಿಗಳು ಕುಂತಿ ಮಕ್ಕಳು ಅನ್ನು?"

"ಅಯ್ಯೋ ಆ ಬಜೆಪಿಗಳ ಯಾರಾರ ಕುಂತಿಮಕ್ಕಳು ಅನ್ನಕ್ಯಾಯ್ತಾರೇನಕ್ಕ? ಅವುರ ನೋಡಿದ್ರೆ ಯಾರಿಗೂ ತೋಲಿಸಕ್ಕಾಗವಿಲ್ಲ ಅಂತ ಜಾಗ ತಲುಪಿದ್ರು ಕಣಕ್ಕ."

"ದಳದೋರು ತಲುಪಿಲ್ಲವೆ?"

"ನೋಡಕ್ಕ ತಲುಪಿದೋರು, ತಲುಪಿಸ್ತೋರು ಯಲ್ಲ ಒಂದೇ ಆಗಿದ್ರು. ಈ ಬಜೆಪಿಗಳು ಈ ಮಟ್ಟದವು ಅಂತ ಯಾರಿಗೂ ಗೊತ್ತಿರಲಿಲ್ಲ, ಇವುರೇನು ಅಂತ ತೋರಿಸಿ ಕೊಟ್ಟ ದೇವೇಗೌಡನಿಗೆ ಥ್ಯಾಂಕ್ ಹೇಳನಾ ಅನ್ನುಸ್ತಾ ಅದೆ."

"ಅವುನಿಗ್ಯಾಕಂಗೇಳ್ತಿಲ. ಒಂದೊಂದು ಸತಿ ಬೈತಿ, ಒಂದೊಂದು ಸತಿ ಹೊಗಳತಿ ನಿನಿಗೇನಾಗ್ಯದ್ಲ."

"ನೋಡಕ್ಕಾ ದ್ಯಾವೇಗೌಡನ ರಾಜಕಾರಣ ಕೇಳಿಕೇಳಿ ನಮ್ಮ ಕಾಳ ದೊಡಪ್ಪ ಸೈಲೆಂಟಾಗಿಬುಟ್ಟ. ಈಗವುನು ದ್ಯಾವೇಗೌಡನ ಪರ ಮಾತಾಡದ್ನೆ ಬುಟ್ಟವುನೆ, ಅಲವೆ ದ್ವಡಪ್ಪ?"

"ಮುಚಗಂಡದೇನೇಳ್ಳ."

"ನೋಡು ದ್ವಡಪ್ಪ ತನ್ನ ವುಗನ ಅವಧಿ ಮುಗಿತಿದ್ದಂಗೆ ದ್ಯಾವೇಗೌಡ ಬಜೆಪಿಗಳನ್ನೆಲ್ಲ ನಾಯಿ ಓಡಿಸಿದಂಗೆ ಓಡಿಸಿ ಮನೆ ಕದ ಹಾಕಿದ. ಪಾಪ ಇವು ಇದನ್ಯಾಯ ಅಂತ ಬೈಕಂಡು ವಂಟೊ. ಅವಿನ್ನೇನು ಸಭೆ ಮಾಡಿ ಜನಕೆ ಅಪ್ಪಮಕ್ಕಳು ಮಾಡಿದ್ದ ಹೇಳ್ತಿವಿ ಅನ್ನೊವತ್ತಿಗೆ ತಿರಗ ಕರದು ಕದ ತಗದ. ಮಾನ ಮರಿಯಾದಿ ಏನಾರ ಇದ್ರೆ ತಿರಗ ಬತ್ತಿದ್ರೆ ದ್ವಡಪ್ಪ?"

"ಇಲ್ಲ ಬುಡು, ಚುನಾವಣೆಗೊಯ್ತಿವಿ ಅನ್ನೊರು."

"ಅಲ್ಲವೆ? ಎಷ್ಟು ಗೌರವ ಇರದು ಯಲಕ್ಷನ್ನಿ ಗೋಯ್ತಿವಿ ಅಂದಿದ್ರೆ. ಈಗ ನೋಡು ದ್ಯಾವೇಗೌಡನ ಮಾತು ಕಟಗಂಡು ತಿರುಗ ದಂಡುಕಟಗಂಡು ಅವುನ ಮನೆತಕ್ಕೋದೊ. ಅವುನು ದಡಿ ತಗಂಡು ನಿಂತವುನೆ ಈಗ ಅಂದ್ರೆ ಅನ್ನಿಸಿಕೊಬೇಕು. ವಡದ್ರೆ ವಡಿಸಿ ಕೊಬೇಕು."

"ಅದ್ಯಾಕ್ವಡದನ್ಲ?"

"ಏ, ಸರಕಾರಕು ಮುನ್ನ ಹನ್ನರಡು ಸೂತ್ರ ಒಪ್ಗಗಳಿ ಅಂದ್ರೆ ಏನಕ್ಕ, ಏಟಲವೆ ಅವು? ಆ ಬಜೆಪಿವು ತಿರಗ ಬಂದ ಕಾರಣಕೆ ಅನ್ನಂಗಿಲ್ಲ ಅನುಬವುಸಂಗಿಲ್ಲ ಅಂಗಾಗ್ಯದೆ."

"ಅದಷ್ಟೆ ಅಲ್ಲ ಕಣೊ ವಾಟಿಸ್ಸೆ. ದ್ಯಾವೇಗೌಡ ಹಿಂಗೆ ಮಾಡಿದ ಅಂತ ತಿರಗ ಬೈಕಂಡು ಜನಗಳತ್ರ ಹೋಗಂಗಿಲ್ಲ. ಅಂಗೇನಾರ ಹೋಗಿ ದ್ಯಾವೇಗೌಡುನ್ನ ಬೋದ್ರೆ ಜನ ಇವುಕೆ ಉಗಿತರೆ; ಅಂಗೆ ಮಾಡಿ ಮಡಿಗ್ಯವುನೆ ಬಜೆಪಿ ಕತೆಯ" ಎಂದು ಉಗ್ರಿ ನಗಾಡಿದ ಮತ್ತೂ ಬದ್ದುಬದ್ದು ನಗತೊಡಗಿದ. ಉಗ್ರಿ ನಗುವ ವೈಖರಿಗೆ ಜುಮ್ಮಿ,

"ಅದ್ಯಾಕ್ಲ ಅಂಗೆ ನಗತಿ?" ಎಂದಳು.

"ಯಾಕಿಲ್ಲ ಕಣೆ, ಆ ಈಶ್ವರ, ಎಡೂರ, ಶಂಕರಮೂರ್ತಿ, ಸದಾನಂದ ಅವುರ ಮುಖ ನ್ಯನಿಸಿಗಂಡೆ. ನಗ ಬತ್ತು" ಎಂದ ಉಗ್ರಿ.

"ಈತರ ಯಾವಾಗ್ಲು ಆಗಿರಲಿಲ್ಲ ಅಲವೆ?" ಎಂದ ಸೀರ.

"ಇಲ್ಲ ಚಿಗಪ್ಪ, ಇಡೀ ದೇಸದಲ್ಲೆ ಇದು ಮೊದ್ಲು. ಅಧಿಕಾರ ಅಂದ್ರೆ ಬಜೆಪಿಗಳು ರೊಟ್ಟಿಬುತ್ತಿಯಿಂದೆ ನಾಯಿ ಹೋದಂಗೆ ಹೋಯ್ತರೆ. ಕಲ್ಲುತಗಂಡು ಬೀರಿದ್ರು ಹೋಗದಿಲ್ಲ. ಇವುರಿಗೆ ಹೋಲಿಸಿದ್ರೆ ಆ ಕಾಂಗ್ಯನವೆ ವಾಸಿ ಅನ್ನದು ಜನಗಳಿಗೆ ಗೊತ್ತಾಯ್ತು."

"ಆ ಕಾಂಗ್ರೆಸ್ಸಿನವು ಏನು ಮಾಡ್ತಯಿದ್ದವೂ?"

"ಅಯ್ಯೋ ಅವುರ ಕತೆ ಬ್ಯಾಡ. ಅಲ್ಲಿ ಲೀಡ್ರುಗಳು ಜಾಸ್ತಿಯಾಗಿಬುಟ್ಟವುರೆ. ಎಂ.ಪಿ. ಪ್ರಕಾಶ ಸರ್ಕಾರ ಮಾಡಿ ಅಂತ ಓಡಾಡಿದೇಟಿಗೆ ಖರ್ಗೆ ಪರಗೆ, ದೇಶಪಾಂಡೆ, ಅವುಳ್ಯಾರೊ ಮಾರ್ಗರೇಟ್ ಆಳುವ ಅನ್ನೋಳು ಮತ್ತೆ ದಿವಂಗತ ರಾಜಶೇಖರನ್, ಮುನಿಯಪ್ಪ ಅವುರ್‍ಯಲ್ಲ ನಾನು ಮುಖ್ಯಮಂತ್ರಿ ಆಯ್ತಿನಿ, ನಾನಾಯ್ತಿನಿ ಅಂತ ಎದ್ದು ನಿಂತಗೊಂಡರಂತೆ. ಪ್ರಕಾಶ್ ಅಲ್ಲಿಂದ ಓಟ ಕಿತ್ತೊನು, ತನ್ನ ಪಾರ್ಟಿ ಆಫೀಸು ಸಿಗೊವರಿಗೂ ನಿಲ್ದಂಗೆ ಓಡಿದರಂತೆ."

"ಈಗ ಅಪ್ಪ ಮಕ್ಕಳಿಗೆ ಪ್ರಕಾಸನ ಕಂಡ್ರೆ ಆಗದಿಲ್ಲವಲ್ಲ, ಯಂಗೆ ಮಾಡ್ತನೆ ಪ್ರಕಾಶ?" ಎಂದ ಸೀರ.

"ಪಾರ್ಟಿಲೆ ಇದ್ದಕಂಡು ವಳ್ಳೆ ಲೀಡ್ರಾಗಬೇಕಾಗ್ಯದೆ."

"ಆದನೆ?"

"ನೋಡಬೇಕು." ■

ಕುಮಾರಸ್ವಾಮಿ ವಂಶನಿರ್ವಂಶ ಮಾಡಲು ಮಾರ್ಗೋಪಾಯಗಳನ್ನು ಕುರಿತು ಚರ್ಚಿಸಿದರು. ಸುದೀರ್ಘ ಸಮಾಲೋಚನೆಯ ನಂತರ ಒಂದು **Action plan workout** ಮಾಡಿದರು. ಅದರ ಅನುಷ್ಠಾನಕ್ಕೆ ಸಿದ್ಧವಾಗಿದ್ದರು.

ಆದರೆ... ತಾವು ಯಾರ ಪರವಾಗಿ ಯೋಜನೆ ಜಾರಿಗೊಳಿಸಬೇಕೆಂದಿದ್ದರೋ ಅವರೇ ಕುಮಾರಸ್ವಾಮಿ, ದೇವೇಗೌಡರಿಗೆ ಶರಣಾಗಿದ್ದರು! ತಮ್ಮ ಭಕ್ತನಿಗೆ ಅಭಯಹಸ್ತ ನೀಡಿರುವವರ ವಂಶ ನಿರ್ವಂಶ ಮಾಡುವುದು ಧರ್ಮಸಮ್ಮತವೇ ಎಂಬ ಸಂದಿಗ್ಧಕ್ಕೆ ಬಿದ್ದರು!

ದೇವಾನುದೇವತೆಗಳು ಸಮಷ್ಠಿಯಾಗಿ ಇಕ್ಕಟ್ಟಿನಲ್ಲಿ ಸಿಲುಕಿರಬೇಕಾದರೆ ಧರ್ಮಸ್ಥಳದ ಮಂಜುನಾಥನನ್ನು ಯಡ್ಯೂರಿ-ಕುಮಾರಸ್ವಾಮಿ ಬೇರೊಂದು ರೀತಿಯಲ್ಲಿ ಕಾಡಿದರು. ಅದ್ಯಾವಪರಿ ಎಂದರೆ ಕೋ-ಜಾ ಸರ್ಕಾರ ರಚಿಸುವುದಕ್ಕೆ ಮುನ್ನ "ಯಡಿಯೂರಪ್ಪ ನನ್ ಬಳಿಗೆ ಬಂದು ನನಗೆ ಶೋಭಾ ಕರಂದ್ಲಾಜೆಗೆ, ಮಂತ್ರಿಪದವಿ ನೀಡುವುದಾದರೆ ಮೂವತ್ತು ಶಾಸಕರೊಂದಿಗೆ ಜಾತ್ಯತೀತ ದಳಕ್ಕೆ ಬರಲು ಸಿದ್ಧ ಎಂದು ಹೇಳಿದ್ದರು" ಎಂಬುದಾಗಿ ಕುಮಾರಸ್ವಾಮಿ ಯಡ್ಯೂರಿ ಚಡ್ಡಿಗೆ ಕೈಹಾಕಿದರು. ಧರ್ಮಯುದ್ಧ ಹೂಡಿದ್ದ ಯಡ್ಯೂರಪ್ಪ ಚಡ್ಡಿ ಉದುರದಂತೆ ತಡೆಯಲು ಬರೀ ಮಾತಿನಲ್ಲಿ ಹೇಳಿದರೆ ಹಾಳಾದ ಜನ ನಂಬಬೇಕಲ್ಲ, ಅದಕ್ಕೆ ದೇವರನ್ನು ಎಳೆದುತಂದರು. "ಭಗವಂತನ ಮೇಲೆ ಪ್ರಮಾಣ ಮಾಡಿ ಹೇಳ್ತೀನಿ ನಾನು ಈ ರೀತಿ ಹೇಳಿಲ್ಲ, ನಾನು ಹೇಳಿದ್ದೇ ಎಂದು ಸಾಧಿಸುವುದಾದರೆ ಸನ್ಮಾನ್ಯ ಕುಮಾರಸ್ವಾಮಿ ಯವರೂ ಬರಲಿ; ನಾನೂ ಬರುತ್ತೇನೆ. ಇಬ್ಬರೂ ಹೋಗಿ ಧರ್ಮಸ್ಥಳದ ಮಂಜುನಾಥನ ಮೇಲೆ ಪ್ರಮಾಣ ಮಾಡೋಣಂತೆ" ಎಂದು ಪಂಥಾಹ್ವಾನ ನೀಡಿದರು. ಅದಕ್ಕೆ ಪ್ರತಿಕ್ರಿಯಿಸಿದ ಕುಮಾರಸ್ವಾಮಿ ನಾನು ಬರಲು ಸಿದ್ಧ; ವೇಳೆ ದಿನಾಂಕ ತಿಳಿಸಿ ಎಂಬುದು ಸವಾಲು ಹಾಕಿದರು. ಇದನ್ನೆಲ್ಲ ದಿವ್ಯದೃಷ್ಟಿಯಿಂದ ಗ್ರಹಿಸಿದ ಮಂಜುನಾಥಸ್ವಾಮಿ ಇವರೀರ್ವರ ಇಹ-ಪರ ಸಂಗ್ರಹಿಸಲು ಶಿಷ್ಯ ಭೂತಗಳಿಗೆ ಆಜ್ಞೆ ಮಾಡಿದ. ಯಾಕೆಂದರೆ ಜಡ್ಜ್‌ಮೆಂಟ್ ಕೊಡಬೇಕಾದರೆ ಸಾಕ್ಷಿ, ಪುರಾವೆಗಳಿರಬೇಕಲ್ಲ, ಅದಕ್ಕೆ. ಆದರೆ ತನ್ನ ಬಳಿಗೆ ಬರದೇ ಇವರೀರ್ವರೂ ರಾಜಿ ಮಾಡಿಕೊಂಡಿದ್ದ ಸತ್ಯ ಬಯಲಾಗಲೇ ಇಲ್ಲ! ಈಗ ಆ ದೇವರ ಸಂಕಟ ಏನು ಅಂದರೆ... ಈ ಧೂರ್ತರ ಚರಿತ್ರೆ ಸಂಗ್ರಹಿಸಲು ಶಿಷ್ಯಭೂತಗಳು ಕಾಲ-ಶ್ರಮ ವ್ಯಯ ಮಾಡಿದ್ದವು. ಅದು ವ್ಯರ್ಥವಾಯಿತು. ಇದು ಹಾಳಾಗಲಿ. ಇನ್ನು ಮುಂದೆ ಇದೇ ದಾರಿ ಹಿಡಿದು ಭಕ್ತರೆಲ್ಲರೂ ವ್ಯಾಜ್ಯಗಳನ್ನು ತಾವೇ ಪರಿಹರಿಸಿಕೊಂಡರೆ ತನ್ನ ಅಸ್ತಿತ್ವಕ್ಕೆ ಧಕ್ಕೆ ಬರುವುದಲ್ಲಾ...

ಕನ್ನಡ ದೇವರುಗಳು ಈ ಪರಿ ಸಂಕಟದಲ್ಲಿ ಸಿಕ್ಕಿ ಪರದಾಡುತ್ತಿರಲಾಗಿ ಇತರೆ ಭಾಷೆಯ ದೇವರುಗಳ ಪಾಡೇ ಒಂದು ತರಹ ಇದೆ. ದೈವಭಕ್ತನ ವೇಷದಲ್ಲಿ ಈ ಮನುಷ್ಯ ಮಲೆಯಾಳಿ ದೇವರಿಗೂ ಅಡ್ಡ ಬೀಳ್ತಾನೆ; ತಮಿಳು ದೇವರಿಗೂ ಕೈಮುಗೀತಾನೆ; ತೆಲುಗು ದೇವರಿಗೂ ಮೊರೆ ಹೋಗ್ತಾನೆ. ಅದೇನೇನೋ ಆಗಬೇಕು ಅಂತ ಕನ್ನಡದಲ್ಲಿ ಕೇಳಿಕೊಳ್ತಾನೆ. ಅವನ ಬೇಡಿಕೆಯೊಂದೂ ನಮಗೆ ತಿಳೀಲೇ ಇಲ್ಲ ಅಂತ ತಲ್ಯಾಕೋಣ ಅಂದರೆ ಈ ಹಾಳಾದ ಪೂಜಾರಿಗಳು ನಮ್ಮ ಭಾಷೇಲೇ ವಿವರಿಸುತ್ತಾರೆ. ಹಾಳಾಗಲಿ ಇವನ ಬೇಡಿಕೇನ ಈಡೇರಿಸೋಣ ಅಂದರೆ ಸೀತಾರಾಮಯೆಚೂರಿ ಅನ್ನೋ ನಾಸ್ತಿಕ 'ಈ ಮನುಷ್ಯ ವಿಶ್ವಾಸಾರ್ಹ ಅಲ್ಲ' ಅಂದಿದಾನೆ. ಚಾರ್ವಾಕ ವಂಶಜರ ಮಾತನ್ನು ಸುಲಭದಲ್ಲಿ ತೆಗೆದುಹಾಕೋ ಹಾಗಿಲ್ಲ. ದೇವರ ಮೇಲೆ ನಂಬಿಕೆ ಇಲ್ಲದಿದ್ದರೂ ಸತ್ಯಾನೆ ನುಡೀತವೆ. ಭಕ್ತರ ತರಹ ಈಗೊಂದು, ಇನ್ನೊಂದುಗಳಿಗೆ ಇನ್ನೊಂದು ಮಾತಾಡೋಲ್ಲ, ಅದೂ ಅಲ್ಲದೆ ಕೂಡಾವಳಿ ಮಾಡ್ಕಳಿ ನಂದು ಯಾವುದೇ ಪರತ್ತಿಲ್ಲ ಅಂತ ಮಗನ ಮದುವೆಗೆ ಒಪ್ಗಿಗೆ ನೀಡಿದ್ದ ಈ ಮನುಷ್ಯ ತಾಳಿ ಕಟ್ಟೋ ಸಮಯ ಇನ್ನೇನು ಬಂದೇಹೋಯ್ತು ಅಂತಿದ್ದಾಗ 'ಅಭಿವೃದ್ಧಿ ರಂಗದ ಸುಖಸಂಸಾರಕ್ಕೆ ಹನ್ನೆರಡು ಸೂತ್ರಗಳು' ಅಂತ ಪರತ್ತು ಹಾಕಿದಾನೆ ಅಂತ ಎಲ್ಲಾ ಭಾಷೆಯ ಪತ್ರಿಕೇಲೂ ಬಂದಿದೆಯಂತೆ. ಹಾಳಾದ ಈ ಯೆಚೂರಿ ಎಂಬ ನಾಸ್ತಿಕನ ಮಾತೇ ನಿಜ ಆಯಿತು ಅಥವಾ ಈ ಮನುಷ್ಯ ನೈಜಭಕ್ತನೇ ಇರಬಹುದು. ಆತನ ಬೇಡಿಕೆಯನ್ನು ತಿಳಿಸುವಾಗ ಪೂಜಾರಿ ಎಂಬ ದುಭಾಷಿ ಅದೇನು ಹೇಳಿದನೋ. ಇಂತಹ ತಾಪತ್ರಯವೇ ಬೇಡ. ಅವರವರ ಭಾಷೆ ದೇವರು ಅವರವರ ಭಕ್ತರ ಉಸಾಬರಿ ನೋಡಿಕೊಳ್ಳಲಿ ಅಂತ ಠರಾವು ಮಂಡಿಸೋಣ ಅಂದರೆ ಹಾಳಾದ ಭಾಷೆ ಅಂತ ಒಂದಿದೆ. ಇತರೆ ದೇವರುಗಳ ಜೊತೆ **communicate** ಮಾಡೋದು ಹೇಗೆ ಅನ್ನೋದು ಸಮಸ್ಯೆ...

ಪಾಪ ದೇವರುಗಳ ಈ ಪರಿಪಾಟಲು ಯಾರಿಗೂ ಬರಬಾರದು ಅಲ್ಲವಾ.... ■

ಕಟ್ಟಡ ಮತ್ತು ಜನ

ಮರೆಯುವ ಮುನ್ನ



ಪಿ. ಲಂಕೇಶ್ - ಜೂನ್ 4, 1989

ಸ್ವಾಮಿ ಎಂಬ ಒಬ್ಬರು.

ಈತ ಕೊಳೆಗೇರಿಗಳ ಸಂಘಕ್ಕೆ ನಾಯಕ. ತುಂಬ ವ್ಯವಹಾರಜ್ಞಾನದ ಸ್ವಾಮಿ ಸೂಕ್ಷ್ಮವಾಗಿ ಯೋಚಿಸಬಲ್ಲವರು ಕೂಡ. ಇದ್ದಕ್ಕಿದ್ದಂತೆ ಸ್ವಾಮಿ ಮಾತಿನ ಮಧ್ಯೆ "ಈ ಕಟ್ಟಡಗಳ ಕಾರ್ಮಿಕರ ಬದುಕಿನ ವೈಚಿತ್ರ್ಯದ ಬಗ್ಗೆ ಯೋಚಿಸಿದ್ದೀರಾ?" ಅಂದರು.

ನನಗೆ ಗೊತ್ತಿದ್ದುದು ಹೇಳಿದೆ: "ಇವರು ಅಸಂಘಟಿತ ಜನ. ಇದ್ದಕ್ಕಿದ್ದಂತೆ ಒಂದೆರಡು ದಿನ ಕೆಲಸವಿಲ್ಲವಾದರೆ ತಮ್ಮ ಸಂಘದ ಕಚೇರಿಗೆ ಫೋನ್ ಮಾಡಿ ಕೆಲಸವಿದೆಯೋ ಎಂದು ಕೇಳುವ ಸವಲತ್ತು ಕೂಡ ಇವರಿಗಿಲ್ಲ. ಮೇಸ್ತ್ರಿಗಳನ್ನು, ಕಾಂಟ್ರಾಕ್ಟರುಗಳನ್ನು ಹುಡುಕಿಕೊಂಡು ಅಲೆಯುತ್ತಾರೆ" ಅಂದೆ.



ಸ್ವಾಮಿ ತಮ್ಮ ಗ್ರಹಿಕೆ ಹೇಳಿದರು: "ಅದು ಸರಿ, ಆದರೆ ಈ ಕಟ್ಟಡಗಳ ಕೆಲಸಗಾರರು ಎಷ್ಟು ಅಸಹಾಯಕರೆಂಬುದನ್ನು ಇತರೇ ಕೆಲಸಗಾರರಿಗೆ ಹೋಲಿಸಿ ಕಂಡುಕೊಳ್ಳಬೇಕು. ಕಾರ್ಮಿಕನೊಬ್ಬ ಸೋಪ್ ಮಾಡುತ್ತಾನೆನ್ನಿ, ಆತ ತಯಾರಿಸಿದ ಸೋಪು ಎಲ್ಲೆಲ್ಲೋ ಅಲೆದು ಮಾರಾಟವಾಗುತ್ತದೆ. ಇನ್ನೊಬ್ಬ ತಯಾರಿಸಿದ ಊದಿನ ಕಡ್ಡಿ ಕೂಡ ಎಲ್ಲೆಲ್ಲೋ ಹೊತ್ತಿಕೊಂಡು ಹೊಗೆ ನೀಡುತ್ತದೆ. ಆದರೆ ಕಟ್ಟಡದ ಕಾರ್ಮಿಕ ನಿರ್ಮಿಸಿದ ಕಟ್ಟಡ ಇದ್ದಲ್ಲೇ ಇರುತ್ತದೆ. ಕಾರ್ಮಿಕ ಮಾತ್ರ ಕೆಲಸ ಹುಡುಕುತ್ತ ಸೋಪಿನಂತೆ, ಊದುಬತ್ತಿಯಂತೆ ಅಲೆಯುತ್ತಾನೆ. ಕಾಂಟ್ರಾಕ್ಟರುಗಳು ಶ್ರೀಮಂತರಾಗಿ ಬೇರುಬಿಡುತ್ತಾರೆ; ಕಾರ್ಮಿಕರು ಅಲೆದು ನಾಶವಾಗುತ್ತಾರೆ."

"....ಪ್ರತ್ಯಕ್ಷ ದೇವತಾ"



ಈ ದೇಶದ ಜನರನ್ನು ತಿಳಿದುಕೊಳ್ಳುವಾಗ ಕೆಲವು ಚಿಕ್ಕ ಘಟನೆಗಳು ಕೂಡ ನೆರವಾಗುತ್ತವೆ. ಅವುಗಳಲ್ಲೊಂದು ಈ ದೇಶಕ್ಕೆ ಕಾಲಿಟ್ಟೊಡನೆ ಅಲೆಗ್ಸಾಂಡರನಿಗೆ ಆದದ್ದು.

ಅಲೆಗ್ಸಾಂಡರ್ ನಿಜವಾದ ಶೂರ. ಯುದ್ಧ ಕಲೆಯನ್ನು ಕರಗತ ಮಾಡಿಕೊಂಡು ಗ್ರೀಸಿನಿಂದ ಪೂರ್ವಕ್ಕೆ ದಂಡೆತ್ತಿ ಬಂದ ಈತ ತನ್ನ ದಾರಿಯಲ್ಲಿ ಸಿಕ್ಕ ದೇಶಗಳನ್ನೆಲ್ಲ ವಶಪಡಿಸಿಕೊಂಡ. ಧರ್ಮಯುದ್ಧ ಎಂದು ಭಾರತ ಇನ್ನೂ ನಂಬಿದ್ದಾಗ ಈತ ಯುದ್ಧದ ಎಲ್ಲ ತಂತ್ರಗಳನ್ನೂ ಬಳಸಿದ. ಗೆಲ್ಲುವುದೊಂದೇ ಈತನ ಉದ್ದೇಶ. ಪೂರೂರವ ಮತ್ತು ಈತನಿಗಾದ ಸಂಭಾಷಣೆ ಎಲ್ಲರಿಗೆ ಗೊತ್ತಿದೆ. ಪೂರೂರವ ಅಲೆಗ್ಸಾಂಡರನಿಗೆ ವಿಚಿತ್ರವಾಗಿ ಕಂಡಿರಬೇಕು. ಯಾಕೆಂದರೆ ದೊರೆ ಎಂಬ ಕಾರಣಕ್ಕೆ ಭಾರತೀಯರ ದೃಷ್ಟಿಯಲ್ಲಿ ಪ್ರತ್ಯಕ್ಷ ದೇವರೇ ಆಗಿದ್ದ ಪೂರೂರವ ಅಲೆಗ್ಸಾಂಡರನಿಗೆ ಸೋತು ಸಾಮಾನ್ಯ ಮನುಷ್ಯನಾಗಿದ್ದ.

ಭಾರತದಲ್ಲಿ ಗೆಲ್ಲತೊಡಗಿದೊಡನೆ ಅಲೆಗ್ಸಾಂಡರನಲ್ಲಿ ವಿಚಿತ್ರ ಬದಲಾವಣೆಗಳಾಗತೊಡಗಿದವು. ಈತ ಚಕ್ರವರ್ತಿ, ಆದ್ದರಿಂದ ಭಾರತೀಯರ ದೃಷ್ಟಿಯಲ್ಲಿ ಈತ ದೇವರು. ಆತನನ್ನು ಹಾಗೆ ಪರಿಗಣಿಸಿದರು, ಗೌರವಿಸಿದರು. ಅಲೆಗ್ಸಾಂಡರನಿಗೂ ತಾನು ದೇವರೇ ಇರಬೇಕೆಂದು ಅನುಮಾನ ಬರತೊಡಗಿತು. ಈ ಬಗ್ಗೆ ತನ್ನ ಜೊತೆಗಿದ್ದ ಗ್ರೀಕ್ ಗೆಳೆಯರೊಂದಿಗೆ, ತಮ್ಮನೊಂದಿಗೆ ಚರ್ಚಿಸಿದ. ಅಂದರೆ, ಅವರು ತಾನು ದೇವರೆಂದು ಹೇಳಬೇಕೆಂದು ಬಯಸಿದ. ಆದರೆ ಆತನ ಗ್ರೀಕ್ ಸಹಚರರು ಆತನನ್ನು ದೇವರೆಂದು ತಿಳಿಯಲು ಹಿಂಜರಿದರು. ಭಾರತೀಯರು ಮಾತ್ರ ದೇವರೆಂದೇ ಗೌರವ ಮುಂದುವರಿಸಿದರು.

ಭಾರತದ ವಾತಾವರಣದಲ್ಲಿ ಮನುಷ್ಯನಾಗಿ ಶ್ರೇಷ್ಠನಾಗಬೇಕೆಂದಿದ್ದ ಅಲೆಗ್ಸಾಂಡರ್ ದೇವರಾಗಲು ನಿರ್ಧರಿಸಿದ. ತಾನು ದೇವರಲ್ಲ ಎಂದು ಹೇಳಿದ ಮಿತ್ರನನ್ನು ಕೊಂದುಹಾಕಿದ; ಆದರೂ ಅಲೆಗ್ಸಾಂಡರಿಗೂ ತಾನು ದೇವರು ಎಂಬ ಬಗ್ಗೆ ಅನುಮಾನ. ಕುಡಿದ ಮತ್ತಿನಲ್ಲಿ ಮಿತ್ರನನ್ನು ಕೊಂದದ್ದಕ್ಕೆ ಪರಿತಪಿಸಿದ. ಆಶೆ, ಸಂದೇಹದ ಇಕ್ಕಟ್ಟಿನಲ್ಲಿ ಸಿಕ್ಕಿಹಾಕಿಕೊಂಡ ಅಲೆಗ್ಸಾಂಡರ್ 'ನೀನು ದೇವರಲ್ಲ' ಎಂದು ಹೇಳಿದ ಸೋದರನನ್ನು ಬಂಧಿಸಿದ. ಆತ ಬಂಧನದಲ್ಲೇ ಅಸುನೀಗಿದ. ಅಲೆಗ್ಸಾಂಡರನ ವ್ಯಕ್ತಿತ್ವ ವಿಚಿತ್ರ ರೂಪ ಪಡೆಯತೊಡಗಿತ್ತು. ದೇವರಾಗಲು ಯತ್ನಿಸಿ ಮೇಲೇರಿದಂತೆಲ್ಲ ಆತ ಮನುಷ್ಯನಾಗಿಯೇ ಕೆಳಗೆ ಇಳಿಯತೊಡಗಿದ.

ಈ ವಿಚಿತ್ರ ವಸ್ತುವನ್ನು ಪುಟ್ಟ ಕತೆಯಾಗಿಸಿರುವ ಮಾಸ್ತಿಯವರು ಅಲೆಗ್ಸಾಂಡರನ ಮೇಲೆ ಭಾರತದ ಪ್ರಭಾವ ಕುರಿತು ಹೆಚ್ಚು ವಿವರಿಸಿಲ್ಲ. ಆದರೆ ಈ ದೇವತೆ-ಮನುಷ್ಯ ಪ್ರಾಣಿಯನ್ನು ಕುರಿತು ಹೀಗೆ ಬರೆದಿದ್ದಾರೆ:

"ಮಾನವನು ಒಳ್ಳೆಯ ಮಾನವನಾಗಬೇಕು. ಮಾನವನಾಗಿ ಹುಟ್ಟಿದವನಿಗೆ ದೇವನಾಗಬೇಕೆನ್ನುವುದು ಮೃಗವಾಗಬೇಕೆನ್ನುವಷ್ಟೇ ಅನುಚಿತ ಆಕಾಂಕ್ಷೆ.

"ಒಳ್ಳೆಯ ಮಾನವನಾಗುವುದು ಎಷ್ಟು ಕಷ್ಟ ಎಂದು ಲೋಕ ಕಾಣದು. ಬೇಕೆಂದರೆ ಮನುಷ್ಯನು ದೇವರೇ ಆಗಬಹುದೇನೋ. ಒಳ್ಳೆಯ ಮನುಷ್ಯನಾಗುವುದು ಅದಕ್ಕಿಂತ ಕಷ್ಟ.

"ದೈವ... ಅದರ ಮುಖ್ಯ ಗುಣ ನಮ್ಮ ಇಂದ್ರಿಯ, ಮನಸ್ಸು, ಬುದ್ಧಿಗಳಿಂದ ಸೋಕಬಹುದಾದ ನಿಶಾಂತ ದೂರದಿಂದ ಅತೀತವಾಗಿರುವುದು. ಅದು ಮನುಷ್ಯನಂತೆ ಒಂದು ವ್ಯಕ್ತಿ ಅಲ್ಲ. ಮನುಷ್ಯನಂತೆ ಒಂದು ವ್ಯಕ್ತಿ ಎನ್ನಬಹುದಾದರೆ, ನಾಯಿಯಂತೆ ಒಂದು ಜೀವವೂ ಆಗಬೇಕು. ಹುಳುವಿನಂತೆ ಜಂತುವೂ ಆಗಬೇಕು. ಇದಿಷ್ಟೂ ಏಕೆ ಆಗಬಾರದೆಂದರೆ ಈ ಮೂರರಲ್ಲಿ ಯಾವ ಒಂದೂ ಬೇರೊಂದು ಆಗಲಾರದು."

ಹೊಗಳುಭಟ್ಟರು, ವ್ಯಕ್ತಿ ಪೂಜೆಗೆ ಒಲಿಯುವವರು, ಶ್ರೀರಾಮುನಂಥವರು ದೇವರೋ ಮನುಷ್ಯನೋ ಎಂದು ಕೂಡ ಸ್ಪಷ್ಟವಿಲ್ಲದವರು, ತನಗಿಂತ ಮೇಲಿನ ಸ್ಥಾನದಲ್ಲಿರುವವರೆಲ್ಲ ಪ್ರತ್ಯಕ್ಷ ದೇವತೆ ಎಂದು ನಡುಬಗ್ಗಿಸುವವರು-ಅಲೆಗ್ಸಾಂಡರನನ್ನು ದೇವರೆಂದು ಕರೆದು ಬಿಕ್ಕುತಪ್ಪಿಸಿದ್ದು ಎಲ್ಲರಿಗೆ ಎಂಥ ಪಾಠ!

ಶಬರಿಗೊಂಡು ಬಣ್ಣದ ಗರಿ



ಸರ್ಕಾರಿ ಶಾಲೆ ಕಾಲೇಜುಗಳೆಂದರೆ ದನದ ದೊಡ್ಡಿಗಳೆಂದು ಹೀಗಳೆಯುವ ಈ ದಿನಗಳಲ್ಲಿ ದಾವಣಗೆರೆಯ ಸರ್ಕಾರಿ ಪದವಿ ಕಾಲೇಜು ಇತ್ತೀಚಿಗೆ ಪ್ರಾರಂಭವಾದರೂ ನ್ಯಾಕ್‌ನಿಂದ 'ಬ' ಮಾನ್ಯತೆಯನ್ನು ಪಡೆದು ಅತ್ಯಧಿಕ ವಿದ್ಯಾರ್ಥಿಗಳ ದಾಖಲಾತಿಯನ್ನು ಹೊಂದಿದೆ. ಪ್ರಾರಂಭದಲ್ಲಿ ಅರೆಕಾಲಿಕ ಉಪನ್ಯಾಸಕರನ್ನೇ ಅವಲಂಬನೆಗೊಂಡು ಬೆಳೆದ ಈ ಕಾಲೇಜಿಗೆ ಸೇರಲು ಬರುವ ವಿದ್ಯಾರ್ಥಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ದುಪ್ಪಟ್ಟಾಗುತ್ತಿದೆ. ದಾವಣಗೆರೆಯಂತಹ ವಾಣಿಜ್ಯ ನಗರಿಯಲ್ಲಿ 1992-93ರವರೆಗೂ ಸರ್ಕಾರಿ ಪದವಿ ಕಾಲೇಜಿರಲಿಲ್ಲವೆಂದರೆ ಓದುಗರು ನಂಬಲೇ ಬೇಕು! ಏಕೆಂದರೆ ಇಲ್ಲಿನ ಪ್ರೈಮರಿ ಶಿಕ್ಷಣದಿಂದ ಮೊದಲಾಗಿ ಉನ್ನತ ಶಿಕ್ಷಣದವರೆಗೆ ತಮ್ಮ ಹಿಡಿತವನ್ನು ಸ್ಥಾಪಿಸಿರುವ ಖಾಸಗಿ ಶಿಕ್ಷಣ ಸಂಸ್ಥೆಗಳೇ ಇಂತಹ ಸ್ಥಿತಿಗೆ ನೇರವಾಗಿ ಕಾರಣವಾಗಿವೆ. ಯಾವಾಗ ಇಲ್ಲಿ ಸರ್ಕಾರಿ ಪದವಿ ಕಾಲೇಜು ಸ್ಥಾಪನೆಯಾಯಿತೋ ಆವಾಗಿನಿಂದ ವಿಶೇಷವಾಗಿ ಸುತ್ತಮುತ್ತಲಿನ ಗ್ರಾಮಗಳ ಮತ್ತು ನಗರದ ಬಡ ವಿದ್ಯಾರ್ಥಿಗಳು ಡೊನೇಷನ್ ಹಾವಳಿ ಮತ್ತು ದುಬಾರಿ ಫೀಜುಗಳಿಂದ ವಿಮುಕ್ತಿ ಪಡೆದಿದ್ದಾರೆ.

ಕಳೆದ ಅಕ್ಟೋಬರ್ 29ರಂದು ದಾವಣ ಗೆರೆಯ ಸರ್ಕಾರಿ ಪದವಿ ಕಾಲೇಜಿನಲ್ಲಿ 'ಶಬರಿ ಹಬ್ಬ'ವನ್ನು ಆಚರಿಸಲಾಯಿತು. ಚಿತ್ರಕಲೆ, ನಾಟಕ, ಸಂಗೀತಗಳನ್ನು ಮಾನಸಿಕ ಸಂಭ್ರಮದೊಂದಿಗೆ ಆಚರಿಸಬೇಕು ಮತ್ತು ನಾಲ್ಕು ಗೋಡೆಗಳ ಚೌಕಟ್ಟಿನಿಂದ ಹೊರಬಂದು ಪಠ್ಯವನ್ನು ಸ್ವೀಕರಿಸಬೇಕೆಂಬ ಉದ್ದೇಶದಿಂದ ಈ ವರ್ಷದ ಪದವಿ ತರಗತಿಗೆ ಕುವೆಂಪು ವಿಶ್ವ ವಿದ್ಯಾನಿಲಯವು ಪಠ್ಯವಾಗಿಸಿರುವ ಬರಗೂರು ರಾಮಚಂದ್ರಪ್ಪನವರ 'ಶಬರಿ' ಕಾದಂಬರಿಯನ್ನು ನಾಟಕ ರೂಪಕ್ಕೆ ತಂದು, ವೃತ್ತಿಪರ ಕಲಾವಿದರೇ ಅಲ್ಲದ ವಿದ್ಯಾರ್ಥಿಗಳನ್ನು ಆ ನಾಟಕದ ಪಾತ್ರಧಾರಿಗಳನ್ನಾಗಿಸಿದ್ದೇ ಅಲ್ಲದೆ 'ಶಬರಿ' ಕಾದಂಬರಿಯಲ್ಲಿ ಬರುವ ಹಲವಾರು ಘಟನೆಗಳ ಬಗೆಗೆ ವಿದ್ಯಾರ್ಥಿಗಳ ಮೂಲಕ ಚಿತ್ರಗಳನ್ನು ಬರೆಯಿಸಿ ಅವುಗಳನ್ನು ಪ್ರದರ್ಶನಕ್ಕಿಟ್ಟು ದೇಸಿ ನೆಲೆಗಟ್ಟಿನಲ್ಲಿ ಅದರಲ್ಲೂ ವಿಶೇಷವಾಗಿ ಬುಡಕಟ್ಟು ಸಂಸ್ಕೃತಿಯ ಪ್ರತೀಕಗಳನ್ನೇ ವಿಜೃಂಭಿಸಿ 'ಶಬರಿ ಹಬ್ಬ'ವನ್ನು ಆಚರಿಸಲಾಯಿತು. ಅತಿಥಿಗಳಿಗೆ ಹಾರ ತುರಾಯಿಗಳನ್ನು ಹಾಕದೇ ಬದಿರು ಬುಟ್ಟಿಗಳಲ್ಲಿ ಹೂವು - ಹಣ್ಣು ಮತ್ತು ವಿಶೇಷವಾಗಿ ಜನಸಾಮಾನ್ಯರ ಒಪ್ಪಂದಗಳ ಸಂಕೇತವಾದ ವೀಳ್ಯವನ್ನು ಕೊಡುವುದರ ಮೂಲಕ ಶಬರಿ ಕಾದಂಬರಿಯ ಬಗ್ಗೆ ಸಂವಾದ, ಶಬರಿ ನಾಟಕ ಮತ್ತು ಚಿತ್ರಕಲಾ ಪ್ರದರ್ಶನ, ಕಾಲೇಜಿನ ಕನ್ನಡ ಸಂಘದ ಉದ್ಘಾಟನೆ ಮುಂತಾದ ಕಾರ್ಯಕ್ರಮಗಳನ್ನು 'ಶಬರಿ' ಹಬ್ಬದ ವೇದಿಕೆಯಲ್ಲಿ ಅತ್ಯಂತ ಸರಳ ಹಾಗೂ ಅರ್ಥಪೂರ್ಣತೆಯಿಂದ ಆಚರಿಸಲಾಯಿತು.

ಶಬರಿ ನಾಟಕ

'ಶಬರಿ' ಕಾದಂಬರಿಯನ್ನು ನಾಟಕ ರೂಪಕ್ಕೆ ತಂದವರು ನಾಟಕ ಕಲಾವಿದ ಹೆಗ್ಗೆರೆ ರಂಗಪ್ಪ, ನಾಟಕದ ಒಟ್ಟು ವಿನ್ಯಾಸ ನಿರ್ದೇಶನವನ್ನು ಎಂ. ಪ್ರಸನ್ನ ಕುಮಾರ್ ಮಾಡಿದರು. ದೊರೆತ ಬಹಳ ಕಡಿಮೆ ಅವಧಿಯಲ್ಲೇ 'ಶಬರಿ' ನಾಟಕಕ್ಕೆ ಸಂಭಾಷಣೆಯನ್ನು ಬರೆದು ವಿದ್ಯಾರ್ಥಿಗಳಲ್ಲೇ ಪಾತ್ರಧಾರಿಗಳನ್ನು ಆಯ್ಕೆ ಮಾಡಿಕೊಂಡು ಕೇವಲ ನಾಲ್ಕೈದು ದಿನಗಳಲ್ಲೇ ವಿದ್ಯಾರ್ಥಿಗಳಲ್ಲಿನ ಅದ್ಭುತ ಪ್ರತಿಭೆಯನ್ನು ಹೊರತಂದಿದ್ದು ಮಾತ್ರ ಆಶ್ಚರ್ಯ ತರಿಸುವ ಸಂಗತಿಯಾಗಿತ್ತು. ಈ ನಾಟಕದಲ್ಲಿ ಪಾತ್ರಗಳನ್ನು ಮಾಡಿದ ವಿದ್ಯಾರ್ಥಿಗಳಲ್ಲಿ ಶೇ. 99 ರಷ್ಟು ಮಂದಿ ದೈನಂದಿನ ದುಡಿಮೆಯ ಮೇಲೆಯೇ ಆಧಾರಗೊಂಡ ವಿದ್ಯಾರ್ಥಿಗಳಾಗಿದ್ದುದು 'ಶಬರಿ' ಕಾದಂಬರಿ ಕಥಾವಸ್ತುವಿಗೆ ಸಾಕ್ಷಿಯಾದಂತಿತ್ತು.

ನಾಟಕ ಕಲಿಸುವ ಪ್ರಯತ್ನದಲ್ಲಿ ಅದೆಷ್ಟೇ ಒತ್ತಡ ಹೇರಿದರೂ ವಿದ್ಯಾರ್ಥಿಗಳು ಅಲ್ಲಿ ನಿಲ್ಲುವ ಪರಿಸ್ಥಿತಿ ಇರಲಿಲ್ಲ. ಎಂ.ಎಲ್.ಎ. ಪಾತ್ರಧಾರಿ ಲಕ್ಷ್ಮೀಪತಿ ಪಾನಿಪೂರಿ ಅಂಗಡಿಯನ್ನು ಪ್ರತಿನಿತ್ಯ ನಡೆಸದಿದ್ದರೆ ಮನೆ ಮಂದಿಯ ಹೊಟ್ಟೆಗೆ ತಣ್ಣೀರು ಬಟ್ಟೆಯೇ ಗತಿಯಾಗುತ್ತಿತ್ತು. ಹಾಗಾಗಿ ಆತ ನಿಗದಿತ ಸಮಯಕ್ಕೆ ಮುಂಚೆಯೇ ಓಡುತ್ತಿದ್ದ. ಪೊಲೀಸ್ ಪಾತ್ರ ಮಾಡಿದ ಹುಡುಗ ಶಿವಕುಮಾರ್ ಮನೆಮನೆಗಳಿಗೆ ಪೇಪರ್ ಹಾಕುವವನು. ನಾಟಕ ಪ್ರದರ್ಶನ ದಿನದ ಬೆಳಗ್ಗೆ ಓದು-ಕೆಲಸ ಹಾಗೂ ನಾಟಕ ತರಬೇತಿಯ ಒತ್ತಡಗಳಿಂದಾಗಿ ಒಂದೇ ಮನೆಗೆ ಮೂರು ಬಾರಿ ಪೇಪರ್ ಹಾಕಿದ್ದ. ಹೀಗೆಯೇ ಉಳಿದ ಬಹುತೇಕ ಪಾತ್ರಧಾರಿ ವಿದ್ಯಾರ್ಥಿಗಳು ಪಾರ್ಟ್‌ಟೈಂ ಕೆಲಸ ಮಾಡಿಕೊಂಡಿದ್ದವರು. ಇಂತವರಿಗೆ ಕೇವಲ ನಾಲ್ಕೈದು ದಿನಗಳ ಕಾಲ ದಿನಕ್ಕೆ ಆರೇಳು ಗಂಟೆ ಮಾತ್ರ ತರಬೇತಿ ನೀಡಿ ನಾಟಕವನ್ನು ಯಶಸ್ವಿಗೊಳಿಸುವುದು ಸುಲಭದ ಮಾತಾಗಿರಲಿಲ್ಲವಾದರೂ ಹೆಗ್ಗೆರೆ ರಂಗಪ್ಪ, ಪ್ರಸನ್ನ ಕುಮಾರ್, ಕ್ರಿಸ್ತಾನಂದ, ಬಸವರಾಜಪ್ಪ, ಬಾನಪ್ಪ, ಮಳಲಕೆರೆ ನಾಗರಾಜ ಮುಂತಾದವರು ನಾಟಕ ಯಶಸ್ವಿಯಾಗಲು ಶ್ರಮಿಸಿದರು.

ನಾಟಕದಲ್ಲಿ ಮಹಿಳೆಯರ ಪಾತ್ರಗಳನ್ನು ಮಾಡಿದ ರಾಜೇಶ್ವರಿ, ನಳಿನಿ, ಶಶಿಕಲಾ, ಭಾರತಿ ಮುಂತಾದವರು ಮತ್ತು ಪುರುಷರ ಪಾತ್ರಗಳನ್ನು ಮಾಡಿದ ದಿ. ನಾಗಪ್ಪ, ಜಯಕುಮಾರ್, ವೀರೇಶ್, ಅಣ್ಣಪ್ಪ, ಶಿವಕುಮಾರ್, ಲೋಹಿತ್ ಕುಮಾರ್, ಅರುಣ್ ಕುಮಾರ್, ರತ್ನಾಕರ ಮುಂತಾದವರು ತಮಗೆ ನೀಡಿದ ಪಾತ್ರಗಳ ಅಭಿನಯವನ್ನು ಬಹಳ ಚೆನ್ನಾಗಿ ಮಾಡಿದರು. ಇಲ್ಲಿ ಒಂದು ವಿಶೇಷವೆಂದರೆ ಕಾದಂಬರಿಯಲ್ಲಿ ಬರುವ ಹುಚ್ಚೀರನ ಪಾತ್ರ ಮಾಡುವ ಹುಡುಗ ಅರ್ಧಕ್ಕೆ ಕೈಕೊಟ್ಟಿದ್ದ! ಆದರೆ ನಾಟಕದ ಪ್ರಾಕ್ಟೀಸ್ ನೋಡುವ ಕುತೂಹಲದಿಂದ ಬಂದು ಸಹಾಯ ಮಾಡುತ್ತಿದ್ದ ಕಲಂದರ್ ಎಂಬ ಹಳೆಯ ದಢೂತಿ ವಿದ್ಯಾರ್ಥಿ ಕೊನೇ ಗಳಿಗೆಯಲ್ಲಿ ಹುಚ್ಚೀರ (ಮೂಗ)ನ ಪಾತ್ರದಲ್ಲಿ ಅದ್ಭುತವಾಗಿ ಅಭಿನಯಿಸಿದ್ದು 'ಶಬರಿ' ನಾಟಕದ ವಿಶೇಷ.

ಶಬರಿ ಹಬ್ಬಕ್ಕೆ ಮುಖ್ಯ ಅತಿಥಿಯಾಗಿ ಬಂದಿದ್ದ ಬರಗೂರು ರಾಮಚಂದ್ರಪ್ಪ "ರಾಮಾಯಣದಲ್ಲಿನ ಶಬರಿ ಕಾಯುತ್ತಾಳೆ, ನನ್ನ ಕಾದಂಬರಿಯಲ್ಲಿನ ಶಬರಿ ಕುದಿಯುತ್ತಾಳೆ" ಎಂದು ಹೇಳುವ ಮೂಲಕ ಇಡೀ ಕಾದಂಬರಿ ಒಳತುಡಿತ ಮತ್ತು ಉದ್ದೇಶವನ್ನು ನೇರವಾಗಿ ಸಮರ್ಥಿಸಿಕೊಳ್ಳುವುದರ ಜೊತೆಗೆ ನೊಂದವರ ಪರವಾಗಿ ಬರೆಯುವ ಲೇಖಕರ ಬರಹಗಳಿಗೆ ಕಲಾತ್ಮಕತೆ ಕೊರತೆಯ ಆರೋಪವನ್ನು ಹೊರಿಸಿ ಜನಪರ ಚಿಂತನೆಗಳನ್ನು ಅಲ್ಲಗಳೆಯುವ ವಿಮರ್ಶಕರ ಕುರಿತು ಮಾರ್ಮಿಕವಾಗಿ ಮಾತನಾಡುತ್ತಾ 'ಶಬರಿ ಹಬ್ಬ'ದ ಇಡೀ ಕಾರ್ಯಕ್ರಮ ಶಬರೀಕರಣಗೊಂಡಿದೆ ಎಂದು ಹೇಳಿದರು.

'ಶಬರಿ ಹಬ್ಬ'ದ ಇಡೀ ಕಾರ್ಯಕ್ರಮದ ಯೋಜನೆ ಮತ್ತು ವಿಧಾನಗಳನ್ನು ರೂಪಿಸಿ ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಲು ಶ್ರಮಿಸಿದ್ದು, ಬಹಳ ಮುಖ್ಯವಾಗಿ ಈ ಕಾಲೇಜಿನ ಕನ್ನಡ ವಿಭಾಗದ ಉಪನ್ಯಾಸಕರಾದ ಮಲ್ಲಿಕಾರ್ಜುನ ಕಲಮರಳಿ, ತಿಪ್ಪಯ್ಯ, ಮಂಜುನಾಥ, ವೆಂಕಟೇಶ್, ಲೋಕೇಶ್ ಮತ್ತು ಮುಂತಾದವರು. ಆದರೆ ಶಬರಿ ಹಬ್ಬ ಕೇವಲ ಕನ್ನಡ ವಿಭಾಗಕ್ಕೆ ಮಾತ್ರ ಹಬ್ಬವಾಗಿರಲಿಲ್ಲ, ಕಾಲೇಜಿನ ಎಲ್ಲ ವಿಭಾಗದ ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳಿಗೂ ಇದು ಹಬ್ಬವಾಗಿದ್ದರಿಂದ ಎಲ್ಲರೂ ಈ ಕಾರ್ಯಕ್ರಮ ಯಶಸ್ವಿಯಾಗಲು ದುಡಿದರು. ಅದರಲ್ಲೂ ಕಾಲೇಜಿನ ಪ್ರಾಚಾರ್ಯರಾದ ಸಿ.ಕೆ. ಮಹೇಶ್ವರಪ್ಪ ಈ ಕಾರ್ಯಕ್ರಮ ಯಶಸ್ವಿಯಾಗಲು ವಿಶೇಷ ಶ್ರಮ ವಹಿಸಿದರು.


ಪಂಚಾಕ್ಷರಿ ಗವಾಯಿಗಳ ಶಾಖಾ ಮಠದ ಬಾಡಾಕ್ರಾಸಿನ ವೀರೇಶ್ವರ ಪುಣ್ಯಾಶ್ರಮದ ಅಂಧ ಮಕ್ಕಳು ಶಬರಿ ನಾಟಕದ ಕುರಿತ ಹಾಡುಗಳನ್ನು ಬಹಳ ಚನ್ನಾಗಿ ಹಾಡಿ ಕುದಿಯುವ ಶಬರಿಗೊಂದು ಬಣ್ಣದ ಗರಿಯನ್ನು ನೀಡಿದರು.

■ ಚಂದ್ರಶೇಖರ ತೋರಣಘಟ್ಟ

ಮಂಗನ ಕೈಗೆ ಮಾಣಿಕ್ಯ ಕೊಡಬೇಕಾ?

ನ. 7ರ 'ಕಂಡ ಹಾಗೆ'ಯಲ್ಲಿ ರಾಜ್ಯದ ರಾಜಕೀಯ ವಿದ್ಯಮಾನವನ್ನು ವಿವರಿಸುತ್ತಾ ಅದಕ್ಕೆ ಕಾರಣರಾದ ಬಿಜೆಪಿ ಹಾಗು ಜೆಡಿಎಸ್‌ನ್ನು 'ರಿಪೇರಿ ಮಾಡಲಾಗದ್ದು' ಎಂಬರ್ಥದಲ್ಲಿ ನಾಯಿಬಾಲಕ್ಕೆ ಹೋಲಿಸಿದ್ದೀರಿ. ಆದರೆ ತಮಾಷೆಯೆಂದರೆ ಅವುಗಳ ಸಿದ್ಧಾಂತಗಳೂ ಕೂಡ ಇನ್ನೊಂದರ್ಥದಲ್ಲಿ ಇದೇ 'ನಾಯಿ ಬಾಲ'ದ ಉಪಮೆಗೆ ಸರಿಯಾಗಿ ಹೊಂದುತ್ತವೆ.

ಅವಿದ್ಯಾವಂತನ ಬದುಕು ಅರ್ಥಹೀನ ಎನ್ನುವ ಸುಭಾಷಿತವೊಂದು ಹೀಗಿದೆ- "ಶುನಃ ಪುಚ್ಛಮವ ವ್ಯರ್ಥಂ ಜೀವಿತಂ ವಿದ್ಯಯಾವಿನಾ, ನ ಗುಹ್ಯಗೋಪನೇ ಶಕ್ತಂನ ದಂಶ ನಿವಾರಣೇ". ಅಂದರೆ ಈ ನಾಯಿಗೆ ಇಷ್ಟು ದೊಡ್ಡ ಬಾಲವಿದ್ದರೂ ಇತರ ಪ್ರಾಣಿಗಳ ಹಾಗೆ ಅದು ತನ್ನ 'ಮಾನ' ಮುಚ್ಚಿಕೊಳ್ಳಲಾಗಲೀ, ಕಚ್ಚಲು ಬರುವ ನೊಣ-ಸೊಳ್ಳೆಗಳನ್ನು ಓಡಿಸಲಾಗಲೀ ಪ್ರಯೋಜನಕ್ಕೆ ಬಾರದೇ ಇದ್ದೂ ಇರದಂತೆ ನಿರರ್ಥಕ (ಅವಿದ್ಯಾವಂತನ ಬದುಕೂ ಸಹ) ಎನ್ನುತ್ತದೆ. ಇದನ್ನೇ ಸ್ವಯಂ ಘೋಷಿತ ದೇಶಭಕ್ತರ ಹಾಗು ಜಾತ್ಯತೀತರ ಪಕ್ಷಗಳಿಗೆ ಹೋಲಿಸಿ ನೋಡಿದರೆ ಅವುಗಳ ಸಿದ್ಧಾಂತಗಳೂ ಕೂಡ ಈ ಸುಭಾಷಿತ ಸಾರುವಂತೆ ಇದ್ದೂ ಉಪಯೋಗಕ್ಕೆ ಬಾರದ ನಾಯಿಬಾಲದಂತೆಯೇ ಇರುವುದು ಗೋಚರಿಸುತ್ತದೆ. ಒಟ್ಟಾರೆ ಈ ಡೊಂಕುಬಾಲದ ನಾಯಕರು ಹಾಗು ಅವರ ನಾಯಿಬಾಲದಂತಿರುವ ಸಿದ್ಧಾಂತಗಳಿಂದಾಗಿ ಈ ನಮ್ಮ ರಾಜ್ಯೋತ್ಸವದ ಶುಭ ಸಂದರ್ಭದಲ್ಲಿ ಇವರುಗಳು ಕರ್ನಾಟಕದ 'ಮಾನ'ವನ್ನು 'ಬಜಾರ'ದ ದರ್ಜೆಗೆ ಸೇರಿಸಿ ಹರಾಜು ಕೂಗುತ್ತಿರುವುದು ಇಲ್ಲಿನ 5.5 ಕೋಟಿ ಜನರ ದೌರ್ಭಾಗ್ಯವಲ್ಲದೇ ಮತ್ತೇನು?



ರಾಜ್ಯವಿಡೀ ಈತನನ್ನು ಸಂ[illegible] ಬಣ್ಣಗಳಿಂದ ತುಂಬಿದೆಯೇನೋ ಎಂಬಂತೆ ಮಾ[illegible]ದರೆ "ಐದೂವರೆ ಕೋಟಿ ಜನತೆ ನನ್ನೊಂದಿಗಿದೆ" ಎನ್ನುವ ಯಡ್ಯೂರಿಗೆ ಕಳೆದ ಬಜೆಟ್ ಸಮಯದಲ್ಲಿ ಈ ಜನಸಾಮಾನ್ಯರ ನೆನಪಾಗಲಿಲ್ಲ. ಯಾವುದೇ ಮುಜುಗರವಿಲ್ಲದೇ ಕೋಟಿಗಟ್ಟಲೆ ಹಣವನ್ನು ಮೈಗಳ್ಳರ ಮಠಕ್ಕೆ ಸುರಿದು ಬಂದ ಯಡ್ಯೂರಪ್ಪ, ಈಗ ಈತ ಅನುಭವಿಸುತ್ತಿರುವ ಸಂಕಷ್ಟದ ಸಮಯದಲ್ಲಿ ಆತನಿಂದ ದುಡ್ಡು ಕಿತ್ತಿದ್ದ ಹೊಸನಗರದ ಸ್ವಾಮಿ ಕಾಟಾಚಾರಕ್ಕೂ ಸ್ಪಂದಿಸದೇ ಇರುವುದು ಮಾತ್ರ ತಮಾಷೆಯಾಗಿ ತೋರುತ್ತದೆ. ಈತ ಒಂದು ವೇಳೆ ಮುಖ್ಯಮಂತ್ರಿಯಾದರೆ "ಮಂಗನ ಕೈಯಲ್ಲಿ ಮಾಣಿಕ್ಯ" ಕೊಟ್ಟಂತೆ ಇಡೀ ಕರ್ನಾಟಕವನ್ನು ಮೈಗಳ್ಳರ ಮಠಕ್ಕೆ ಅಡ ಇಡುವುದು ಖಂಡಿತ.

-ರವಿ ಪೂತ್ತೂರ್,
ದಕ್ಷಿಣ ಕನ್ನಡ

ಒಂದೆರಡು ತಿಂಗಳ ಹಿಂದಿನ ವಿಷಯ. ಕೇರಳದ ಲೋಕೋಪಯೋಗಿ ಮಂತ್ರಿಯೊಬ್ಬನ ಭೂಮಿ ಅವ್ಯವಹಾರದ ವಿಷಯವನ್ನು ಯಾವುದೋ ಒಂದು ಸಣ್ಣ ಪತ್ರಿಕೆ ಬಯಲಿಗೆ ತಂದಿತು. ಅಬ್ಬಾ! ನಂತರ ಅಲ್ಲಿ ನಡೆದ ಬೆಳವಣಿಗೆಗಳನ್ನು ನೋಡಬೇಕಿತ್ತು, ಬೇರೆ ವಿಧಿಯಿಲ್ಲದೆ ಆ ಮಂತ್ರಿಯ ಮಂತ್ರಿಸ್ಥಾನ ಕೂಡಾ ತಪ್ಪಿಹೋಯಿತು. ನಮ್ಮ ರಾಜ್ಯದ ಜನಪ್ರತಿನಿಧಿಗಳನ್ನು ನೋಡಿದರೆ ಆ ಮಂತ್ರಿಯ ಅವ್ಯವಹಾರ ಬರೇ 'ಸಿಲ್ಲಿ'. ಆದರೇನು? ಅಲ್ಲಿ ಪ್ರತಿಪಕ್ಷ ಅದನ್ನೇ 'ಫೋಕಸ್' ಮಾಡಿ ತನ್ನ ಕೆಲಸವನ್ನು ಸಮರ್ಥವಾಗಿ ನಿಭಾಯಿಸಿತು. ಆದರೆ ನಮ್ಮ ಪ್ರತಿಪಕ್ಷಗಳಿಗೆ ಅಂಥಾ [illegible] ಬೇಕಲ್ಲ.

ನಾನು ಹೇಳಹೊರಟಿದ್ದು ಕಳೆದ ಸಂಚಿಕೆಯಲ್ಲಿ ಪ್ರಕಟಗೊಂಡ ಸುದ್ದಿಯ ಕುರಿತು. 'ಲಂಕೇಶ್'ವಾರ ಪತ್ರಿಕೆ ಆಡಳಿತಾರೂಢರ ಹಲವಾರು ಅವ್ಯವಹಾರಗಳನ್ನು ಬಯಲಿಗೆಳೆಯಿತೆಂದೂ, ಅದರ ಪ್ರತಿಗಳನ್ನು ಹಿಡಕೊಂಡು ಹೋಗಿ ಪ್ರತಿಪಕ್ಷದವರು ಸುಮ್ಮನಿದ್ದರೆಂದೂ ಹೇಳಿದ್ದೀರಿ. ಅಲ್ಲ, ಕಾಂಗ್ರೆಸ್‌ನವರು ಅದರ ಬಗೆಗೆ ಕೋಲಾಹಲವೆಬ್ಬಿಸಿದರೆ ಅವರ ಪಾಲು ದಕ್ಕುತ್ತದೇನ್ರಿ? ಎಲ್ಲಾನೂ ಒಂದಕ್ಕೊಂದು 'ಲಿಂಕ್' ಇಟ್ಕೊಂಡೇ ಮಾಡ್ತಾರೆ. ನಾವು ಸುಮ್ನೆ ಬಾಯಿ ಬಡ್ಕೋಬೇಕು.

-ಅಶ್ರಫ್ ಅಹಮದ್,
ಜೇರ್‍ಮ್ಯಖಿ, ಎಲಿಮಲೆ

ಹೊಗಳಿಕೆ / ತೆಗಳಿಕೆ

ಕಳೆದ ಸಂಚಿಕೆಯಲ್ಲಿ ಯಡ್ಯೂರಿಗೆ ಮತ್ತು ಕುಮಾರಸ್ವಾಮಿಯವರಿಗೆ ಉತ್ತರಿಸಲು 21 ಪ್ರಶ್ನೆಗಳನ್ನು ಕೇಳಿದ್ದೀರಿ. ಅದಕ್ಕೆ ಅವರು ಉತ್ತರಿಸಲಾರರು ಎಂದು ನಾನೇ ನನ್ನದೇ ಶೈಲಿಯಲ್ಲಿ ಉತ್ತರಿಸಿದ್ದೇನೆ. ಈ ರೀತಿ ಉತ್ತರಿಸಲು ನಿಮ್ಮ ಪತ್ರಿಕೆಯ ಬೋಧನೆಯೇ ಪ್ರಚೋದನೆ, ಪ್ರೇರಣೆ ಎನ್ನಬಹುದು ಹಾಗೂ ಸ್ವತಃ ನೀವೇ ಎಂದು ಹೇಳಬಹುದು.

1. ಖಂಡಿತವಾಗಿಯೂ ಅಧಿಕಾರದ ಆಸೆಯಿಂದಲೇ ಅವರ ಕಾಲಿಗೆ ಬಿದ್ದಿಲ್ಲ (ಲಕ್ಷಂ-ಭಕ್ಷಂ).
2. ಊರು ಭಂಗ ಮಾಡಿಕೊಂಡಿಲ್ಲ, ಊರುಗೋಲು ಮಾಡಿಕೊಂಡಿದ್ದೇವೆ.
3. ಬಿಜೆಪಿಯವರಷ್ಟು ತಪ್ಪಿತಸ್ಥರಲ್ಲ, ಸ್ವಲ್ಪ ಕಡಿಮೆ ಎಂದು ಹೇಳಬಹುದು.
4. ಅವಕಾಶವಾದಿ ರಾಜಕಾರಣದ ಮಾರ್ಗ.
5. ಅಕ್ರಮ [illegible]ಕ್ರಮದ ಬಗ್ಗೆ ಮನಸ್ಸಿದ್ದರೆ ಮಾರ್ಗವಿದೆ.
6. ಸಲಹ[illegible] ಉತ್ತರದಲ್ಲಿ ಯಾವುದೂ ಅಲ್ಲ (ಮೂರು [illegible]).
7. ನೀಡದಂತಾಗಿದೆಯಲ್ಲ... ನೀಡುವಂತಾಗಿದೆ.
8. ಅನ್ನಲು ಇನ್ನೇನಿಲ್ಲ, ತಿನ್ನಲು ಇದೆ?!
9. ಕಾದು ನೋಡಿ (ಚುಟುಕಾಗಿ ಹೇಳುವುದಾದರೆ ಸಮಂಜಸವಾಗಿರುತ್ತದೆ).
10. ಅದೊಂದು ಅವಕಾಶವಾದ ಧೋರಣೆ.
11. ಅದರ ಬಗ್ಗೆ ಏನನ್ನೂ ಹೇಳಲಿಚ್ಛಿಸುವುದಿಲ್ಲ.
12. ಕೇಸರೀಕರಣವನ್ನು ತಡೆಯುವುದೆಂತು (ಕೋಜಾಗಳಾಗಿರುವುದರಿಂದ). ಒಂದರ್ಥದಲ್ಲಿ ಸಹಭಾಗಿಗಳು ಎಂದು ತಿಳಿಯಿರಿ/ತಿಳಿಯಬೇಡಿ.
13. ಖಂಡಿತವಾಗಿಯೂ ಕುಮಾರಸ್ವಾಮಿಯೊಬ್ಬರೇ ಹೇಗಾಗುತ್ತಾರೆ, ಇತರರೂ ಅವರೊಂದಿಗಿದ್ದಾರೆ.
14. ಪವಿತ್ರಾಪವಿತ್ರತೆಗಳ ಮಿಶ್ರದಂತೆ ಕಾಣಿಸುತ್ತಾರೆ.
15. ಸಿಬಿಐ ತನಿಖೆಯ ಅಗತ್ಯವಿಲ್ಲ. ರಾಜ್ಯ ಸರ್ಕಾರವೇ ನೋಡಿಕೊಳ್ಳುತ್ತದೆ.
16. ಸಮಯಸಾಧಕತನವೆನಿಸುತ್ತದೆ.
17. ಒಪ್ಪಂದವಿದೆ ಕಡ್ಡಾಯವಿಲ್ಲ. (ಬಯಲಿಗೆ ಬಿದ್ದಾಗ ಬಹಿರಂಗಪಡಿಸಬಹುದು).
18. ಮೌಲ್ಯ ಬೆಲೆ ಕಟ್ಟಲಾರದಷ್ಟು ಅತೀತ. (ಸ್ವಭಕ್ಷ ಪ್ರೇರಣೆ).
19. ಮಠಮಾನ್ಯಗಳಿಗೆ ಕೊಡುವುದನ್ನು ಖಂಡಿತವಾಗಿಯೂ ಸಹಿಸಿಕೊಂಡಿರಬೇಕಾದ ಅನಿವಾರ್ಯತೆ ಇದೆ.
20. ಜನದ್ರೋಹವೂ ಅಲ್ಲ, ವಚನಭ್ರಷ್ಟತೆಯೂ ಅಲ್ಲ, ಇವರಿಗೆ ಮತ ಕೊಟ್ಟವನು ಕೋಡಂಗಿ, ಪಡೆದು ರಾಜ್ಯಕ್ಕೆ ಭಾರವಾಗಿರುವವರನ್ನು ಕೋಟ್ಯಾಧಿಪತಿಗಳನ್ನಾಗಿಸುವುದು.

-ನಿಸರ್ಗ,
ಚಿಕ್ಕಮಗಳೂರು



ಎಲ್ಲರನ್ನು ಮೆಚ್ಚಿಸಿರುವ 'ಮಿಲನ'

'ಮಿಲನ' ಚಿತ್ರ ಮೂವತ್ತೈದು ಕೇಂದ್ರಗಳಲ್ಲಿ ಯಶಸ್ವಿ 50 ದಿನಗಳನ್ನು ಪೂರೈಸಿದೆ. ಇದರರ್ಥ ರಾಜ್ಯದ ಬೇರೆ ಬೇರೆ ಕ್ಷೇತ್ರಗಳಲ್ಲಿನ ಜನಕ್ಕೆ ಇದು ಇಷ್ಟವಾಗಿದೆ ಎಂದು. ಇದನ್ನ ಯಾಕೆ ಹೇಳಬೇಕಿದೆ ಎಂದರೆ ಇತ್ತೀಚಿಗೆ ಒಂದು ಚಿತ್ರ ಬೆಂಗಳೂರಿನಲ್ಲಿ ಓಡಿದರೆ, ಅದು ಮಂಗಳೂರಿನಲ್ಲಿ ಮುಗ್ಗರಿಸುತ್ತದೆ; ಹುಬ್ಬಳ್ಳಿಯಲ್ಲಿ ಚೆನ್ನಾಗಿ ಪ್ರದರ್ಶನಗೊಂಡರೆ, ಮಂಡ್ಯದಲ್ಲಿ ಮಕಾಡೆ ಮಲಗುತ್ತದೆ. ಈ ಟ್ರೆಂಡನ್ನು ಕಂಡು ಸಮಸ್ತ ಕರ್ನಾಟಕದ ಜನರು ಇಷ್ಟಪಡುವಂತಹ ಚಿತ್ರ ತೆಗೆಯುವುದು ಹೇಗೆ? ಎಂದು ನಿರ್ಮಾಪಕರು ಅಪಸ್ವರ ಎತ್ತುವುದು ಮಾಮೂಲಿಯಾಗಿತ್ತು, ಅಂತಹವರಿಗೆ 'ಮಿಲನ' ಒಂದು ಮಾದರಿಯಾಗಿರಬಹುದೇ ಎಂಬ ವಿಷಯವನ್ನು ಈಗ ಚರ್ಚಿಸಬೇಕಿದೆ.


ಪುನೀತ್ ರಾಜ್‌ಕುಮಾರ್ ಪಾಲಿಗೂ ಇದೊಂದು ವಿಭಿನ್ನ ಚಿತ್ರ ಎನ್ನಬಹುದು. ಯಾಕೆಂದರೆ 'ಮಿಲನ'ಕ್ಕಿಂತ ಮೊದಲು ಬಹುತೇಕ ಎಲ್ಲ ಚಿತ್ರಗಳಲ್ಲಿ ಪುನೀತ್ ಹೀಮ್ಯಾನ್ ಥರ ಡಿಶುಂ ಡಿಶುಂ ದೃಶ್ಯಗಳಲ್ಲೇ ಮಿಂಚುತ್ತಿದ್ದರು. ಅಥವಾ ಅದೊಂದು ಮಾಮೂಲಿ ಪ್ರೇಮಕಥೆಯಾಗಿ ಕೊನೆಯಲ್ಲಿ ಮದುವೆಯಲ್ಲಿ ಮುಗಿಯುತ್ತಿತ್ತು. ಈ ಚಿತ್ರದಲ್ಲಿ ಮೊದಲ ಬಾರಿಗೆ ಮದುವೆಯೊಂದಿಗೇ ಚಿತ್ರ ಆರಂಭವಾಗುತ್ತದೆ. ಹೀಗಾಗಿ ಪುನೀತ್ ಚಿತ್ರಗಳನ್ನು ನೋಡಿ ಎಂಜಾಯ್ ಮಾಡುವ ಪಡ್ಡೆ ಹುಡುಗರಿಗಿಂತ ಈ ಚಿತ್ರವನ್ನು ಮಹಿಳಾ ಪ್ರೇಕ್ಷಕರೇ ಹೆಚ್ಚಾಗಿ ನೋಡಿ ಆನಂದಿಸಿದ್ದಾರೆ.

ಮತ್ತೊಬ್ಬ ರಾಜಕಾರಣಿಯ ಮಗನ ಎಂಟ್ರಿ

ಕೆಲ ವರ್ಷಗಳ ಹಿಂದೆ ಮಹಾರಾಷ್ಟ್ರದ ನಾಯಕ ವಿಲಾಸ್‌ರಾವ್ ದೇಶ್‌ಮುಖ್‌ರವರ ಪುತ್ರ ರಿತೇಶ್ ದೇಶ್‌ಮುಖ್ ಹಿಂದಿ ಚಿತ್ರರಂಗಕ್ಕೆ ಕಾಲಿಟ್ಟಿದ್ದ. ಆಗ ಅವನ ತಂದೆ ಆ ರಾಜ್ಯದ ಮುಖ್ಯಮಂತ್ರಿಯಾಗಿದ್ದರಿಂದ ಆತನಿಗೆ ದೊಡ್ಡ ಸ್ವಾಗತ ಸಿಕ್ಕಿತ್ತು, ಆದರೆ ಈಗ ಅವನ ಅಪ್ಪ ಮುಖ್ಯಮಂತ್ರಿಯಾಗಿ ಉಳಿದಿಲ್ಲ ಆದ್ದರಿಂದ ನಟನಾಗಿ ಈತನ ವೃತ್ತಿ ಬದುಕು ಮೂರಕ್ಕೂ ಏರಿಲ್ಲ!

ಈಗ ರಾಮ್‌ವಿಲಾಸ್ ಪಾಸ್ವಾನ್‌ರ ಪುತ್ರ ಚಿರಾಗ್ ಪಾಸ್ವಾನ್ ಕೂಡ ತನ್ನ ಅಪ್ಪನ ಪ್ರಭಾವವನ್ನು ಉಪಯೋಗಿಸಿಕೊಂಡು ಬಾಲಿವುಡ್‌ನಲ್ಲಿ ತನ್ನ ಅದೃಷ್ಟವನ್ನು ಪರೀಕ್ಷಿಸಲು ಹೊರಟಿದ್ದಾನೆ. ಮೊನ್ನೆ ಈ "ಹೊಸ ಯುವ ನಟನ" ಪರಿಚಯವನ್ನು ಸಿನಿಮಾ ಪತ್ರಕರ್ತರಿಗೆ ಮಾಡಲಾಯಿತು. ಆದರೆ ಅದು ಎಂತಹ ವಿಚಿತ್ರ ಸಂದರ್ಭವಾಗಿತ್ತೆಂದರೆ, ಆತ ನಟಿಸಲಿರುವ ಸಿನಿಮಾದ ಕತೆ, ಸಂಭಾಷಣೆ, ನಿರ್ದೇಶಕ, ನಾಯಕ ನಟಿ, ಇಂತಹ ಯಾವ ವಿಷಯ ಕೂಡ ಇನ್ನೂ ನಿರ್ಧಾರವಾಗಿಲ್ಲ, ಆದರೂ ಆತ ಬಾಲಿವುಡ್‌ಅನ್ನು ಪ್ರವೇಶಿಸಿರುವ ನವ ನಟ ಎಂದು ಪರಿಚಯಿಸಲಾಯಿತು. ಅದಕ್ಕೆ ಇದ್ದ ಒಂದೇ ಒಂದು ಕಾರಣವೆಂದರೆ ಅಂದು ಆತನ 25ನೇ ಹುಟ್ಟುಹಬ್ಬವಾಗಿದ್ದು!

ಸಿನಿಮಾರಂಗದ ಭ್ರಮೆಗೂ, ರಾಜಕೀಯರಂಗದ ಸೊಕ್ಕಿಗೂ ಅಷ್ಟೇನು ವ್ಯತ್ಯಾಸವಿಲ್ಲ ಎಂಬುದನ್ನು ಈ ಪ್ರಕರಣ ಮತ್ತೆ ಸಾಬೀತು ಪಡಿಸಿತು.





ನಟರೋ, ದೊಂಬರಾಟದವರೋ?

ಭಾರತೀಯ ಜನತಾ ಪಕ್ಷದ ಪರ ವಹಿಸಿ ಮೊನ್ನೆ ರಾಜಭವನಕ್ಕೆ ಹಲವು ಸಿನಿಮಾ ನಟರು ದೌಡಾಯಿಸಿದರು. ಅದನ್ನು ನಮ್ಮ ಚಾನೆಲ್‌ನವರು ಫ್ಲಾಶ್ ನ್ಯೂಸ್ ಮತ್ತು ಬ್ರೇಕಿಂಗ್ ನ್ಯೂಸ್ ಎಂದು ಬಿಂಬಿಸಿದರು, ಇರಲಿ. ಯಡಿಯೂರಪ್ಪನವರಿಗೆ ಮುಖ್ಯಮಂತ್ರಿಯಾಗಲು ಅವಕಾಶ ನೀಡಬೇಕು ಎಂದು ಈ ತಾರೆಯರು ರಾಜ್ಯಪಾಲರನ್ನು ಮನವಿ ಮಾಡಿದರಂತೆ. ಹೀಗೆ ರಾಜ್ಯಪಾಲರನ್ನು ಭೇಟಿಯಾದ ಮಹಾ ನಟರು ಯಾರ್ಯಾರು ಗೊತ್ತೆ? ಟೆನ್ನಿಸ್ ಕೃಷ್ಣ, ಮಹೇಂದರ್, ಸಾಯಿಪ್ರಕಾಶ್, ಸಾಯಿಕುಮಾರ್, ಮುಖ್ಯಮಂತ್ರಿ ಚಂದ್ರು ಮತ್ತು ಶ್ರೀನಾಥ್.

ರಾಜಭವನದಲ್ಲಿ ನಡೆದದ್ದೇನೆಂದರೆ ಇವರೆಲ್ಲಾ ತಮ್ಮ ಮನವಿಯನ್ನು ಸಲ್ಲಿಸಲು ರಾಜ್ಯಪಾಲರ ಎದುರು ನಿಂತಾಗ ಸ್ವತಃ ರಾಜ್ಯಪಾಲರೇ "ನೀವೆಲ್ಲಾ ಆಮೇಲೆ ಬನ್ನಿ, ಈಗ ಕನ್ನಡ ಚಿತ್ರರಂಗದ ನಟರನ್ನು ನಾನು ಭೇಟಿಯಾಗಬೇಕಾಗಿದೆ" ಎಂದು ಹೇಳಿ ಇವರನ್ನು ಪಕ್ಕಕ್ಕೆ ನಿಲ್ಲಿಸಿದರಂತೆ. ಆಗ ಈ ನಟನಾಮಣಿಗಳಿಗೆ ಶಾಕೋ ಶಾಕು! ಈ ಟೆನ್ನಿಸ್ ಕೃಷ್ಣನ ಹಾವಭಾವ, ಚಂದ್ರು ಎಂಬ ಜೋಕರ್‌ನ ಮೂತಿ, ಶ್ರೀನಾಥ್‌ನ ವಿಗ್ಗು, ಸಾಯಿಕುಮಾರನ ಖಾಕಿ ಬಟ್ಟೆ, ಸಾಯಿಪ್ರಕಾಶ್ ಹಣೆಯಲ್ಲಿನ ವಿಭೂತಿ ಪಟ್ಟೆ ನೋಡಿ ಇವರೆಲ್ಲಾ ಯಾವುದೋ ದೊಂಬರಾಟದವರೆಂದು ಗವರ್ನರ್ ಭಾವಿಸಿದರೋ ಏನೋ?!

ಛೇ, ಕನ್ನಡ ಚಿತ್ರರಂಗಕ್ಕೆ ಇಂತಹ ಸ್ಥಿತಿ ಬರಬಾರದಿತ್ತು, ಅಲ್ವಾ?!



ಮೂಕ ಹಕ್ಕಿಯ 'ಸ್ನೇಹಾಂಜಲಿ'

ಹಿಂದೊಮ್ಮೆ ಎಸ್. ನಾರಾಯಣನ ಆಪ್ತ ವಲಯದಲ್ಲಿದ್ದ ಡಾ. ಸುರೇಶ್ ಶರ್ಮಾ ತಮ್ಮ ಮಾತು ಬಾರದ ಮಗ ಧ್ರುವನಿಗಾಗಿ 'ಸ್ನೇಹಾಂಜಲಿ' ಎಂಬ ಚಿತ್ರವನ್ನು ನಿರ್ಮಿಸಿದ್ದರು. ಈ ಚಿತ್ರಕ್ಕೆ ತೀರ್ಪುಗಾರರ ವಿಶೇಷ ರಾಜ್ಯ ಪ್ರಶಸ್ತಿಯೂ ದೊರಕಿತ್ತು.

ಸಿನಿಮಾ ಲೋಕದಲ್ಲಿ ಮೊದಲ ಬಾರಿಗೆ ಮಾತುಬಾರದ ಹಾಗೂ ಕಿವಿ ಕೇಳಿಸದ ಒಬ್ಬ ನಾಯಕ ನಟನಾಗಿರುವುದರಿಂದ ಈ ಚಿತ್ರ ಗಿನ್ನಿಸ್ ಅಥವಾ ಲಿಮ್ಕಾದಲ್ಲಿ ದಾಖಲೆಯಾಗುವ ಸಾಧ್ಯತೆಯಿದೆಯಂತೆ.

ಈ ಚಿತ್ರ ಮುಂದಿನ ವಾರ ತೆರೆಗೆ ಬರುತ್ತಿದೆ. ವಿಕಲಾಂಗಚೇತನರಿಗೆ ಮಾದರಿಯಾಗಿರುವ ಧ್ರುವನಿಗೆ ಒಳ್ಳೆಯದಾಗಲಿ ಎಂಬುದು ನಮ್ಮ ಹಾರೈಕೆ.

'ಎತ್ತರ'ದಲ್ಲಿರುವ ಕನ್ನಡ ಚಿತ್ರರಂಗ!

ಕನ್ನಡ ಚಿತ್ರರಂಗ ಇತ್ತೀಚಿಗೆ ಎಷ್ಟು ಎತ್ತರಕ್ಕೆ ಬೆಳೆದಿದೆ ಗೊತ್ತಾ? ಇದಕ್ಕೆ ಎರಡು ಉದಾಹರಣೆಗಳು ಇಲ್ಲಿವೆ.

ಮೊನ್ನೆ ಉಪೇಂದ್ರ ನಟಿಸುತ್ತಿರುವ 'ಬುದ್ಧಿವಂತ' ಮತ್ತು 'ಭೀಮೂಸ್ ಬ್ಯಾಂಗ್ ಬ್ಯಾಂಗ್ ಕಿಡ್ಸ್' ಚಿತ್ರದ ತಂಡಗಳು ಭಾರತದ ತುತ್ತತುದಿಯಲ್ಲಿರುವ ಕಾಶ್ಮೀರದಲ್ಲಿತ್ತು. ಮತ್ತೊಂದೆಡೆ 'ಗಂಗಾ ಕಾವೇರಿ' ಚಿತ್ರತಂಡ ಪ್ರಪಂಚದ ಅತ್ಯಂತ ಎತ್ತರದ ಪರ್ವತವಾದ ಮೌಂಟ್ ಎವರೆಸ್ಟ್‌ನ ತಪ್ಪಲಲ್ಲಿತ್ತು.

ಈಗ ನೀವೇ ಹೇಳಿ, ಕನ್ನಡ ಚಿತ್ರರಂಗ ಅತ್ಯಂತ ಎತ್ತರದಲ್ಲಿದೆ ತಾನೆ?


■ 'ಗೂಳಿ' ಚಿತ್ರದಲ್ಲಿ ಮಮತಾ ಮೋಹನ್‌ದಾಸ್

ಮತ್ತೆ ಬರಲಿದ್ದಾರೆ 'ಫ್ರೆಂಡ್ಸ್'

ನಾಲ್ಕು ವರ್ಷಗಳ ಹಿಂದೆ ಬಿಡುಗಡೆಯಾಗಿ ಹೊಸಬರ ಆಗಮನಕ್ಕೆ ನಾಂದಿ ಹಾಡಿದ್ದ 'ಫ್ರೆಂಡ್ಸ್' ಚಿತ್ರದ ಮುಂದುವರಿದ 'ಫ್ರೆಂಡ್ಸ್ ಭಾಗ-2' ಚಿತ್ರ ಸೆಟ್ಟೇರುತ್ತಿದೆ.

'ಫ್ರೆಂಡ್ಸ್' ಚಿತ್ರದಲ್ಲಿ ನಟಿಸಿದ್ದ ವಾಸು, ಶರಣ್, ಮಾಸ್ಟರ್ ಆನಂದ್, ಹರಿ ಎಲ್ಲರೂ ಅವರವರ ಪಾತ್ರಗಳನ್ನು ಮುಂದುವರಿಸಲಿದ್ದಾರೆ. ಸಾ.ರಾ. ಗೋವಿಂದು, ಓಂಪ್ರಕಾಶ್ ಜೊತೆಯಲ್ಲೆಲ್ಲಾ ನಾಯಕಿಯಾಗಿ ನಟಿಸಿ ಮಂಗಮಾಯವಾಗಿದ್ದ ಹೃತಿಕಾ ಕೂಡ ಈ ಚಿತ್ರಕ್ಕಾಗಿ ಪುನರಾಗಮನವಾಗುತ್ತಿದ್ದಾಳೆ.

ಒಂದೇ ಒಂದು ಬದಲಾವಣೆಯೆಂದರೆ 'ಫ್ರೆಂಡ್ಸ್'ನ ನಿರ್ದೇಶಕ ಎಂ.ಡಿ. ಶ್ರೀಧರ್ ಜಾಗಕ್ಕೆ ಕಳೆದ 23 ವರ್ಷಗಳಿಂದ ಪ್ರೊಡಕ್ಷನ್ ಮ್ಯಾನೇಜರ್ ಆಗಿ ದುಡಿದಿರುವ ಶಾಂತಕುಮಾರ್ ಎಂಬ ಹೊಸಬರು ಬರಲಿದ್ದಾರೆ.



RANJANE BODHANE PRACHODANE LANKESH, Kannada Weekly Price Rs. 10/- 14-11-2007 RNI No. KARKAN2005/14648 Regd.No.KA/RNP/BGS/2036/2008-10



ಜೋಕೆ, ನೀನು ಬಳ್ಳಿಯ ಮಿಂಚಲ್ಲಾ

'ಮುಂಗಾರು ಮಳೆ' ಯಿಂದ ಮಿಂಚಿದ ಪೂಜಾ ಗಾಂಧಿ ಸದ್ಯದಲ್ಲೇ ನಾಯಕಿ ಸ್ಥಾನದಿಂದ ಐಟಂ ಸಾಂಗ್ ನೃತ್ಯಗಾರ್ತಿಯಾಗಿ ಹಿಂಬಡ್ತಿ ಪಡೆಯುವ ಅಪಾಯದಲ್ಲಿದ್ದಾಳೆ.


ಇತ್ತೀಚೆಗೆ ಬಿಡುಗಡೆಗೊಂಡ 'ಮಿಲನ'ದಲ್ಲಿ ಈಕೆಯದು ಅತಿಥಿ ಪಾತ್ರ. ಈಕೆಗೆ ಅದರಲ್ಲೊಂದು ಡ್ಯಾನ್ಸ್ ಕೂಡಾ ಇತ್ತು. ಅದಾದ ನಂತರ ಮತ್ತೆ ಪುನೀತ್ ಜೊತೆ 'ಬಿಂದಾಸ್'ನಲ್ಲೂ ಈಕೆ ನಟಿಸುತ್ತಿದ್ದಾಳಾದರೂ ಅದರಲ್ಲೂ ಇಂತಹದ್ದೇ ಪುಟ್ಟ ಪಾತ್ರ ಮಾತ್ರವಿದೆ ಎಂಬ ಸುದ್ದಿ ಕೇಳಿಬರುತ್ತಿದೆ. ಈ ಸುದ್ದಿಯ ಬೆನ್ನಲ್ಲೇ ಈಕೆ ಕಾಶ್ಮೀರಕ್ಕೆ ಹೋಗಿ ಉಪೇಂದ್ರ ಜೊತೆ 'ಬುದ್ಧಿವಂತ' ಚಿತ್ರಕ್ಕಾಗಿ ಒಂದು ಹಾಡಲ್ಲಿ ಕುಣಿದು ಬಂದಿದ್ದಾಳೆ. ಇದು ಹೀಗೇ ಮುಂದುವರಿದರೆ ಈಕೆ ದೊಡ್ಡ ನಟರ ಚಿತ್ರಗಳಲ್ಲಿ ಹಾಡಿ ಕುಣಿಯುವ ಬೊಂಬೆಯಾಗುವ ಸಾಧ್ಯತೆಯೇ ಹೆಚ್ಚು. ಆದರೂ ಈ ಬಗ್ಗೆ ಆಕೆಗೆ ಯಾವುದೇ ಕಹಿ ಅನುಭವವಿಲ್ಲ. ತನಗೆ ಸಿಕ್ಕಿದ ಪಾತ್ರವನ್ನು ಅತ್ಯಂತ ಪ್ರಾಮಾಣಿಕವಾಗಿ ನಿರ್ವಹಿಸುವ ಈಕೆ ಎಲ್ಲ ನಿರ್ಮಾಪಕರಿಗೆ ಇಷ್ಟವಾಗುತ್ತಿದ್ದಾಳೆ.



ಕಿರುತೆರೆಗೆ ಸ್ಟಾರ್‌ಗಳ ಲಗ್ಗೆ









ಹಿಂದೊಂದು ಕಾಲವಿತ್ತು, ಟೀವಿಗಳಲ್ಲಿ ಕಾಣಿಸಿಕೊಳ್ಳುವುದು ಅಥವಾ ಟೀವಿ ಕಾರ್ಯಕ್ರಮವನ್ನು ನಡೆಸಿಕೊಡುವುದು ತಮ್ಮ ಲೆವೆಲ್ಲಿಗೆ ಹೇಳಿಮಾಡಿಸಿದ್ದಲ್ಲ ಎಂಬ ಜಂಭ ಸಿನಿಮಾದವರಲ್ಲಿ ಇತ್ತು. ಆದರೆ ಈಗ ಕಾಲ ಬದಲಾಗಿದೆ. ಟೀವಿಯ ನಿರೂಪಣಾ ಕೆಲಸಕ್ಕಾಗಿ ಅನೇಕ ಸಿನಿಮಾದವರು' ಮುಗಿಬೀಳುತ್ತಿದ್ದಾರೆ.

ಕಸ್ತೂರಿ ಚಾನೆಲ್ ಅಂತೂ ಸಿನಿಮಾ ಜಗತ್ತಿನವರ ಎರಡನೆ ಮನೆ ಎಂಬಂತಾಗಿದೆ. ಆ ಚಾನೆಲ್‌ಅನ್ನು ಆನ್ ಮಾಡಿದರೆ ಸಾಕು ಒಂದೋ ಕಾಮಿದಿ ಟೈಮ್ ಗಣೇಶ್ ಥರ ಸ್ವಯಂ ಘೋಷಿತ ನವರಸ ನಾಯಕ ಜಗ್ಗೇಶ್ ಫೋನ್‌ಇನ್ ಕಾರ್ಯಕ್ರಮ ನಡೆಸುತ್ತಿರುತ್ತಾರೆ. ಇಲ್ಲವೆಂದರೆ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಚರ್ಚಾಕೂಟವನ್ನು ನಡೆಸುತ್ತಿರುತ್ತಾರೆ ಅಥವಾ 'ವಾಕ್ ದಿ ಟಾಕ್'ನಂತಹ ಕಾರ್ಯಕ್ರಮದಲ್ಲಿ ಸಂದರ್ಶಕರಾಗಿರುತ್ತಾರೆ. ಅದೇ ರೀತಿ ನಾಯಕನಟ ರಮೇಶ್ ಕೂಡ ಸ್ಟಾರ್ ಚಾನೆಲ್‌ನಲ್ಲಿನ 'ಕಾಫಿ ವಿತ್ ಕರಣ್' ತರಹದ ಕಾರ್ಯಕ್ರಮವನ್ನು ನಡೆಸಿಕೊಡುತ್ತಿರುತ್ತಾರೆ. ಇದರ ಬೆನ್ನಲ್ಲೇ ಇವರ ನಿರ್ದೇಶನದ ಒಂದು ಧಾರಾವಾಹಿ ಕೂಡ ಇದೇ ಚಾನೆಲ್‌ನಲ್ಲಿ ಬರುವ ಮಾತು ಕೇಳಿಬರುತ್ತಿದೆ. ಈ ಧಾರಾವಾಹಿಯಲ್ಲಿ ಅನಂತ್‌ನಾಗ್ ನಟಿಸಲಿದ್ದಾರಂತೆ.

ಇನ್ನೊಂದೆಡೆ ಝೀ ಟೀವಿಯಲ್ಲಿ ಮೋಹಕ ನಟಿ ಅನು ಪ್ರಭಾಕರ್ ಒಂದಲ್ಲಾ ಒಂದು ಕಾರ್ಯಕ್ರಮವನ್ನು ನಡೆಸಿಕೊಡುತ್ತಲೇ ಇದ್ದಾರೆ. ಅವರು ಇತ್ತೀಚೆಗೆ ಸಿನಿಮಾಕ್ಕಾಗಿ ಮುಖಕ್ಕೆ ಬಣ್ಣ ಹಚ್ಚಿದ್ದೇ ಕಡಿಮೆ. ಟೀವಿ ಬಗ್ಗೆ ಅಂತಹ ಕೀಳರಿಮೆಯನ್ನು ಹೊಂದಿಲ್ಲದ ತಾರಾ ಕೂಡಾ ಒಂದೆರಡು ಕಾರ್ಯಕ್ರಮ ನಿರ್ವಹಿಸಿದ್ದೂ ಉಂಟು. ಆದರೆ ಧಾರಾವಾಹಿಗಳಲ್ಲಿ ನಟಿಸಲು ಸಾಕಷ್ಟು ಬಾರಿ ನಿರಾಕರಿಸಿ ತನ್ನ ಲೆವೆಲ್ ತೋರಿಸಿದ್ದ ಉಮಾಶ್ರೀ ಈಗ ಮಾಜಿ ಶಾಸಕಿಯಾದ ನಂತರ ಟೀವಿ ನಿರೂಪಣೆಯನ್ನು ಮುಕ್ತ ಮನಸ್ಸಿನಿಂದ ಸ್ವಾಗತಿಸಿದಂತೆ ಕಾಣಿಸುತ್ತಿದೆ.

ಸಿನಿಮಾ ನಟರು ಟೀವಿಯಲ್ಲಿ ಕಾರ್ಯಕ್ರಮ ನಡೆಸಿಕೊಡುವುದು ತಪ್ಪೇನಲ್ಲ. ಆದರೆ ಒಂದು ಕಾಲದಲ್ಲಿ ಇವರುಗಳೇ ಟೀವಿಯನ್ನು ನಿರ್ಲಕ್ಷಿಸುತ್ತಿದ್ದರು ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ.



ಅದಕ್ಕಿಂತಲೂ ಮುಖ್ಯವಾದ ಸಂಗತಿಯೆಂದರೆ, ಟೀವಿ ನಿರೂಪಕನಾಗಿದ್ದ ಗಣೇಶ್ ಈಗ ಕನ್ನಡ ಚಿತ್ರರಂಗದ ಸೂಪರ್ ಸ್ಟಾರ್‌ಆಗಿ ಬೆಳೆದುನಿಂತಿದ್ದಾನೆ. ಇನ್ನೊಂದೆಡೆ ಮತ್ತೊಬ್ಬ ಟೀವಿ ನಿರೂಪಕ ಆನಂದ್ ಕೂಡಾ ಹೀರೋ ಆಗಿ ತನ್ನ ಅದೃಷ್ಟವನ್ನು ಪರೀಕ್ಷಿಸುತ್ತಿದ್ದಾನೆ. ಟೀವಿ ನಿರೂಪಕರು ಈ ಥರ ಬೆಳ್ಳಿತೆರೆಯಲ್ಲಿ ಗೆಲ್ಲುತ್ತಿರುವಾಗ ಚಿತ್ರರಂಗದ ಕಲಾವಿದರು ಟೀವಿಯತ್ತ ಸಾಗುತ್ತಿರುವುದು ಒಂದು ರೀತಿಯ ವಿಪರ್ಯಾಸವೇ ಸರಿ.



ಆದರೆ ಟೀವಿಯ ಇಮೇಜಿನಿಂದ ಸ್ಟಾರ್‌ಆಗಿ ಬೆಳೆದಂತೆ ಸಿನಿಮಾದವರ ಇಮೇಜ್‌ನಿಂದ ಅವರು ನಡೆಸಿಕೊಡುವ ಟೀವಿ ಕಾರ್ಯಕ್ರಮಕ್ಕೆ ಯಾವುದೇ ಕಳೆ ಬಂದಿಲ್ಲ ಎಂಬುದೇ ಮುಖ್ಯವಾದ ವಿಷಯ.

ಯಾಕಿಷ್ಟು ತಡ?







ಈ ಬಾರಿಯ ರಾಜ್ಯೋತ್ಸವ ಪ್ರಶಸ್ತಿಗಳು ಸಿನಿಮಾ ಕ್ಷೇತ್ರದವರಿಗಂತೂ ಒಂದಿಷ್ಟು ನೆಮ್ಮದಿ ತಂದಿದೆ. ಯಾಕೆಂದರೆ ಪಾರ್ವತಮ್ಮ ರಾಜ್‌ಕುಮಾರ್, ಅನಂತ್‌ನಾಗ್ ಮತ್ತು ಸುರೇಶ್ ಅರಸ್‌ರವರಿಗೆ ಎಂದೋ ಸಲ್ಲಬೇಕಿದ್ದ ಗೌರವ ಈಗಲಾದರೂ ಸಲ್ಲಿತಲ್ಲ ಎಂಬ ಕಾರಣಕ್ಕೆ!

ಕನ್ನಡ ಚಿತರಂಗ ಮಾತ್ರವಲ್ಲ, ಭಾರತ ಚಿತ್ರರಂಗ ಕಂಡಿರುವ ಅತ್ಯಂತ ಸೃಜನಶೀಲ ಮತ್ತು ಅಪರೂಪದ ನಟ ಅನಂತ್‌ನಾಗ್. ಹಾಗೆಯೇ ಪಾರ್ವತಮ್ಮ ರಾಜ್‌ಕುಮಾರ್‌ರವರು ಕನಿಷ್ಠ ಎರಡು ಡಜನ್ ಉತ್ತಮ ಚಿತ್ರಗಳನ್ನು ನಿರ್ಮಿಸಿದ್ದಾರೆ ಮಾತ್ರವಲ್ಲ, ನಟಸಾರ್ವಭೌಮ ರಾಜ್‌ಕುಮಾರ್‌ರವರ ವ್ಯಕ್ತಿತ್ವ ಮತ್ತು ಅವರ ಕೊಡುಗೆಯನ್ನು ರೂಪಿಸುವಲ್ಲಿಯೂ ಇವರ ಪಾತ್ರ ಮತ್ತು ತ್ಯಾಗ ದೊಡ್ಡದು. ಇನ್ನು ಸುರೇಶ್ ಅರಸ್ ಚಿತ್ರ ಸಂಕಲನದ ಕಲೆಯನ್ನೇ ವಿಸ್ತಾರಗೊಳಿಸಿದವರು, ಅದಕ್ಕೆ ತಾರ್ತಾವರ್ಚಸ್ಸು ತಂದವರು. ಪುಟ್ಟಣ್ಣರನ್ನೂ ಸೇರಿದಂತೆ ಹಲವಾರು ದೊಡ್ಡ ನಿರ್ದೇಶಕರ ಚಿತ್ರಗಳನ್ನು ಸಂಕಲನ ಮಾಡಿರುವ ಸುರೇಶ್ ಅರಸ್ ಈ ನಾಡು ಕಂಡಿರುವ ಶ್ರೇಷ್ಠ ಮತ್ತು ಕ್ರಿಯಾಶೀಲ ತಂತ್ರಜ್ಞ.

ಇವರೆಲ್ಲರಿಗೂ ನಮ್ಮ ಅಭಿನಂದನೆಗಳು.



ಮೀಟರ್ ಬದಲು ಮನಸ್ಸು

ನಮ್ಮಲ್ಲಿ ಕವಿಗಳಿದ್ದಾರೆ, ಕ್ಯಾಸೆಟ್ ಕವಿಗಳಿದ್ದಾರೆ ಮತ್ತು ಸಿನಿಮಾ ಕವಿಗಳಿದ್ದಾರೆ. ಮೊದಲಿನವರಿಗೆ ಅನುಭವ ಸ್ಫೂರ್ತಿಯಾದರೆ, ಎರಡನೆಯವರಿಗೆ ಜನಪದ ಸ್ಫೂರ್ತಿ, ಮೂರನೆಯವರಿಗೆ ಹಲವೊಮ್ಮೆ ಸಿನಿಮಾದ ನಟ, ಕೆಲವೊಮ್ಮೆ ಸಿನಿಮಾದ ಪ್ರಸಂಗ, ಇತ್ಯಾದಿ ಸ್ಫೂರ್ತಿಯಾಗುತ್ತವೆ.

ಆದರೆ ಸಾಹಿತ್ಯ ವಲಯದಿಂದ ಚಿತ್ರರಂಗಕ್ಕೆ ಜಂಪ್ ಮಾಡಿರುವ ಮತ್ತು ಇತ್ತೀಚೆಗೆ ಅಪಾರ ಯಶಸ್ಸನ್ನು ಕಂಡಿರುವ ಜಯಂತ್ ಕಾಯ್ಕಿಣಿಗೆ ಯಾವುದು ಸ್ಫೂರ್ತಿಯಾಯಿತು? ಖಂಡಿತವಾಗಿಯೂ 'ಮುಂಗಾರು ಮಳೆ' ಚಿತ್ರದ ಹಿರೋಯಿನ್ ಪೂಜಾ ಗಾಂಧಿಯಂತೂ ಅಲ್ಲ, ಯಾಕೆಂದರೆ ಅವರು ಮೊನ್ನೆ 'ಮಿಲನ' ಚಿತ್ರದ 50 ದಿನದ ಸಂತೋಷ ಕೂಟದಲ್ಲಿ ಪೂಜಾಳನ್ನು ಪ್ರಥಮ ಬಾರಿಗೆ ಭೇಟಿಯಾದರು. ಅಲ್ಲಿಯ ತನಕ ಅವರಿಬ್ಬರೂ ಮುಖಾಮುಖಿ ಭೇಟಿಯಾಗಿದ್ದೇ ಇಲ್ಲ.

ಜಯಂತ್ ಕಾಯ್ಕಿಣಿ ಹೇಳುವ ಪ್ರಕಾರ ಅವರು 'ಅನಿಸುತಿದೆ ಯಾಕೋ ಇಂದು' ಗೀತೆಯನ್ನು ಬರೆದು ಎಸ್‌ಎಮ್‌ಎಸ್ ಮೂಲಕ ಅಮೆರಿಕದಲ್ಲಿದ್ದ ಸಂಗೀತ ನಿರ್ದೇಶಕ ಮನೋಮೂರ್ತಿಯವರಿಗೆ ಕಳುಹಿಸಿದರಂತೆ. ಕಾಯ್ಕಿಣಿ ಲೇಖನಿಯಿಂದ ಹೊರ ಚಿಮ್ಮಿದ ಆ ಮನ ಮುಟ್ಟುವ ಸಾಲುಗಳಿಗೆ ಮೂರ್ತಿ ಕಿವಿಗಳಿಗೆ ಇಂಪಾದ ಸಂಗೀತವನ್ನು ಸಂಯೋಜಿಸಿದರು.



ಕೆಲವೇ ದಿನಗಳಲ್ಲಿ ಆ ಹಾಡು ಎಷ್ಟು ಜನಪ್ರಿಯವಾಯಿತೆಂದರೆ ಅದು ಇನ್ನು ಹಲವು ದಶಕಗಳ ಕಾಲ ಚಿತ್ರ ರಸಿಕರ ಮನಸ್ಸಿನಲ್ಲಿ ಖಂಡಿತವಾಗಿಯೂ ಉಳಿದಿರುತ್ತದೆ. ಇನ್ನು 'ಗೆಳೆಯ' ಚಿತ್ರದ 'ಈ ಸಂಜೆ ಯಾಕಾಗಿದೆ...' ಹಾಡಂತೂ ಎಲ್ಲರ ಬಾಯಲ್ಲೂ ಗುನುಗುನಿಸುತ್ತಿದೆ.

ಸೋಜಿಗದ ಸಂಗತಿ ಯಾವುದೆಂದರೆ ಈ ಹಾಡುಗಳನ್ನು ಬರೆಯುವ ಕೆಲಸವನ್ನು ಜಯಂತ್ ಅಷ್ಟೊಂದು ಇಷ್ಟಪಡುತ್ತಿಲ್ಲವಂತೆ. ಮುಖ್ಯವಾಗಿ ಅವರಿಗೆ ಸಂಗೀತ ನಿರ್ದೇಶಕರು ನೀಡುವ 'ಮೀಟರ್'ಗೆ ಬರೆಯುವ ಕಲೆ ಕರಗತವಾಗಿಲ್ಲವಂತೆ. ಹೀಗಾಗಿ ಅವರು ಮೀಟರ್ ಬದಲು ಭಾವನೆಗಳಿಗೆ ಒತ್ತು ನೀಡಿ ಹಾಡು ಬರೆಯುತ್ತಿದ್ದಾರಂತೆ.

ಆದರೂ ಜಯಂತ್ ಕಾಯ್ಕಿಣಿ ಸದ್ಯಕ್ಕೆ ಅತ್ಯಂತ ಬೇಡಿಕೆಯಲ್ಲಿರುವ ಗೀತರಚನೆಕಾರ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main